# ಕರ್ನಾಟಕ ವಿಕಾಸ

## Karnataka Vikas

ಸೆಪ್ಟೆಂಬರ್
September 2016




**ದಿನಾಂಕ: 20.08.2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು 'ನಮ್ಮ ಗ್ರಾಮ ನಮ್ಮ ಯೋಜನೆ' ಪುಸ್ತಕ ಬಿಡುಗಡೆ ಮಾಡುತ್ತಿರುವುದು.**

ದಿನಾಂಕ:09.08.2016 ರಂದು ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್
ಸಚಿವರು ನಮ್ಮ ಗ್ರಾಮ ನಮ್ಮ ಯೋಜನೆ ಕುರಿತು ಪತ್ರಿಕಾ ಗೋಷ್ಠಿ
ನಡೆಸುತ್ತಿರುವ ಛಾಯಾಚಿತ್ರಗಳು.





# ಕರ್ನಾಟಕ ವಿಕಾಸ


ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾಸ ಪತ್ರಿಕೆ

ಸೆಪ್ಟೆಂಬರ್ 2016
September 2016

ಸಂಪುಟ : 57
Volume : 57
ಸಂಚಿಕೆ : 10
Issue : 10

## ಈ ಸಂಚಿಕೆಯೊಳಗೆ


| | | |
|---|---|---|
| 5 | ಲೇಖನ | – ಡಾ|| ಟಿ.ವಿ. ಮೋಹನ್‌ದಾಸ್, ಭಾ.ಅ.ಸೇ.<br>– ಎಲ್. ಎಸ್. ದಿನೇಶ<br>– ಗುರುರಾಜ ಬ. ಕನ್ನೂರ<br>– ತುಕಾರಾಂ ರಾವ್ ಬಿ. ವಿ.<br>– ಬಂಡೆಪ್ಪ ತೇಲಿ |
| 19 | ಅಭಿವೃದ್ಧಿ ಅಧಿಕಾರಿಗಳ ಅಂಗಳದಿಂದ | – ಎಂ. ಸುಂದರ್ |
| 21 | ಚಿಂತನೆ | – ಪ್ರೊ. ಎ.ಎಚ್. ಮಾಸಾಪತಿ |
| 29 | ಯಶೋಗಾಥೆ | – ಡಿ. ವಿ. ಅಂಗೂರ<br>– ಮಂಜುಳಾ ಬಡಿಗೇರ್<br>– ಪಾಂಡುರಂಗ ಜಿ. |
| 39 | ಕವಿಯ(ಕ್ಷ)ಪ್ರಶ್ನೆ | – ಬಸವರಾಜ ಹೂಗಾರ |
| 40 | ಕಾವ್ಯ ವಿಕಾಸ | – ಶ್ರೀಕಾಂತ. ಹಾ. ಬಾಲೆಹೊಸೂರು |
| 41 | ಪಂಚತಂತ್ರ ವರದಿ | |
| 42 | ಸಕಾಲ ವರದಿ | |
| 43 | ಸುತ್ತೋಲೆ | |


ಪ್ರಕಾಶಕರು
**ಎಂ.ಕೆ.ಕೆಂಪೇಗೌಡ**
ನಿರ್ದೇಶಕರು(ಪಂ.ರಾಜ್) ಹಾಗೂ ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ

ಪ್ರಧಾನ ಸಂಪಾದಕರು
**ಬೂವನಹಳ್ಳಿ ನಾಗರಾಜ್**
ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ಹಾಗೂ ಸರ್ಕಾರದ ಪದನಿಮಿತ್ತ ಉಪ ಕಾರ್ಯದರ್ಶಿ

**ಮುಬಾರಕ್ ಅಹ್ಮದ್**
ಸಂಪಾದಕರು ಹಾಗೂ ಸಾರ್ವಜನಿಕ ಸಂಪರ್ಕಾಧಿಕಾರಿ

ಸಹಾಯಕ ಸಂಪಾದಕರು
**ಡಾ. ಎಂ.ಎಸ್. ಮಂಜುನಾಥ**
**ನಾಗರಾಜ್. ಬಿ. ವಾಗಾ**

ವ್ಯವಸ್ಥಾಪಕರು
**ಹೆಚ್.ಬಿ. ಗುರುಸ್ವಾಮಿ**

### ವಾರ್ಷಿಕ ಚಂದಾ

ವ್ಯಕ್ತಿಗಳಿಗೆ ರೂ . 100/–
ಸಂಸ್ಥೆಗಳಿಗೆ ರೂ. 120/–
ಬಿಡಿ ಪ್ರತಿ ರೂ. 10/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಸ್ವಷ್ಟ ಅಂಚೆ ವಿಳಾಸ ಪಿನ್ ಕೋಡ್‌ನೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.

### ಕಛೇರಿ ವಿಳಾಸ

ಸಂಪಾದಕರು ಕರ್ನಾಟಕ ವಿಕಾಸ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹು ಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : 080 – 22353857
www.rdpr.kar.nic.in
Email : kvrdpr@gmail.com

### ವಿಶೇಷ ಸೂಚನೆ

ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯವಲ್ಲ.

# ಪತ್ರಿಕೆಯ ಕುರಿತು ನಿಮ್ಮ ನುಡಿ




ಮಾನ್ಯರೆ,
ಗ್ರಾಮೀಣ ಜನರ ಅಚ್ಚು ಮೆಚ್ಚಿನ ಮಾಸ ಪತ್ರಿಕೆಯಾದ ಕರ್ನಾಟಕ ವಿಕಾಸ ಪತ್ರಿಕೆ ಬಳಗದವರಿಗೆ ಗಣೇಶ ಹಬ್ಬದ ಶುಭಾಷಯಗಳು. ಮಿತ್ರರೆ ಪತ್ರಿಕೆಯು ತುಂಬಾ ಸೊಗಸಾಗಿ ಪ್ರತಿ ತಿಂಗಳು ಮೂಡಿ ಬರುತ್ತಿದ್ದು ಪತ್ರಿಕೆಯಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನಗಳು, ಸುತ್ತೋಲೆಗಳು, ಪ್ರತಿಯೊಬ್ಬ ಓದುಗರಿಗೆ ಉಪಯುಕ್ತ ಮತ್ತು ತಿಳುವಳಿಕೆ ನೀಡುವ ವಿಷಯವಾಗಿವೆ. ಪತ್ರಿಕೆಯಲ್ಲಿ ಪ್ರಕಟವಾಗುವ ವಿಷಯಗಳು ಓದುಗರಿಗೆ ದಾರಿದೀಪವಾಗುವುದರ ಜೊತೆಗೆ ಮಾರ್ಗದರ್ಶನ ನೀಡುತ್ತಿವೆ.

**ಶ್ರೀ ನೀಲನಗೌಡ ಎಂ.ಪಾಟೀಲ,**
ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಭಾರತೀಯ ಕೃಷಿಕ ಸಮಾಜ,
ಸಾ॥ಸಾಸರವಾಡ, ತಾ॥ಶಿರಹಟ್ಟಿ, ಜಿ॥ಗದಗ–582112

ಆಗಸ್ಟ್ 2016ರ ಕರ್ನಾಟಕ ವಿಕಾಸ ಮಾಸ ಪತ್ರಿಕೆಯು ಉತ್ತಮ ಮಾಹಿತಿಯುಳ್ಳ ಒಳ್ಳೆಯ ಲೇಖನ, ಸುತ್ತೋಲೆ ಮತ್ತು ಯಶೋಗಾಥೆ ಮುಂತಾದವುಗಳನ್ನು ಓದುಗರಿಗೆ ಒದಗಿಸಿದ್ದು ಸಂತಸ ತಂದಿತು. ಶ್ರೀ ಬೂವನಹಳ್ಳಿ ನಾಗರಾಜ್‌ರವರ ಗ್ರಾಮ ಸ್ವರಾಜ್ಯ ಕರ್ನಾಟಕದಲ್ಲಿ ನನಸು ಒಂದು ಅವಲೋಕನ, ಆಡಳಿತ ಮತ್ತು ಅಭಿವೃದ್ಧಿ ಕುರಿತು ಮಹಾತ್ಮ ಗಾಂಧೀಜಿಯವರ ವಿಚಾರಗಳನ್ನು ಎಳೆಎಳೆಯಾಗಿ ವಿವರಿಸಿ ಹಳ್ಳಿಗಳ ಉದ್ಧಾರದ ಬಗ್ಗೆ ತಿಳಿಸಿದ್ದು ಅತ್ಯಂತ ಸೂಕ್ತವಾಗಿದೆ. ನಮ್ಮ ದೇಶ 70ನೇ ಸ್ವಾತಂತ್ರ್ಯ ದಿನವನ್ನು ಆಚರಿಸಿಕೊಂಡರೂ ಗಾಂಧೀಜಿಯವರ ಕನಸನ್ನು ನನಸಾಗಿಸುವಲ್ಲಿ ಆಮೆ ವೇಗದಲ್ಲಿ ಸಾಗುತ್ತಿರುವುದು ದುಃಖಕರ ಸಂಗತಿ. ಪಂಚಾಯತಿ ಪಿಡಿಓ, ಸೆಕ್ರೇಟರಿ ಮತ್ತು ದ್ವಿತೀಯ ಲೆಕ್ಕ ಸಹಾಯಕರು ಕಾರ್ಯಕ್ಷೇತ್ರದಲ್ಲಿ ವಾಸಿಸಲು ಸರಕಾರ ದಿಟ್ಟ ನಿರ್ಣಯ ಕೈಗೊಂಡಿದ್ದು ಸ್ವಾಗತಾರ್ಹ.

**ಶ್ರೀ ಕೊತ್ತಲ ಮಹದೇವಪ್ಪ,**
ಲೇಖಕ, ವಿನಾಯಕ ನಗರ, ಲಕ್ಷ್ಮೇಶ್ವರ, ಗದಗ 582116.

ಆಗಸ್ಟ್ 2016ರ ಕರ್ನಾಟಕ ವಿಕಾಸದಲ್ಲಿ ಮೂಡಿಬಂದ ನಲೆಜಲ ಕವನವು ತುಂಬಾ ಚೆನ್ನಾಗಿ ಮೂಡಿ ಬಂದಿದೆ. ಜಲ ಮತ್ತು ನೆಲ ಎಂಬ ಹೆಸರಿಟ್ಟು ಇವುಗಳ ಸಂಬಂದ ಅತ್ಯಂತ ನಿತ್ಯ. ನೀರಿಲ್ಲದೆ ಜೀವಿಗಳು ಗಿಡಮರಗಳು, ಮಾನವನು ಕೂಡ ಕ್ಷಣಿಕ ಕಾಲ ಇರಲಾರ. ಹಾಗೆಯೇ ನೀರಿನ ಬಗ್ಗೆ ಭೂಮಿಯ ಬಗ್ಗೆ ವಿಶ್ಲೇಷಿಸಿ ಇವುಗಳಿಗೆ ಅತ್ಯಂತ ಬೆಲೆ ಕೊಟ್ಟಾಗ ಮಾತ್ರ ಮಾನವನ ಜೀವ ಸಾರ್ಥಕ. ಬಾಟಲಿಯಲ್ಲಿ ನೀರು ಕೊಳ್ಳುವುದು ಮುಖ್ಯವಲ್ಲ ನೀರನ್ನು ಶೇಖರಿಸಿ ಇತರರಿಗೂ ದಾನ ಮಾಡುವುದು ಮುಖ್ಯ. ನೀರಿನಿಂದಲೇ ಪ್ರತಿಯೊಬ್ಬ ರೈತನ ಜೀವ, ಬೆಳೆ, ನೆಲೆ ಕಂಡು ಪ್ರಪಂಚಕ್ಕೆ ಆಹಾರ ಉತ್ಪಾದನೆಗೂ ಬೆಳೆಯಲು ಬೇಸಾಯಕ್ಕೆ ನೀರು ಅವಶ್ಯಕ. ಈ ಜಲ ಎಂಬುದನ್ನು ವಿವರಿಸಿ ಕವನ ಬರೆದ ಚಿದಾನಂದರವರಿಗೂ ಪ್ರಕಟಿಸಿದ ಕರ್ನಾಟಕ ವಿಕಾಸ ವರ್ಗದವರಿಗೂ ಧನ್ಯವಾದಗಳು.

**ಶ್ರೀ ಅಣ್ಣೂರು ಅಪ್ಪಾಜಿ ಎ.ಎಂ**
ಗ್ರಂಥಪಾಲಕರು, ಅಣ್ಣೂರು ಗ್ರಾಮ ಪಂಚಾಯತಿ,
ಭಾರತಿನಗರ, ಮದ್ದೂರು ತಾಲೂಕು, ಮಂಡ್ಯ ಜಿಲ್ಲೆ.

# ಹೂವಿನಹಿಪ್ಪರಗಿಯಲ್ಲಿ ಕಾನೂನು ಅರಿವು ನೆರವು ಕಾರ್ಯಕ್ರಮ

**ವರದಿ**



**ಗುರುರಾಜ ಬ. ಕನ್ನೂರ**

ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಹೂವಿನ ಹಿಪ್ಪರಗಿಯಲ್ಲಿ ಆಯೋಜಿಸಲಾಗಿದ್ದ ಕಾನೂನು ಅರಿವು - ನೆರವು ಕಾರ್ಯಕ್ರಮದ ವಿವರ.

ಅಭಿವೃದ್ಧಿ ಸಾಧಿಸಲು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದಕ್ಕಿಂತ ಪರಿಣಾಮಕಾರಿಯಾದ ಸಾಧನ ಮತ್ತೊಂದಿಲ್ಲ. ಇಂದು ಮಹಿಳೆಯರು ಎಲ್ಲ ರಂಗಗಳಲ್ಲಿ ಸಮಾನತೆ ಹುದ್ದೆ ಅಲಂಕರಿಸಿ ಅತ್ಯುನ್ನತ ಸಾಧನೆಗೈಯುತ್ತಿರುವುದು ಸಂತೋಷದ ವಿಷಯ ಎಂದು ಬಸವನಬಾಗೇವಾಡಿ ತಾಲ್ಲೂಕು ಹಿರಿಯ ಸಿವಿಲ್ ನ್ಯಾಯಾಧೀಶೆ ರೇಣುಕಾ ರಾಯ್ಕರರವರ ಅಭಿಪ್ರಾಯವಾಗಿದೆ.




ಅವರು ವಿಜಯಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಹೂವಿನಹಿಪ್ಪರಗಿಯಲ್ಲಿ ಅಗಷ್ಟ 19 ರಂದು ತಾಲ್ಲೂಕು ಕಾನೂನು ಸೇವಾ ಸಮಿತಿಯ ಸಹಹೋಗದಲ್ಲಿ ಸ್ಥಳೀಯ ಗ್ರಾಮಪಂಚಾಯತ್ ಏರ್ಪಡಿಸಿದ್ದ ಕಾನೂನು ಅರಿವು ನೆರವು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಪುರುಷ ಸಮಾಜ ಹೆಣ್ಣನ್ನು ಕೀಳಾಗಿ ಕಾಣುವುದು ಎಷ್ಟು ಸರಿ, ಸಮಾಜದಲ್ಲಿ ಹೆಣ್ಣಿನ ಸ್ಥಾನ ಎತ್ತರಿಸಲು ಮಹಿಳೆಯರಿಗಾಗಿಯೇ ಸಾಕಷ್ಟು ಕಾನೂನುಗಳು ಜಾರಿಯಲ್ಲಿದ್ದರೂ ಅವಳ ಮೇಲೆ ನಿತ್ಯ ಅನಾಚಾರದ ಕಾರ್ಯಗಳು ನಡೆಯುತ್ತಲೇ ಇವೆ. ಕಾನೂನು ಮುರಿಯುವುದನ್ನು ಪುರುಷರು ಕಲಿತುಬಿಟ್ಟಿದ್ದಾರೆ. ಪುರುಷ ಪ್ರದಾನ ಸಮಾಜದಲ್ಲಿ ಅವುಗಳ ಆಚರಣೆ, ಅನುಷ್ಠಾನ ಆಗದೇ ಮಹಿಳೆಯರು ಕಾನೂನನ್ನು ಅರಿತುಕೊಂಡು ಹಾಗೂ ನೆರವನ್ನು ಪಡೆದುಕೊಳ್ಳುವುದು

ಓಂ ನಗರ, ಬಸವನಬಾಗೇವಾಡಿ-586203, ವಿಜಯಪುರ ಜಿಲ್ಲೆ

ಬಹು ಅವಶ್ಯಕವಾಗಿದೆ. ಹೆಣ್ಣು ಎಂದು ತಾತ್ಸಾರ ಮನೋಭಾವನೆ ಬೇಡ. ಸಮಾಜದಲ್ಲಿ ಹೆಚ್ಚಿನ ಜವಾಬ್ದಾರಿ ಸ್ಥಾನ ಮಹಿಳೆಯರಿಗಿದೆ. ತಾಯಿ, ಹೆಂಡತಿ, ಸೊಸೆ ಹೆಣ್ಣಾಗಿ ಹುಟ್ಟುವ ಮಗಳು ಎಂದು ಕಡೆಗಣಿಸಬೇಡಿ. ಅದರಲ್ಲೂ ಪಟ್ಟಣ ಪ್ರದೇಶಗಳಲ್ಲಿ ಕಾಯಿದೆ ದುರುಪಯೋಗ



ವಾಗುತ್ತಿರುವುದು ಕಂಡು ಬರುತ್ತಿದೆ. ಕಾನೂನನ್ನು ಪಾಲನೆ ಮಾಡುತ್ತಿರುವವರ ಸಂಖ್ಯೆ ಗ್ರಾಮೀಣ ಪ್ರದೇಶಗಳಲ್ಲಿ ಹೆಚ್ಚು ಎಂದು ಹೇಳಬಹುದು.

ಇಂದು ಎಲ್ಲ ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳಾ ಜನಪ್ರತಿನಿಧಿಗಳ ಪಾಲು ಅರ್ಧದಷ್ಟಿದೆ. ಹೀಗಾಗಿ ತಮ್ಮ ಅಧಿಕಾರಾವಧಿಯಲ್ಲಿ ಸರಕಾರದಿಂದ ಮಹಿಳೆಯರಿಗೆ ಸಿಗುವ ಯೋಜನೆಗಳ ಕುರಿತಾಗಿ ಸಾರ್ವಜನಿಕರಿಗೆ ತಿಳಿಸಿದಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಅನುಕೂಲವಾಗುವುದು. ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಹೆಣ್ಣು ಮಕ್ಕಳು ಬಯಲು ಶೌಚಾಲಯದ ಮೊರೆ ಹೋಗಿ ಅನಾರೋಗ್ಯವನ್ನು ತಾವೇ ತಂದು ಕೊಳ್ಳುತ್ತಿದ್ದಾರೆ. ಹೀಗಾಗಿ ಸರಕಾರ ಬಯಲು ಮುಕ್ತ ಗ್ರಾಮ ಮಾಡಲು ಅನುದಾನ ನೀಡಿ ಶೌಚಾಲಯವನ್ನು ನಿರ್ಮಿಸಿಕೊಳ್ಳಲು ಸಹಾಯ ಮಾಡುತ್ತಿದೆ. ಇದರ ಸದುಪಯೋಗ ಪಡಿಸಿಕೊಂಡು ಯೋಜನೆಯ ಲಾಭ ಪಡೆದುಕೊಳ್ಳಿರಿ ಎಂದರು.

## ಅರಣ್ಯದ ಹಾಳು ಬೇಡ

ಕಾರ್ಯಕ್ರಮವನ್ನು ಉದ್ಘಾಟಿಸಿದ ಮಾಜಿ ಸಚಿವ ಬಿ.ಎಸ್.ಪಾಟೀಲ (ಸಾಸನೂರ) ಮಾತನಾಡುತ್ತಾ, ನಿತ್ಯ ಗಿಡಗಳ ಮಾರಣ ಹೋಮ ನಡೆಯುತ್ತಲೇ ಇದೆ. ಈ ಕುರಿತು ಸರಕಾರ ಅರಣ್ಯ ಉಳಿಸಿ ಪರಿಸರ ರಕ್ಷಿಸಿ ಎಂದು ಅಭಿಯಾನ ಮಾಡು ತ್ತಿದ್ದರೂ ಅರಣ್ಯೀಕರಣ ಹಾಳಾಗುತ್ತಿರುವುದು ನಿಜಕ್ಕೂ ದುರಂತವೇ ಸರಿ. ಹೀಗಾಗಿ ಮಳೆಗಾಲ ಕಡಿಮೆಯಾಗಿ ದೇಶ ಅಭಿವೃದ್ಧಿಯತ್ತ ಸಾಗಲು ಹೇಗೆ ಸಾಧ್ಯ.

## ಹೆಣ್ಣಿಗೆ ಶಿಕ್ಷಣ ನೀಡಿ

ಒಬ್ಬ ಹುಡುಗನಿಗೆ ಶಿಕ್ಷಣ ನೀಡಿದರೆ ಒಂದು ವ್ಯಕ್ತಿಯನ್ನು ಸುಶಿಕ್ಷಿತನನ್ನಾಗಿ ಮಾಡಿದಂತೆ, ಆದರೆ, ಒಂದು ಹೆಣ್ಣುಮಗುವಿಗೆ ಶಿಕ್ಷಣ ನೀಡಿದರೆ ಒಂದು ಕುಟುಂಬಕ್ಕೆ ಶಿಕ್ಷಣ ನೀಡಿದಂತೆ. ಅದರಿಂದ ಇಡೀ ಸಮುದಾಯಕ್ಕೆ ಪ್ರಯೋಜನವಾಗುತ್ತದೆ.



ಪುರುಷ ಪ್ರಧಾನವಾದ ಈ ಸಮಾಜದಲ್ಲಿ ಸಮಾಜ ಕಟ್ಟುವ ಹಾಗೂ ಉಳಿಸುವ ಕಾರ್ಯದಲ್ಲಿ ಮಹಿಳೆಯರು ಅಗೋಚರವಾಗಿ ವಹಿಸುತ್ತಿರುವ ಪಾತ್ರವನ್ನು ಕಡೆಗಣಿಸುತ್ತಲೇ ಬರಲಾಗಿದೆ. ಹಾಗಾಗಿ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಪ್ರಾಧಾನ್ಯತೆಯನ್ನು ಕೊಡಬೇಕೆಂಬ ಅಂಶ ಈಗಷ್ಟೇ ಚಾಲನೆ ಪಡೆಯುತ್ತಿದೆ.



## ಹೆಣ್ಣಿನ ಹುಟ್ಟಿಗೆ ಯಾರು ಹೊಣೆ?

ಹೆಣ್ಣು ಭ್ರೂಣ ಹತ್ಯೆ ತಡೆ ಕಾಯ್ದೆ ಕುರಿತಾಗಿ ನ್ಯಾಯವಾದಿ ಸಂಗಮೇಶ ಕೋಳೂರ ಮಾತನಾಡುತ್ತಾ, ಸಂತಾನವೇ ಹೆಣ್ಣಿನ ಯೋಗ್ಯತೆಯ ಮಾನದಂಡವಾಗಿದ್ದ ಕಾಲವೊಂದಿತ್ತು. ಅಂಥ ನಂಬಿಕೆಗಳನ್ನು ಅಲ್ಲಾಡಿಸುವಂತಹ ಬೆಳವಣಿಗೆ ಆಗಿದೆ. ನಿಜ. ಆದರೆ ಈ ಬೆಳವಣಿಗೆಯೂ ಹೆಣ್ಣಿಗೆ ಹೊಸ ಅಸ್ತಿತ್ವ ಕೊಟ್ಟಿಲ್ಲ. ಪರಂಪರೆ ಅವಳನ್ನು ಗರ್ಭದ ಕಾರಣಕ್ಕೆ ಧಿಕ್ಕರಿಸಿದ್ದರೆ, ಆಧುನಿಕ ವಿಜ್ಞಾನ ಇಂದು ಅವಳನ್ನು ಒಂದು ಬಲಿಪಶುವಾಗಿಸಿವೆ. ಈ ಮೌಲ್ಯಮಾಪನದ ಜೊತೆ ಜೊತೆಗೆ ಅವಳ ಗರ್ಭವನ್ನು ರಾಜಕೀಯ ಮುಳ್ಳಿನ ಸಂಕೋಲೆಗಳಲ್ಲಿ ಬಂಧಿಸತೊಡಗಿದೆ. ಅವಳು ಹಿಂದಿಗಿಂತ ಇಂದು ಗರ್ಭದ ಸುತ್ತ ನಡೆಯುತ್ತಿರುವ ವೈಜ್ಞಾನಿಕ ಸಂಶೋಧನೆಗಳ ಜಾಲಗಳಲ್ಲಿ ಸಿಕ್ಕು ವಿಲಿ ವಿಲಿ ಒದ್ದಾಡುತ್ತಿದ್ದಾಳೆ.

ಗಂಡು ಮಗುವನ್ನು ಪಡೆಯಲು ಯಾವುದೇ ಸಿದ್ಧ ಔಷದಗಳಿಲ್ಲ. ಫಾರ್ಮುಲಾಗಳಿಲ್ಲ. ಹೆಣ್ಣು ಹಡೆಯಲು ಹೆಂಗಸು ಕಾರಣಳಲ್ಲ. ಮಗುವಿನ ಲಿಂಗ ನಿರ್ಧರಿಸುವುದು ಯಾವತ್ತೂ ಗಂಡೇ, ವಿನಾಕಾರಣ ಹೆಣ್ಣಿಗೆ ಈ ಪಟ್ಟ ಕಟ್ಟುತ್ತೀದ್ದೇವೆ. ಹಳೆಕಾಲದಿಂದದಲೂ ಗಂಡಿನಲ್ಲೇ ಗಂಡು ಮಗುವಿನ ಜನನಕ್ಕೆ ಬೇಕಾಗುವ ವರ್ಣತಂತುಗಳೇ ಇಲ್ಲದಿರುವಾಗ ಗಂಡು ಮಗು ಹೆರಬೇಕು ಎಂದು ಹೆಣ್ಣನ್ನು ಪೀಡಿಸುವುದು ಸರಿಯೇ? ಈ ಶೋಷಣೆ ಇನ್ನಾದರೂ ನಿಲ್ಲಲಿ. ಮಹಿಳೆಯರಿಗೆ ಪೂಜನೀಯ ಸ್ಥಾನ ಭಾರತದಲ್ಲಿ ಸಿಕ್ಕಷ್ಟು ಬೇರೆ ಯಾವ ದೇಶದಲ್ಲೂ ಸಿಕ್ಕಿಲ್ಲ. 1994ರಲ್ಲಿಯೇ ಲಿಂಗಾನುಪಾತ ಕಾಯ್ದೆಯನ್ನು ಜಾರಿಗೆ ತಂದರೂ ಹೆಣ್ಣು ಭ್ರೂಣ ಪತ್ತೆ ಇನ್ನೂ ನಡೆಯುತ್ತಲೇ ಇದೆ. ವಿಶ್ವಸಂಸ್ಥೆಯಡಿಯಲ್ಲಿ ಲಿಂಗಾನುಪಾತ ಸರಿಪಡಿಸಲು ಅವಳಿಗಾಗಿ ಅವನು ಎಂಬ ಅಭಿಯಾನ ನಡೆಸುತ್ತಲೇ ಇದೆ. ಆದರೂ ಹೆಣ್ಣು ಶಿಶು ಮರಣ ಪ್ರಮಾಣ ಕಡಿಮೆಯಾಗುತ್ತಿಲ್ಲ. ಹತ್ಯೆಗೊಳಗಾಗುವುದು ಹೆಣ್ಣು ಭ್ರೂಣ ಎಂದು ಖಚಿತವಾಗಿ ಗೊತ್ತಿದ್ದು. ಅಂತಹ ಕೃತ್ಯವನ್ನೆಸಗಿದ ಲಿಂಗಪತ್ತೆ ಕೇಂದ್ರ, ಪ್ರಯೋಗಾಲಯ, ಔಷಧಾಲಯ, ವೈಧ್ಯರ ಯಾರ ಮೇಲಾದರೂ ಈ ಅಪರಾದಕ್ಕಾಗಿ ಮೂರು ವರ್ಷಗಳ ಕಠಿಣ ಶಿಕ್ಷೆ ಹಾಗೂ ಒಂದು ಲಕ್ಷ ರೂಗಳವರೆಗೆ ದಂಡ ವಿಧಿಸಲಾಗುವುದು ಎಂದು ಕಾಯಿದೆಯ ಕುರಿತಾಗಿ ಸಮಗ್ರವಾಗಿ ನೆರೆದ ಜನರಿಗೆ ವಿವರಿಸಿದರು.

ಇದೇ ಸಂದರ್ಭದಲ್ಲಿ ನ್ಯಾಯಾಧೀಶರಿಂದ ಸಸಿ ನೆಡುವ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದಲ್ಲಿ ಸಿವಿಲ್ ನ್ಯಾಯಾಧೀಶ ನಾಗೇಶ ಮೋಗೇರ, ವಕೀಲರ ಸಂಘದ ಅಧ್ಯಕ್ಷ ಜಿ.ಆರ್.ಬೀಳಗಿ, ಸಹಾಯಕ ಸರಕಾರಿ ಅಭಿಯೋಜಕ ವಿ.ಎಸ್.ಮಾಯಣ್ಣನವರ, ಗ್ರಾಪಂ ಅಧ್ಯಕ್ಷ ಮಲ್ಲಣ್ಣ ಲಚ್ಯಾಣ, ಸದಸ್ಯರಾದ ಪರಮಾನಂದ ಗೋಟೇದ, ಹಣಮಂತ್ರಾಯ ಗುಣಕಿ, ವಕೀಲರಾದ ಗುರುರಾಜ ಬಾಗೇವಾಡಿ, ಶಶಿಧರ ಯರನಾಳ, ಶಾಲಾ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಪ್ರಕಾಶ ಹೊಸಮನಿ ನಿರೂಪಿಸಿದರು,. ಗುರುರಾಜ ಬಾಗೇವಾಡಿ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.

ಲೇಖನ

# "ಸೂರ್ಯಮಿತ್ರ"
## ತಾಂತ್ರಿಕ ವಿದ್ಯಾರ್ಥಿಗಳಿಗೆ ಉದ್ಯೋಗದಾತ

–ಡಾ|| ಟಿ.ವಿ. ಮೋಹನ್‌ದಾಸ್, ಭಾ.ಅ.ಸೇ,

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಒಂದು ತರಬೇತಿ ಸಂಸ್ಥೆಯಾಗಿದೆ. ಸಂಸ್ಥೆಯ ಮೂಲ ಉದ್ದೇಶ ಗ್ರಾಮೀಣಾಭಿವೃದ್ಧಿಗಾಗಿ ನವೀಕರಿಸಬಹುದಾದ ಇಂಧನ ಮೂಲಗಳ ಬಗ್ಗೆ ಗ್ರಾಮ ಮಟ್ಟದಲ್ಲಿ ತಿಳುವಳಿಕೆ ಮೂಡಿಸುವುದರೊಂದಿಗೆ ಅನುಷ್ಠಾನ ಮಾಡುವಲ್ಲಿ ಸಹಾಯಕವಾಗುವ ರೀತಿಯಲ್ಲಿ ಅನೇಕ ರೀತಿಯ ವೈವಿಧ್ಯಮಯ ತರಬೇತಿಗಳನ್ನು ಆಯೋಜಿಸುತ್ತಾ ಬಂದಿದೆ. ಅದರಲ್ಲಿ ಸೂರ್ಯಮಿತ್ರ ಕೌಶಲ್ಯಾಭಿವೃದ್ಧಿ ತರಬೇತಿಯೂ ಒಂದು.

> ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಡಿಸೆಂಬರ್ 2015 ರ ಮಾಹೆಯಲ್ಲಿ ಈ ಸೂರ್ಯಮಿತ್ರ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಪ್ರಾರಂಭಿಸಿತು.




ಆರು ವರ್ಷಗಳ ಹಿಂದೆ ಭಾರತ ಸರ್ಕಾರವು 2022ರ ಇಸವಿಯ ಹೊತ್ತಿಗೆ 20,000 ಮೆಗಾ ವ್ಯಾಟ್ ಸೌರ ಇಂಧನವನ್ನು ಉತ್ಪಾದನೆ ಮಾಡುವ ಗುರಿಯನ್ನು ಹೊಂದಲಾಗಿತ್ತು. ಆದರೆ ಈಗ ಸದರಿ ಗುರಿಯನ್ನು ಪರಿಷ್ಕರಿಸಿ 1,00,000 ಮೆಗಾ ವ್ಯಾಟ್ ಸೌರ ವಿದ್ಯುತ್‌ನ್ನು ಉತ್ಪಾದಿಸುವ ಗುರಿಯನ್ನು ಹೊಂದಲಾಗಿದೆ. ಪ್ರಸ್ತುತ ದೇಶವು ಅಂದಾಜು 8000 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದಿಸುತ್ತಿದ್ದು ಮತ್ತು ಭಾರತ ಸರ್ಕಾರವು 1,00,000 ಮೆಗಾ ವ್ಯಾಟ್ ಉತ್ಪಾದನೆ ಮಾಡುವ ಗುರಿಯನ್ನು ಹೆಚ್ಚಿಸಲು ಯೋಜನೆಯನ್ನು ರೂಪಿಸಿದೆ. ಒಂದು ಅಂದಾಜಿನ ಪ್ರಕಾರ ದೇಶಾದ್ಯಂತ ಎಲ್ಲಾ ಹಂತದ 7 ಲಕ್ಷ ನುರಿತ ಸಿಬ್ಬಂದಿಯ ಅವಶ್ಯಕತೆ ಇದೆ. ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ 175 ಮೆಗಾ ವ್ಯಾಟ್ ಸೌರ ವಿದ್ಯುತ್ ಉತ್ಪಾದಿಸುತ್ತಿದ್ದು ಮತ್ತು ಕರ್ನಾಟಕ ರಾಜ್ಯ

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಹಾಗೂ ಕಾರ್ಯನಿರ್ವಾಹಕ ನಿರ್ದೇಶಕರು



ಸರ್ಕಾರವು ಸೋಲಾರ್ ನೀತಿ ಅವಧಿ 2014–2021ರವರೆಗೆ 6600 ಮೆಗಾ ವ್ಯಾಟ್ ಉತ್ಪಾದನೆ ಮಾಡುವ ಗುರಿಯನ್ನು ಹೆಚ್ಚಿಸಲು ಯೋಜನೆಯನ್ನು ರೂಪಿಸಿದೆ. ಈ ಉದ್ದೇಶದಿಂದ ನವ್ಯ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ಭಾರತ ಸರ್ಕಾರವು ಕ್ಷೇತ್ರಮಟ್ಟದಲ್ಲಿ ಸೋಲಾರ್ ವಿದ್ಯುತ್ ಘಟಕಗಳ ಅಳವಡಿಕೆ, ನಿರ್ವಹಣೆ ಮತ್ತು ರಿಪೇರಿ ಕೆಲಸಗಳಿಗಾಗಿ "ಸೂರ್ಯಮಿತ್ರ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು" ಅನುಷ್ಠಾನಗೊಳಿಸಿದೆ. ಈ ಕಾರ್ಯಕ್ರಮವು 3 ತಿಂಗಳ ಅವಧಿಯದಾಗಿದ್ದು, 600 ಗಂಟೆಗಳ ಅವಧಿಯಲ್ಲಿ ಐ.ಟಿ.ಐ. ತಂತ್ರಜ್ಞರನ್ನು ಸೌರ ವಿದ್ಯುತ್‌ಜನಕ ಸಾಧನಗಳ ಅಳವಡಿಕೆ, ಸಿದ್ದಪಡಿಸುವ, ಮಾರಾಟ ಮತ್ತು ಸೇವೆಯಲ್ಲಿ ಪರಿಣಿತರನ್ನಾಗಿ ಮಾಡುವ ಉದ್ದೇಶವಾಗಿರುತ್ತದೆ. ಭಾರತ ಮತ್ತು ವಿದೇಶಗಳಲ್ಲಿ ಈ "ಸೂರ್ಯಮಿತ್ರ"ರು ಬೆಳೆಯುತ್ತಿರುವ ಸೌರಶಕ್ತಿ ವಿದ್ಯುತ್ ಯೋಜನೆಯ ಅನುಷ್ಠಾನ, ಕಾರ್ಯಾಚರಣೆ ಮತ್ತು ನಿರ್ವಹಣೆಯಲ್ಲಿ ವ್ಯಾಪಕ ಉದ್ಯೋಗ ಅವಕಾಶಗಳನ್ನು ಹೊಂದಿರುತ್ತಾರೆ. ಸೂರ್ಯಮಿತ್ರ ಕಾರ್ಯಕ್ರಮದಲ್ಲಿ ಸೌರಶಕ್ತಿ ವಲಯದಲ್ಲಿ ಹೊಸ ಉದ್ಯಮಿಗಳಾಗಲು ಅಭ್ಯರ್ಥಿಗಳನ್ನು ಸಿದ್ದಪಡಿಸು ವುದಕ್ಕೆ ವಿನ್ಯಾಸ ಗೊಳಿಸಲಾಗಿದೆ. ಇದರಿಂದ ಉದ್ಯಮ ಹಾಗೂ ನುರಿತ ಅಭ್ಯರ್ಥಿಗಳಿಗೆ ಉದ್ಯೋಗ ನೀಡುವ ಕೊಂಡಿಯಾಗಲು ಪ್ರಯತ್ನಿಸಲಾಗುವುದು.

ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ನ್ಯಾಷನಲ್ ಇನ್ಸಿಟಿಟ್ಯೂಟ್ ಆಫ್ ಸೋಲಾರ್ ಎನರ್ಜಿ, ನವ್ಯ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ಭಾರತ ಸರ್ಕಾರ ಹಾಗೂ ಕರ್ನಾಟಕ ನವೀಕರಿಸ ಬಹುದಾದ ಇಂಧನ ಅಭಿವೃದ್ದಿ ನಿಯಮಿತ, ಕರ್ನಾಟಕ ಸರ್ಕಾರ ಇವುಗಳಿಂದ ಸೂರ್ಯಮಿತ್ರ ಕೌಶಲ್ಯ ಅಭಿವೃದ್ದಿ ಕಾರ್ಯಕ್ರಮವನ್ನು ಕೈಗೊಳ್ಳಲು ಮಾನ್ಯತೆ ಪಡೆದ ಸಂಸ್ಥೆಯಾಗಿರುತ್ತದೆ.

ಈ ನಿಟ್ಟಿನಲ್ಲಿ ಮಹಾತ್ಮಗಾಂಧಿ ಗ್ರಾಮೀಣ ಇಂಧನ ಮತ್ತು ಅಭಿವೃದ್ಧಿ ಸಂಸ್ಥೆಯು ಕರ್ನಾಟಕದಲ್ಲಿ ಪ್ರಪ್ರಥಮ ಬಾರಿಗೆ ಡಿಸೆಂಬರ್ 2015 ರ ಮಾಹೆಯಲ್ಲಿ ಈ ಸೂರ್ಯಮಿತ್ರ ಕೌಶಲ್ಯಾಭಿವೃದ್ಧಿ ತರಬೇತಿಯನ್ನು ಪ್ರಾರಂಭಿಸಿತು.

ಈ ತರಬೇತಿಗೆ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಅರ್ಜಿಯನ್ನು ಆಹ್ವಾನಿಸಲಾಗುವುದು. ಐ.ಟಿ.ಐ (ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್ ಮತ್ತು ಫಿಟ್ಟರ್) ಹಾಗೂ ಡಿಪ್ಲೋಮಾ (ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್) ವಿದ್ಯಾರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಮಾತ್ರ ಅವಕಾಶವಿರುತ್ತದೆ. ತರಬೇತಿಗಾಗಿ ಅಭ್ಯರ್ಥಿಗಳ

ಆಯ್ಕೆಯನ್ನು ಗ್ರಾಮೀಣ ಹಿನ್ನೆಲೆಯಿಂದ ಬಂದ ಅಭ್ಯರ್ಥಿಗಳು, ನಿರುದ್ಯೋಗ ಯುವಕರು, ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಯು ಪಡೆದ ಅಂಕಗಳ ಆಧಾರದ ಮೇಲೆ ಆಯ್ಕೆ ಮಾಡಲಾಗುವುದು. ಪ್ರತಿ ಬ್ಯಾಚ್‌ನಲ್ಲಿ 30 ವಿದ್ಯಾರ್ಥಿಗಳಿಗೆ ಮಾತ್ರ



ಅವಕಾಶವಿದ್ದು. ಈ ತರಬೇತಿಯಲ್ಲಿ ನುರಿತ ತಂತ್ರಜ್ಞರಿಂದ ಸೋಲಾರ್ ತಂತ್ರಜ್ಞಾನದ ಬಗ್ಗೆ ಮಾಹಿತಿ, ಸೋಲಾರ್ ಆಫ್–ಗ್ರಿಡ್, ಸೋಲಾರ್ ಆನ್–ಗ್ರಿಡ್ ವ್ಯವಸ್ಥೆಯ, ಅಳವಡಿಕೆ, ಕಾರ್ಯಾಚರಣೆ ಮತ್ತು ಸಂಪೂರ್ಣ ನಿರ್ವಹಣೆ ಹಾಗೂ ಸೋಲಾರ್ ಕ್ಷೇತ್ರದಲ್ಲಿ ವೈಯಕ್ತಿಕವಾಗಿ ವ್ಯವಹಾರ ಮಾಡುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಕೌಶಲ್ಯಾಭಿವೃದ್ಧಿ ತರಬೇತಿ ನೀಡಲಾಗುತ್ತಿದೆ. ತರಬೇತಿಯ ಕೊನೆಯಲ್ಲಿ ಭಾರತ ಸರ್ಕಾರದ Sector Skills for Greens Jobs, National Skill Development Corporation or Regional Directorate of Apprentice Training ಗಳ ಮುಖಾಂತರ ಪರೀಕ್ಷೆಗಳನ್ನು ಕೈಗೊಳ್ಳಲಾಗುವುದು.

ಸಂಸ್ಥೆಯು ಈಗಾಗಲೆ ಎರಡು ಬ್ಯಾಚ್‌ಗಳಿಗೆ ಯಶಸ್ವಿಯಾಗಿ ತರಬೇತಿಯನ್ನು ಪೂರ್ಣಗೊಳಿಸಿದ್ದು ದಿನಾಂಕ 01–08–2016 ರಿಂದ ಮೂರನೇ ಬ್ಯಾಚ್ ಪ್ರಾರಂಭಿಸಲಾಗಿದೆ.

**ಪರಿಣಾಮ :**

- ಸಂಸ್ಥೆಯಿಂದ ತರಬೇತಿ ಪಡೆಯುತ್ತಿರುವ ಅವಧಿಯಲ್ಲಿ ತರಬೇತಿ ಅಭ್ಯರ್ಥಿಗಳನ್ನು ಸಂಸ್ಥೆಯಿಂದ ಕೈಗೊಳ್ಳಲಾದ ವಿದ್ಯುತ್ ರಹಿತ ಗ್ರಾಮಗಳ ವಿದ್ಯುತೀಕರಣ ಕಾರ್ಯಕ್ರಮದಲ್ಲಿ ಉಪಯೋಗಿಸಿಕೊಳ್ಳಲಾಗುವುದು. ಇದರಿಂದಾಗಿ ಇನ್ನೂ ಹೆಚ್ಚಿನ ತಾಂತ್ರಿಕತೆಯನ್ನು ಪ್ರಯೋಗಾತ್ಮಕವಾಗಿ ಕಲಿಯಲು ಅವಕಾಶ ಮಾಡಿಕೊಡಲಾಗಿದೆ.
- ಮೂರು ತಿಂಗಳ ತರಬೇತಿಯ ನಂತರ ಅಭ್ಯರ್ಥಿಗಳು ಸಂಪೂರ್ಣವಾಗಿ ಸೋಲಾರ್ ತಂತ್ರಜ್ಞಾನದ ಅಳವಡಿಕೆ ಹಾಗೂ ನಿರ್ವಹಣೆಯ ಬಗ್ಗೆ ಕೌಶಲ್ಯತೆಯನ್ನು ವೃದ್ಧಿಸಿಕೊಂಡ ನಂತರ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಭಾರತ ಸರ್ಕಾರದ ನವ್ಯ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯದಿಂದ ದೃಢೀಕರಣ ಪತ್ರವನ್ನು ವಿತರಿಸಲಾಗುತ್ತಿದೆ. ಇದರಿಂದ ದೇಶದ ಯಾವುದೇ ಮೂಲೆಯಲ್ಲಿ ಸೋಲಾರ್ ತಂತ್ರಜ್ಞರಾಗಿ ಕೆಲಸ ನಿರ್ವಹಿಸಲು ಅರ್ಹರಾಗಿರುತ್ತಾರೆ.
- ಸಂಸ್ಥೆಯಿಂದ ತರಬೇತಿ ಪಡೆದ ಮೊದಲನೇ ಬ್ಯಾಚ್‌ನ 12 ಅಭ್ಯರ್ಥಿಗಳು ದೇಶದ ವಿವಿಧ



ಸೋಲಾರ್ ತಂತ್ರಜ್ಞಾನ ಕಂಪನಿಗಳಲ್ಲಿ ಉದ್ಯೋಗವನ್ನು ಪಡೆದಿದ್ದು, 3 ಅಭ್ಯರ್ಥಿಗಳು ಸ್ವ–ಉದ್ಯೋಗವನ್ನು ಪ್ರಾರಂಭಿಸಿದ್ದಾರೆ.

- ಎರಡನೇ ಬ್ಯಾಚ್‌ನ 6 ಅಭ್ಯರ್ಥಿಗಳು ಈಗಾಗಲೇ ವಿವಿಧ ಸೋಲಾರ್ ತಂತ್ರಜ್ಞಾನ ಕಂಪನಿಗಳಲ್ಲಿ ಉದ್ಯೋಗವನ್ನು ಪಡೆದಿದ್ದು ಉಳಿದ ಅಭ್ಯರ್ಥಿಗಳು ಹಲವು ಸಂದರ್ಶನಗಳಲ್ಲಿ ಹಾಜರಾಗಿರುತ್ತಾರೆ.
- ಅಲ್ಲದೇ ಈ ಎರಡು ಬ್ಯಾಚ್‌ಗಳಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳನ್ನು ಸ್ಥಳೀಯವಾಗಿ ಬಳಕೆ



ಮಾಡಿಕೊಳ್ಳಲು ಅಭ್ಯರ್ಥಿಗಳ ಮೊಬೈಲ್ ಸಂಖ್ಯೆ ಮತ್ತು ಸ್ವಂತ ವಿಳಾಸದೊಂದಿಗೆ ರಾಜ್ಯದ ಎಲ್ಲಾ ಜಿಲ್ಲಾ / ತಾಲ್ಲೂಕು / ಗ್ರಾಮ ಪಂಚಾಯಿತಿಗಳಿಗೆ ಕಳುಹಿಸಲಾಗಿದ್ದು. ಅಲ್ಲದೇ ಸಂಸ್ಥೆಯ ಅಂತರ್ ಜಾಲತಾಣದಲ್ಲಿ ಪ್ರಕಟಿಸಲಾಗಿದೆ. ಈ ನಿಟ್ಟಿನಲ್ಲಿ ಸಂಸ್ಥೆಯಿಂದ ತರಬೇತಿ ಪಡೆದ ಅಭ್ಯರ್ಥಿಗಳ ಸದುಪಯೋಗವಾಗುತ್ತಿದೆ ಎಂಬ ನಂಬಿಕೆ ಇದೆ.

## ಯಶೋಗಾಥೆ :

ಶ್ರೀ ನವೀನ್ ಡಿ.ಆರ್. ಸಂಸ್ಥೆಯಿಂದ ತರಬೇತಿ ಪಡೆದ ಮೊದಲನೇ ಬ್ಯಾಚ್‌ನ ಸೂರ್ಯಮಿತ್ರ ತರಬೇತಿ ಅಭ್ಯರ್ಥಿ ಇವರು ತರಬೇತಿಯನ್ನು ಪಡೆದ ನಂತರ ವೈಯಕ್ತಿಕವಾಗಿ ತಮ್ಮ ಮೆ. ಇನ್‌ವಾಲ್ಲೂಟ್ ಇಂಜಿನಿಯರಿಂಗ್ ಸರ್ವೀಸಸ್ ಸಂಸ್ಥೆಯ ಮುಖಾಂತರ ಸೋಲಾರ್ ಉದ್ಯಮವನ್ನು ಪ್ರಾರಂಭಿಸಿದ್ದು. ಸೋಲಾರ್‌ಗೆ ಸಂಬಂದಪಟ್ಟ ವಿವಿಧ ಘಟಕಗಳನ್ನು ಅಳವಡಿಸಿದ್ದಾರೆ ಅವುಗಳಲ್ಲಿ 30 ಬೀದಿ ದೀಪಗಳು, ಕೋಲಾರ ಮತ್ತು ಮಂಡ್ಯ ಜಿಲ್ಲೆಯ ಜಿಲ್ಲಾ ಕಾರಾಗೃಹಗಳಲ್ಲಿ ಬೆಳಕಿನ ವ್ಯವಸ್ಥೆಗಾಗಿ ಒಟ್ಟಾರೆಯಾಗಿ 55 ಕಿ.ವ್ಯಾ ಸಾಮರ್ಥ್ಯದ ಆಫ್-ಗ್ರಿಡ್ ಸೋಲಾರ್ ಘಟಕಗಳನ್ನು ಅಳವಡಿಸಿರುತ್ತಾರೆ ಹಾಗೂ ಸೋಲಾರ್ ಎಲೆಕ್ಟ್ರಿಕಲ್‌ಗೆ ಸಂಬಂದಪಟ್ಟ ಇತರೆ ರೀತಿಯ ಸೇವೆ ಮತ್ತು ನಿರ್ವಹಣೆಯ ಕೆಲಸಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಯಶಸ್ವಿಯಾಗಿದ್ದಾರೆ.

ಶ್ರೀ ಚಂದ್ರಶೇಖರ್, ಸಂಸ್ಥೆಯಿಂದ ತರಬೇತಿ ಪಡೆದ ಮೊದಲನೇ ಬ್ಯಾಚ್‌ನ ಸೂರ್ಯಮಿತ್ರ ತರಬೇತಿ ಅಭ್ಯರ್ಥಿ ಇವರು ವಾಟರ್ ಹೀಟರ್ ಡೀಲರ್‌ಶೀಪ್ ಮಾಡುತ್ತಿದ್ದಾರೆ.

ಶ್ರೀ ಪ್ರಶಾಂತ್ ಸಂಸ್ಥೆಯಿಂದ ತರಬೇತಿ ಪಡೆದ ಮೊದಲನೇ ಬ್ಯಾಚ್‌ನ ಸೂರ್ಯಮಿತ್ರ ತರಬೇತಿ ಅಭ್ಯರ್ಥಿ ಇವರು ಪ್ರಖ್ಯಾತ ಮೆ. ಅನು ಸೋಲಾರ್ ಸಂಸ್ಥೆಯ ವಿವಿಧ ಸೋಲಾರ್ ಪ್ರಾಡಕ್ಟ್‌ಗಳ ಡೀಲರ್‌ಶೀಪ್ ತೆಗೆದುಕೊಂಡಿರುತ್ತಾರೆ.

ಇದೇ ರೀತಿ ಎರಡನೇ ತಂಡದ ಅಭ್ಯರ್ಥಿಗಳೂ ಸಹ ಸ್ವಂತವಾಗಿ ಉದ್ಯೋಗವನ್ನು ಪ್ರಾರಂಭಿಸಲು ಯೋಜನೆಯನ್ನು ರೂಪಿಸಿರುತ್ತಾರೆ.


## ಕೃತಜ್ಞತೆಗಳು

ಸಂಸ್ಥೆಯು ಈ ಕೆಳಕಂಡವರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಪ್ರೋತ್ಸಹ ನೀಡಿದ್ದಕ್ಕಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

1. ಶ್ರೀ ಹೆಚ್.ಕೆ. ಪಾಟೀಲ್, ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು, ಕರ್ನಾಟಕ ಸರ್ಕಾರ.
2. ನವ್ಯ ಮತ್ತು ನವೀಕರಿಸಬಹುದಾದ ಇಂಧನ ಮಂತ್ರಾಲಯ, ಭಾರತ ಸರ್ಕಾರ
3. ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು.

# ಗ್ರಾಮೀಣ ಕರ್ನಾಟಕದ ಗಟ್ಟಿಧ್ವನಿಯಾಗಿ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್

## ಲೇಖನ



ಎಲ್ .ಎಸ್. ದಿನೇಶ


ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993ನ್ನು ಸದೃಢ ಮತ್ತು ಬಲಿಷ್ಠವಾಗಿ ಜಾರಿಗೊಳಿಸಿರುವುದು ಅಖಂಡ ಕರ್ನಾಟಕದ ಗ್ರಾಮಗಳ ಅಭಿವೃದ್ಧಿಯ ಒಂದು ರೀತಿಯ 'ಕ್ರಾಂತಿಕಾರಿ ಹೆಜ್ಜೆ' ಯಾಗಿದೆ.

ಗ್ರಾಮೀಣ ಪ್ರದೇಶಗಳ ಜನಜೀವನದ ಮೂಲ ಘಟಕ ಗ್ರಾಮಗಳು. ಅದರಂತೆ ಗ್ರಾಮೀಣ ಬದುಕಿನ ಭವ್ಯ ಪರಂಪರೆಯನ್ನು ಪ್ರತಿಬಿಂಬಿಸುವ ಪ್ರತಿರೂಪಗಳು ಸಹ ಈ ಗ್ರಾಮಗಳು. ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗೆ ಗ್ರಾಮಗಳ ಕೊಡುಗೆ ಅಪಾರ. ಈ ಗ್ರಾಮಗಳನ್ನು ಸಂವಿಧಾನಾತ್ಮಕ ಪ್ರಜಾಪ್ರಭುತ್ವದ "ಅಧಿಕಾರವಿಕೇಂದ್ರೀಕರಣ"ದ ತತ್ವದಡಿಯಲ್ಲಿ ಸಮಾಜದ ಮುಖ್ಯ ವೇದಿಕೆಗೆ ತರಬೇಕು. ಅದರಂತೆ ಗ್ರಾಮಗಳನ್ನು ಸಂವಿಧಾನದ ಕಾನೂನು ಚೌಕಟ್ಟಿನಲ್ಲಿ ಅಭಿವೃದ್ಧಿಪಡಿಸಬೇಕಾಗಿರುವುದು ಅವಶ್ಯಕವಾಗಿದೆ. ಮಹಾತ್ಮ ಗಾಂಧೀಜಿಯವರ ಜೀವನದ ಅತಿದೊಡ್ಡ ಕನಸು "ಸುವರ್ಣಗ್ರಾಮೋದಯದಿಂದ ಕೂಡಿದ ಗ್ರಾಮಸ್ವರಾಜ್" ವ್ಯವಸ್ಥೆಯಾಗಿದೆ.



ಕರ್ನಾಟಕದಲ್ಲಿ ಗ್ರಾಮ ಪಂಚಾಯತಿಗಳನ್ನು ಆಡಳಿತ ಮತ್ತು ಆರ್ಥಿಕ ಅಭಿವೃದ್ಧಿ ಮಾನದಂಡಗಳ ಆಧಾರದ ಮೇಲೆ ಸದೃಢ ಮತ್ತು ಬಲಿಷ್ಠಗೊಳಿಸುವಲ್ಲಿ ಬಹುಮುಖ್ಯಪಾತ್ರವಹಿಸಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ ಸನ್ಮಾನ್ಯ "ಶ್ರೀ ಹೆಚ್.ಕೆ.ಪಾಟೀಲ್" ರವರ ಆಸಕ್ತಿ, ದೂರದೃಷ್ಟಿ ಮತ್ತು ಸತತ ಪರಿಶ್ರಮದ ಫಲವಾಗಿ ಗ್ರಾಮ ಪಂಚಾಯತಿಗಳನ್ನು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗವಾಗಿಸುವತ್ತ ದಾಪುಗಾಲು ಇಟ್ಟಿರುವುದು ನಿಜಕ್ಕೂ ಶ್ಲಾಘನೀಯ. ಇದರಿಂದ ಗ್ರಾಮೀಣ ಪ್ರದೇಶದ ರೈತಾಪಿ ಕುಟುಂಬಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ

ಕೆ. ಲಕ್ಕಿಹಳ್ಳಿ, ಕೊನೇಹಳ್ಳಿ (ಅಂಚೆ), ತಿಪಟೂರು (ತಾ), ತುಮಕೂರು (ಜಿಲ್ಲೆ)





ಸಕ್ರೀಯವಾಗಿ ಭಾಗವಹಿಸಲು "ಸುವರ್ಣ ಅವಕಾಶ" ದೊರೆತಂತಾಗಿದೆ.

ಸಂವಿಧಾನದ 9ನೇ ಭಾಗದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಉಲ್ಲೇಖವಿದೆ. ಅದರಂತೆ ಕರ್ನಾಟಕ ರಾಜ್ಯವು ಪಂಚಾಯತ್ ರಾಜ್ ವ್ಯವಸ್ಥೆಯ ಮೂರು ಹಂತದ ಸ್ಥಳೀಯ ಸರ್ಕಾರಗಳಾದ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿಗಳಿಗೆ ಸಂಬಂಧಿಸಿದಂತೆ ಸಂವಿಧಾನದ 11ನೇ ಅನುಸೂಚಿ ಯಲ್ಲಿ ಬರುವ 73 ನೇ ಸಂವಿಧಾನ ತಿದ್ದುಪಡಿ ಕಾಯಿದೆ 1993 ರಂತೆ ಕರ್ನಾಟಕ ಸರ್ಕಾರವು 24 ಅಭಿವೃದ್ಧಿ ಇಲಾಖೆಗಳ ವ್ಯಾಪ್ತಿಯಲ್ಲಿ ಬರುವ 29 ಕಾರ್ಯಕ್ರಮಗಳ ವಿಷಯಗಳಿಗೆ ಸಂಬಂಧಿಸಿದಂತೆ ಅನುದಾನ ಮತ್ತು ಅನುಷ್ಠಾನದ ಅಧಿಕಾರವನ್ನು ಸಂವಿಧಾನದ 243 ಜಿ ವಿಧಿಯ ಪ್ರಕಾರ ವರ್ಗಾಯಿಸಿರುತ್ತದೆ.

ಅದರಂತೆ ಕರ್ನಾಟಕ ಸರ್ಕಾರವು 1993 ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆಯನ್ನು ಜಾರಿಗೆ ತಂದು ಅನುಷ್ಠಾನಗೊಳಿಸಿರುತ್ತದೆ. ಆದ್ದರಿಂದ ಕರ್ನಾಟಕ ಪಂಚಾಯತ್ ರಾಜ್ ಸಂಸ್ಥೆಗಳ ಆಡಳಿತ ವ್ಯವಸ್ಥೆಯಲ್ಲಿ ಹೆಚ್ಚಿನ ಪಾರದರ್ಶಕತೆ, ಉತ್ತರದಾಯಿತ್ವ ಮತ್ತು ಶೀಘ್ರತೆಯನ್ನು ಅನುಸರಿಸಲಾಗುತ್ತಿದೆ.

ಗ್ರಾಮೀಣ ಸಮಾಜದ "ಕಟ್ಟಕಡೆಯ ವ್ಯಕ್ತಿಯು" ಸಹ ಸಮಾಜದ ಮುಖ್ಯವೇದಿಕೆಗೆ ಬರಬೇಕು ಎಂಬುದು ಗಾಂಧೀಜಿಯವರ ತುಂಬು ಹೃದಯದ ಬಯಕೆಯಾಗಿತ್ತು. ಆ ನಿಟ್ಟಿನಲ್ಲಿ ಸಂವಿಧಾನದ ಬಹುಮುಖ್ಯ ಉದ್ದೇಶವಾದ "ಸಾಮಾಜಿಕ ನ್ಯಾಯ" ಎಂಬ ಪರಿಕಲ್ಪನೆಯನ್ನು ಇಡೀ ಭಾರತ ದೇಶಕ್ಕೆ ಪರಿಚಯಿಸುವಲ್ಲಿ ಮಹತ್ತರ ಪಾತ್ರವಹಿಸಿರುವ ಮೊಟ್ಟ ಮೊದಲ ರಾಜ್ಯವೇ ಕರ್ನಾಟಕ ರಾಜ್ಯ. ಅದರಂತೆ ಮಹಾತ್ಮ ಗಾಂಧೀಜಿ ಯವರು ಕರ್ನಾಟಕಕ್ಕೆ ಮೊಟ್ಟ ಮೊದಲು ಭೇಟಿ ನೀಡಿದ್ದು ಮೇ–8–1915 ರಲ್ಲಿ ಬೆಂಗಳೂರು ನಗರಕ್ಕೆ. ಅದೇ ರೀತಿಯಾಗಿ ಕರ್ನಾಟಕದಲ್ಲಿ ಅಂತಿಮವಾಗಿ ಭೇಟಿ ನೀಡಿದ ಸ್ಥಳ ಬೆಳಗಾವಿ ಜಿಲ್ಲೆಯ ಹುದಲಿ ಗ್ರಾಮಕ್ಕೆ ಏಪ್ರಿಲ್ 21–1937 ರಲ್ಲಿ. ಅದರಂತೆ ಗ್ರಾಮಗಳು ಸಂಪೂರ್ಣ ರಾಜ್ಯವನ್ನು ಕಾಣಬೇಕೆಂಬುದು ಗಾಂಧೀಜಿಯವರ ಆಶಯವಾಗಿತ್ತು. ಬ್ರಿಟನ್ ದೇಶದ ಪ್ರಸಿದ್ಧ ಸಾಹಿತ್ಯ ಚಿಂತಕರಾದ ಜಾನ್ ರಸ್ಕಿನ್ ರವರ "ಅನ್ ಟು ದಿ ಲಾಸ್ಟ್" ಎಂಬ ಗ್ರಂಥವು ಗಾಂಧೀಜಿಯವರ ವ್ಯಕ್ತಿತ್ವದ ಮೇಲೆ ಬಹುಮುಖ್ಯ ಪ್ರಭಾವ ಬೀರಿರುತ್ತದೆ. ಆದ್ದರಿಂದ ಗಾಂಧೀಜಿಯವರ ಆತ್ಮಚರಿತ್ರೆಯಾದ "ಮೈ ಎಕ್ಸ್‌ಪೆರಿಮೆಂಟ್ ವಿತ್ ಟ್ರೂತ್" ಎಂಬ ಗ್ರಂಥವನ್ನು ಸಮಗ್ರವಾಗಿ ಅವಲೋಕಿಸಿದರೆ– "ಒಬ್ಬರ ಒಳಿತು ಎಲ್ಲರ ಒಳಿತಿನಲ್ಲಿ ಅಡಗಿದೆ" ಎಂದರ್ಥವಾಗುತ್ತದೆ. ಅಂದರೆ "ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ" ಎಂಬ ಮಾತಿನ ಪ್ರತಿಬಿಂಬವಾಗಿದೆ. ಭಾರತದಲ್ಲಿ ಗಾಂಧೀಜಿಯವರ "ಗ್ರಾಮಸ್ವರಾಜ್ಯ" ಕಲ್ಪನೆಗೆ ಕಾನೂನಿನ ರೂಪವನ್ನು ನೀಡಿರುವ ಮೊಟ್ಟ ಮೊದಲ ರಾಜ್ಯವೂ ಸಹ ಕರ್ನಾಟಕ. ಅದರಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವ್ಯವಸ್ಥೆಗೆ ಕಂಕಣ ತೊಟ್ಟು ಗ್ರಾಮ ಪಂಚಾಯತಿಗಳಿಗೆ ಹೆಚ್ಚಿನ ಆರ್ಥಿಕ ಮತ್ತು ಆಡಳಿತ ಬಲನೀಡಲಾಗಿದೆ. ಕರ್ನಾಟಕ ಸರ್ಕಾರ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಜಾರಿಗೆ ತರುವ ಗ್ರಾಮೀಣಾಭಿವೃದ್ಧಿ ಯೋಜನೆಗಳು ಫಲಶೃತಿ ಕಾಣಲು ಮತ್ತು ನಿಜವಾದ ಫಲಾನುಭವಿಗಳಿಗೆ




ತಲುಪಲು ಬಹು ಮುಖ್ಯ ಪಾತ್ರವಹಿಸುವ ಗ್ರಾಮ ಪಂಚಾಯತಿಗಳು ಗ್ರಾಮೀಣ ಪ್ರದೇಶಗಳ ಬಡತನದ ನೈಜ ಅಗತ್ಯತೆಗಳನ್ನು ಪರಿಗಣಿಸಬೇಕು. ಈ ಗ್ರಾಮ ಪಂಚಾಯತಿಗಳು ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ 1993 ರ ಕಾನೂನು ಚೌಕಟ್ಟಿನಲ್ಲಿ ಕಾರ್ಯನಿರ್ವಹಿಸುತ್ತಿದೆ. ಅದರಂತೆ ಇನ್ನು ಮುಂದೆ ಈ ಒಂದು ಕಾಯಿದೆಯನ್ನು ನೂತನ ಹೆಸರಿನೊಂದಿಗೆ ತಿದ್ದುಪಡಿ ಮಾಡಲಾಗಿದೆ. ಅದರಂತೆ ಕರ್ನಾಟಕ ಸರ್ಕಾರವು ವಿಧಾನಸಭೆಯ ಮಾನ್ಯ ಶಾಸಕರಾದ ಶ್ರೀ ಕೆ.ಆರ್.ರಮೇಶ್ ಕುಮಾರ್ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಸಮಿತಿಯನ್ನು ರಚಿಸಿದೆ. ಈ ಒಂದು ಸಮಿತಿಯು ನೀಡಿದ ಬಹುತೇಕ ಶಿಫಾರಸ್ಸು ಅಂಶಗಳನ್ನು ಪರಿಗಣಿಸಿ ಕರ್ನಾಟಕ ಸರ್ಕಾರವು "ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ" 1993 ಎಂದು ತಿದ್ದುಪಡಿ ಮಾಡಲಾಗಿದೆ.

ಅದರಂತೆ ಈ ಒಂದು ತಿದ್ದುಪಡಿ ಕಾಯ್ದೆಯು ದಿನಾಂಕ : 25-02-2016 ರಂದು ಅಧಿಕೃತವಾಗಿ ಕಾನೂನು ಚೌಕಟ್ಟಿನಲ್ಲಿ ಜಾರಿಗೆ ತರಲಾಗಿದೆ. ಅದರಂತೆ ಗಾಂಧೀಜಿಯವರ ಗ್ರಾಮೀಣ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಗ್ರಾಮ ಪಂಚಾಯತಿಗಳನ್ನು ಆಡಳಿತ ಮತ್ತು ಆರ್ಥಿಕವಾಗಿ ಸಬಲೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಕರ್ನಾಟಕ ಗ್ರಾಮಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ನ್ನು ಕರ್ನಾಟಕದ ಎಲ್ಲಾ ಪಂಚಾಯತ್ ರಾಜ್‌ನ ಸ್ಥಳೀಯ ಸಂಸ್ಥೆಗಳಲ್ಲಿ ಕರ್ನಾಟಕ ಸರ್ಕಾರವು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಕಾರದೊಂದಿಗೆ ಜಾರಿಗೆ ತಂದಿದ್ದು, ಅದನ್ನು ಆಡಳಿತ ಮತ್ತು ಆರ್ಥಿಕ ಅಭಿವೃದ್ಧಿಯಲ್ಲಿ ಉತ್ತಮ ಕಾರ್ಯನಿರ್ವಹಣೆ ಮಾಡಿದ ಗ್ರಾಮ ಪಂಚಾಯತಿಗಳಿಗೆ ನೀಡುತ್ತಿರುವುದು ಅರ್ಥಪೂರ್ಣವಾಗಿದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ನ್ನು ಸದೃಢ ಮತ್ತು ಬಲಿಷ್ಠವಾಗಿ ಜಾರಿಗೊಳಿಸಿರುವುದು ಅಖಂಡ ಕರ್ನಾಟಕದ ಗ್ರಾಮಗಳ ಅಭಿವೃದ್ಧಿಯ ಒಂದು ರೀತಿಯ "ಕ್ರಾಂತಿಕಾರಿ ಹೆಜ್ಜೆ" ಎಂದರೆ ಅತಿಶಯೋಕ್ತಿಯಾಗಲಾರದು. ಕರ್ನಾಟಕ ಸರ್ಕಾರವು ಮಾಜಿ ಶಾಸಕರಾದ ಎಸ್.ಜಿ. ನಂಜಯ್ಯನಮಠರವರ ಅಧ್ಯಕ್ಷತೆಯಲ್ಲಿ 460 ಹೊಸ ಗ್ರಾಮ ಪಂಚಾಯ್ತಿಗಳನ್ನು ರಚಿಸುವುದರ ಮೂಲಕ ಪ್ರಸ್ತುತ ಕರ್ನಾಟಕದಲ್ಲಿ ಗ್ರಾಮ ಪಂಚಾಯತಿಗಳ ಸಂಖ್ಯೆ 6020 ಆಗಿದೆ. ಆ ನಿಟ್ಟಿನಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ಬಹುಮುಖ್ಯವಾಗಿ ಗ್ರಾಮಗಳಿಗೆ ನಿಕಟಸಂಪರ್ಕ ಹೊಂದಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್‌ನ ಯೋಜನೆ ಮತ್ತು ಕಾರ್ಯಕ್ರಮಗಳನ್ನು ತಲುಪಿಸುವಲ್ಲಿ ಯಶಸ್ವಿಯಾಗಲಿ ಎಂದು ಸಮಸ್ತ ಕರ್ನಾಟಕದ ಜನತೆಯ ಪರವಾಗಿ ತುಂಬು ಹೃದಯದಿಂದ ಹಾರೈಸಲಾಗುತ್ತದೆ.

ಲೇಖನ



ತುಕಾರಾಂ ರಾವ್ ಬಿ. ವಿ.

# ಶೌಚಾಲಯ ನಿರ್ಮಾಣ ಜಾಗೃತಿಯೇ ಮಹಮ್ಮದ್ ರಫಿ ಅವರ ನಿತ್ಯ ಕಾಯಕ

ಗಂಗಾವತಿ ತಾಲೂಕು ಪಂಚಾಯಿತಿ ಸದಸ್ಯ ಮಹಮ್ಮದ್ ರಫಿಯವರು ಒಂದು ತಂಡವನ್ನು ರಚಿಸಿಕೊಂಡು, ತಮ್ಮ ಕ್ಷೇತ್ರದಲ್ಲಿ ಶೌಚಾಲಯ ನಿರ್ಮಾಣ ವಿಷಯದಲ್ಲಿ ಜಾಗೃತಿ ಮೂಡಿಸುತ್ತಿದ್ದು, ಉಳಿದವರಿಗೆ ಮಾದರಿಯಾಗಿದ್ದಾರೆ.

ತಾನು ಪ್ರತಿನಿಧಿಸುವ ಕ್ಷೇತ್ರವನ್ನು ಸಂಪೂರ್ಣ ಬಯಲು ಶೌಚ ಮುಕ್ತವನ್ನಾಗಿಸಲು ಪಣ ತೊಟ್ಟಿರುವ ಗಂಗಾವತಿ ತಾಲ್ಲೂಕಿನ ಶ್ರೀರಾಮನಗರ ಕ್ಷೇತ್ರದ ತಾಲೂಕು ಪಂಚಾಯತಿ ಸದಸ್ಯ ಮಹಮ್ಮದ್ ರಫಿ ಅವರು ಹತ್ತು ಜನರ ತಂಡವನ್ನು ರಚಿಸಿಕೊಂಡು, ನಿತ್ಯ ತಮ್ಮ ಕ್ಷೇತ್ರದಲ್ಲಿ ಶೌಚಾಲಯ ನಿರ್ಮಾಣ ವಿಷಯದಲ್ಲಿ ಜಾಗೃತಿ ಮೂಡಿಸುತ್ತಿದ್ದು, ಉಳಿದವರಿಗೆ ಮಾದರಿಯಾಗಿದ್ದಾರೆ.



ತಾಲ್ಲೂಕು ಪಂಚಾಯತ್ ಸದಸ್ಯ ಮಹಮ್ಮದ್ ರಫಿ ಅವರು ತಮ್ಮದೇ ಆದ ಒಂದು ತಂಡವನ್ನು ರಚಿಸಿಕೊಂಡು ಬಯಲು ಶೌಚ ಮುಕ್ತ ಕ್ಷೇತ್ರವನ್ನಾಗಿಸಲು ಹಗಲು ಇರುಳು ಶ್ರಮಿಸುತ್ತಿದ್ದಾರೆ. 10 ಜನರನ್ನೊಳಗೊಂಡ ತಂಡ ಮಹಮ್ಮದ್ ರಫಿ ಅವರ ಮುಂದಾಳತ್ವದಲ್ಲಿ ಪ್ರತಿದಿನ ಬೆಳಗ್ಗ 5 ಗಂಟೆಗೆ ಜಾಗೃತಿ ಅಭಿಯಾನ ಆರಂಭಿಸುತ್ತದೆ. ಬಯಲು ಶೌಚಕ್ಕೆ ಹೋಗುವವರನ್ನು ತಡೆದು ಸ್ವಚ್ಛತೆಯ ಬಗ್ಗೆ ಮತ್ತು ಗ್ರಾಮದ ನೈರ್ಮಲ್ಯದ ಬಗ್ಗೆ ಮಾಹಿತಿ ನೀಡುವುದರ ಜೊತೆ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳುವಂತೆ ಮನವಿ ಮಾಡಲಾಗುತ್ತಿದೆ. ಶೌಚಾಲಯ ನಿರ್ಮಾಣಕ್ಕೆ ಮುಂದಾದ ಬಡವರಿಗೆ ಶೌಚಾಲಯ

ಜಿಲ್ಲಾ ವಾರ್ತಾಧಿಕಾರಿ, ಕೊಪ್ಪಳ



ನಿರ್ಮಾಣಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸ್ವತಃ ತಾವೇ ಕೊಡಿಸಿ ಶೌಚಾಲಯ ನಿರ್ಮಿಸಿ ಕೊಡುತ್ತಿರುವುದು ವಿಶೇಷ.

ಕೆಲ ದಿನಗಳ ಹಿಂದೆ ಶ್ರೀರಾಮನಗರದ ಗ್ರಾ.ಪಂ ಅಧ್ಯಕ್ಷ ಶ್ರೀನಿವಾಸ ಕರಟೂರಿ ಅವರೂ ಕೂಡ ಬಯಲು ಶೌಚಕ್ಕೆ ಹೊರಟವರನ್ನು ತಡೆದು ವೈಯಕ್ತಿಕ ಶೌಚಾಲಯ ಕಟ್ಟಿಕೊಳ್ಳುವಂತೆ ಕಾಲಿಗೆ ನಮಸ್ಕರಿಸಿ ಮನವಿ ಮಾಡಿಕೊಂಡಿದ್ದರು.



ಹಾಗೆಯೇ ಶೌಚಾಲಯ ಕಟ್ಟಿಕೊಳ್ಳಲು ಮುಂದಾದವರಿಗೆ ಶೌಚಾಲಯದ ಫ್ಯಾನ್ ಉಚಿತವಾಗಿ ವಿತರಿಸಿ ಎಲ್ಲರ ಗಮನ ಸೆಳೆದಿದ್ದನ್ನು ಇಲ್ಲಿ ಸ್ಮರಿಸಬಹುದು. ಮಹಮ್ಮದ್ ರಫಿ ಅವರು, ಬಡವರಿಗೆ ಶೌಚಾಲಯ ಕಟ್ಟಿಸಲು, ಗ್ರಾಮದ ಕೆಲ ಶ್ರೀಮಂತರಿಂದ ತಾತ್ಕಾಲಿಕವಾಗಿ ಪ್ರೋತ್ಸಾಹ ಧನ ಸಂಗ್ರಹಿಸಿ ಶೌಚಾಲಯ ನಿರ್ಮಿಸಿ, ನಂತರ ಶೌಚಾಲಯ ನಿರ್ಮಾಣಕ್ಕೆ ಸರ್ಕಾರದಿಂದ ಬರುವ ಸಹಾಯಧನವನ್ನು ಮರುಪಾವತಿ ಮಾಡುವ ಆಲೋಚನೆ ಮಾಡಿದ್ದಾರೆ.

ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ಗಂಗಾವತಿ ತಾಲ್ಲೂಕನ್ನು ಅಕ್ಟೋಬರ್-2 ರೊಳಗಾಗಿ ಬಯಲು ಬಹಿರ್ದೆಸೆ ಮುಕ್ತ ಮಾಡಲು ತಾ.ಪಂ ಸದಸ್ಯ ಮಹಮ್ಮದ್ ರಫಿ ಅವರ ತಂಡ ಪಣ ತೊಟ್ಟಿದ್ದು, ಈ ನಿಟ್ಟಿನಲ್ಲಿ ಮನೆ-ಮನೆ ಭೇಟಿ ನೀಡಿ ವೈಯಕ್ತಿಕ ಶೌಚಾಲಯ ನಿರ್ಮಿಸಿ



ಕೊಳ್ಳುವಂತೆ ಜನರಲ್ಲಿ ವಿನಂತಿಸಿ ಕೊಳ್ಳುತ್ತಾ ಜನರಲ್ಲಿ ಜಾಗೃತಿ ಮೂಡಿಸುತ್ತಿದ್ದಾರೆ. ಹಲವರು ಇವರ ಜಾಗೃತಿ ಅಭಿಯಾನದಿಂದ ಪ್ರೇರೇಪಣೆ ಗೊಂಡು ವೈಯಕ್ತಿಕ ಶೌಚಾಲಯ ನಿರ್ಮಿಸಿ ಕೊಳ್ಳುತ್ತಿದ್ದು, ಇವರ ಕಾರ್ಯಕ್ಕೆ ಹಲವರು ಮೆಚ್ಚುಗೆ ವ್ಯಕ್ತ ಪಡಿಸುತ್ತಿದ್ದಾರೆ.

ಇವರಂತೆಯೇ ಉಳಿದ ಜನಪ್ರತಿನಿಧಿಗಳು ಬಯಲು ಶೌಚ ಮುಕ್ತ ಅಭಿಯಾನ ಜಾಗೃತಿ ಕೈಗೊಂಡಲ್ಲಿ ಕೊಪ್ಪಳ ಜಿಲ್ಲೆ ಇನ್ನು ಕೆಲವೇ ದಿನಗಳಲ್ಲಿ ರಾಜ್ಯದಲ್ಲಿಯೇ ಮೊದಲ ಬಯಲು ಶೌಚ ಮುಕ್ತ ಜಿಲ್ಲೆಯಾಗಿ ಹೊರಹೊಮ್ಮಲಿದೆ ಎಂಬುದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಆರ್. ರಾಮಚಂದ್ರನ್ ರವರ ಅಭಿಪ್ರಾಯವಾಗಿದೆ.

❄

ಲೇಖನ

# ಸ್ವಚ್ಛ ಪರಿಸರ ಸಂರಕ್ಷಣೆಗೆ ಸಾರ್ವಜನಿಕರ ಸಹಕಾರ ಅಗತ್ಯ



ಬಂಡೆಪ್ಪ ಜಿ. ತೇಲಿ

ಪರಿಸರ ಸಂರಕ್ಷಿಸಿ, ಜನರ ಆರೋಗ್ಯ ಹಾಗೂ ವಾತಾವರಣ ಕಲುಷಿತವಾಗದಂತೆ ನೋಡಿಕೊಳ್ಳಲು ಜನಸಾಮಾನ್ಯರ ಸಹಕಾರ ಅತ್ಯಾವಶ್ಯಕವಾಗಿದೆ.

ಭಾರತವನ್ನು ಸ್ವಚ್ಛ ಹಾಗೂ ಸುಂದರ ಪರಿಸರವನ್ನಾಗಿಸುವ ಕನಸನ್ನು ಹೊತ್ತಿರುವ ಭಾರತ ಸರಕಾರದ ಸಂಕಲ್ಪವನ್ನು ಸಾಕಾರಗೊಳಿಸಲು ದೇಶದ ಪ್ರತಿಯೊಬ್ಬ ನಾಗರಿಕರು ಪರಿಸರ ಸಂರಕ್ಷಣೆಗೆ ಸ್ವಯಂಪ್ರೇರಣೆಯಿಂದ ಕೈ ಜೋಡಿಸಿದಲ್ಲಿ ಮಾತ್ರ ದೇಶದಲ್ಲಿ ಸ್ವಚ್ಛ ಪರಿಸರ ವಾತಾವರಣ ನಿರ್ಮಾಣ ಮಾಡಲು ಸಾಧ್ಯವಾಗುವದು. ಪೂಜ್ಯ ಮಹಾತ್ಮ ಗಾಂಧೀಜಿಯವರ ಕನಸು ಕೂಡ ಇದಾಗಿತ್ತು. ಆದ್ದರಿಂದ ಪ್ರತಿಯೊಬ್ಬರು ಪರಿಸರ ಜಾಗೃತಿ ಕಾರ್ಯದಲ್ಲಿ ಭಾಗವಹಿಸಿದಲ್ಲಿ ಉತ್ತಮ ಪರಿಸರವನ್ನು ಉಳಿಸಲು ಸಹಕಾರಿಯಾಗುವುದು.




ದೇಶದ ಪ್ರತಿಯೊಂದು ನಗರ, ಪಟ್ಟಣ ಮತ್ತು ಗ್ರಾಮೀಣ ಪ್ರದೇಶವನ್ನು ಸ್ವಚ್ಛವಾಗಿಡುವದು ಪ್ರತಿಯೊಬ್ಬರ ಆರೋಗ್ಯಕರ ಬೆಳವಣಿಗೆಗೆ ಸಹಕಾರಿಯಾಗಿದೆ. ಮನೆಯನ್ನು ಸ್ವಚ್ಛವಾಗಿಟ್ಟರೆ ಬಡಾವಣೆ ಸ್ವಚ್ಛವಾಗಿಟ್ಟಂತೆ ಬಡಾವಣೆ ಸ್ವಚ್ಛವಾಗಿಟ್ಟರೆ ಇಡಿ ನಗರ ಮತ್ತು ಗ್ರಾಮಗಳನ್ನು ಸ್ವಚ್ಛವಾಗಿಟ್ಟಂತೆ ಪ್ರತಿ ಗ್ರಾಮಗಳನ್ನು ಮತ್ತು ನಗರವನ್ನು ಸ್ವಚ್ಛವಾಗಿಟ್ಟರೆ ಇಡಿ ದೇಶವನ್ನು ಸ್ವಚ್ಛವಾಗಿಟ್ಟಂತೆ ಆದ್ದರಿಂದ ಪ್ರತಿಯೊಬ್ಬರು ದಿನದ ಒಂದು ಗಂಟೆಯಾದರೂ ಸ್ವಚ್ಛ ಪರಿಸರಕ್ಕೆ ಸಮಯ ಮೀಸಲಿಡಬೇಕು ಅಂದಾಗ ಮಾತ್ರ ಸಮಾಜದ ಪ್ರತಿಯೊಬ್ಬರಲ್ಲಿಯೂ ಕೂಡ ಪರಿಸರ ಪ್ರಜ್ಞೆ ಮೂಡಲು ಸಾಧ್ಯವಾಗುವದರಲ್ಲಿ ಸಂದೇಹವಿಲ್ಲ.

ಪರಿಸರ ಸ್ವಚ್ಛವಾಗಿಡುವದು ಬರೀ ಸರಕಾರದ ಮತ್ತು ಸ್ಥಳೀಯ ಸಂಸ್ಥೆಗಳ ಕೆಲಸವಾದರೆ ಸಾಲದು, ಇದಕ್ಕೆ ಸಮುದಾಯದ ಪಾತ್ರವು ಅತ್ಯಗತ್ಯವಾಗಿದೆ. ಸ್ವಚ್ಛ ಪರಿಸರಕ್ಕೆ ಕೇಂದ್ರ ಸರಕಾರ ಆಯಾ ರಾಜ್ಯಗಳ

ಕಾರ್ಯದರ್ಶಿ ಗ್ರಾಮ ಪಂಚಾಯತ, ದೇವರನಾವದಗಿ, ತಾ|| ಸಿಂದಗಿ ಜಿ|| ವಿಜಯಪುರ




ಸಹಭಾಗಿತ್ವದಲ್ಲಿ ಸ್ವಚ್ಛ ಪರಿಸರಕ್ಕೆ ಹೆಚ್ಚು ಆದ್ಯತೆ ನೀಡಿದೆ. ಈ ಮಹಾಕಾರ್ಯದಲ್ಲಿ ಜನರ ಸಹಭಾಗಿತ್ವವು ಅತೀ ಅವಶ್ಯಕವಾಗಿದ್ದು, ಪ್ರತಿಯೊಬ್ಬರು ಒಟ್ಟಾಗಿ ಪರಿಸರ ಸಂರಕ್ಷಣೆಗೆ ಕೈ ಜೋಡಿಸಿದರೆ ಮಾತ್ರ ದೇಶವನ್ನು ಸ್ವಚ್ಛ ಸುಂದರವನ್ನಾಗಿಸಲು ಸಾಧ್ಯವಾಗುವುದು.

ಸ್ವಚ್ಛ ಪರಿಸರವೆಂದರೆ ಕೇವಲ ಸ್ವಚ್ಛ ಗೊಳಿಸುವುದು ಅಷ್ಟೇ ಅಲ್ಲ ಇಂಧನ ಬಳಕೆ ನಿಯಂತ್ರಗೊಳಿಸುವುದು, ಸ್ವಚ್ಛ ಪರಿಸರ ಉಳಿಸುವುದು, ಪ್ಲಾಸ್ಟಿಕ್ ಬಳಕೆ ನಿಷೇಧಿಸುವುದು, ಆರೋಗ್ಯಕರ ವಾತಾವರಣ ನಿರ್ಮಿಸುವುದು ಸೇರಿದಂತೆ ನಾನಾತರಹದ ಕಟ್ಟುಪಾಡುಗಳನ್ನು ನಿಯಂತ್ರಿಸಿದಲ್ಲಿ ಮಾತ್ರ ಸ್ವಚ್ಛ ಪರಿಸರವನ್ನು ಶುದ್ಧಿಕರಿಸಲು ಸಾಧ್ಯವಾಗುವುದು. ಪ್ರತಿಯೊಂದು ಮನೆ ಬಳಕೆಗೆ ಪ್ಲಾಸ್ಟಿಕ ಬಳಸುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗು ವುದು ಅದನ್ನು ಸಂಪೂರ್ಣವಾಗಿ ನಿಷೇಧಿಸಿದಲ್ಲಿ ಮಾತ್ರ ಎಲ್ಲರೂ ಆರೋಗ್ಯವಂತ ರಾಗಿರಲು ಸಾಧ್ಯವಾಗುವದು.

ಸ್ವಚ್ಛ ಪರಿಸರ ಸಂರಕ್ಷಣೆಗೆ ರಾಜ್ಯದ ಪ್ರತಿ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ನಗರಾಭಿವೃದ್ಧಿ ಪ್ರಾಧಿಕಾರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ತಾಲ್ಲೂಕು ಪಂಚಾಯತ್, ನಗರಸಭೆ, ಪುರಸಭೆ, ಗ್ರಾಮ ಪಂಚಾಯತಿ ಮತ್ತು ಪರಿಸರ ಸಂಘಟನೆಗಳು ಸೇರಿದಂತೆ ಎಲ್ಲ ಆಡಳಿತ ವರ್ಗಗಳು ಜಂಟಿಯಾಗಿ ಪರಿಸರ ಸಂರಕ್ಷಣೆಗೆ ಕಾರ್ಯಾಚರಣೆ ಮಾಡಿದಲ್ಲಿ ಪ್ರತಿ ಪಟ್ಟಣಗಳು, ನಗರಗಳು, ಪ್ರತಿ ಗ್ರಾಮಗಳನ್ನು ಸ್ವಚ್ಛವಾಗಿಡಲು ಸಾಧ್ಯ.

ಕೇಂದ್ರ ಮತ್ತು ರಾಜ್ಯ ಸರಕಾರ ಗ್ರಾಮೀಣ ಸ್ವಚ್ಛ ಪರಿಸರಕ್ಕೆ ಅದರಲ್ಲಿ ವಿಶೇಷವಾಗಿ ಗ್ರಾಮೀಣ ಜನರ ಜೀವನ ಮಟ್ಟವನ್ನು ಆರೋಗ್ಯಪೂರ್ಣ ವಾಗಿಡಲು ಗ್ರಾಮೀಣ ಪ್ರದೇಶದಲ್ಲಿ ರೂಢಿಯಲ್ಲಿರುವ ಬಯಲು ಮಲವಿಸರ್ಜನೆ ನಿರ್ಮೂಲನೆಗೆ ಹೆಚ್ಚು ಆದ್ಯತೆ ನೀಡಿದೆ. ಗ್ರಾಮೀಣ ಪ್ರದೇಶದಲ್ಲಿ ಉತ್ತಮ ಪರಿಸರ ನಿರ್ಮಿಸಲು ಪ್ರತಿ ಕುಟುಂಬವು ವೈಯುಕ್ತಿಕ ಶೌಚಾಲಯು ನಿರ್ಮಿಸಿಕೊಂಡು ಗ್ರಾಮೀಣ ಪರಿಸರವನ್ನು ಸ್ವಚ್ಛವಾಗಿಡಬೇಕು. ಸರ್ಕಾರದ ಸಂಕಲ್ಪವು ಇದಾಗಿದೆ. ಆದ್ದರಿಂದ ಸ್ಥಳೀಯ ಸಂಸ್ಥೆಗಳು ಪರಿಸರ ಜಾಗೃತಿ ಕುರಿತು ಸಾರ್ವಜನಿಕರಲ್ಲಿ ಅರಿವು ಮೂಡಿಸಿ ವೈಯಕ್ತಿ ಶೌಚಾಲಯ ನಿರ್ಮಿಸಿ ಕೊಳ್ಳುವಂತೆ ಜನರನ್ನು ಪರಿವರ್ತನೆಗೊಳಿಸುವುದು ಅತ್ಯಾವಶ್ಯಕವಾಗಿದೆ ಎನ್ನಬಹುದು.

ರಾಜ್ಯದಲ್ಲಿ ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ಬರ ಎದುರಿಸುತ್ತಿದ್ದೇವೆ. ಮತ್ತು ಹಳ್ಳಿ ಹಳ್ಳಿಗಳಲ್ಲಿಯೂ ಕುಡಿಯುವ ನೀರಿಗಾಗಿ ಪರದಾಡುತ್ತಿದ್ದೇವೆ. ಮತ್ತು ಜಾನುವಾರುಗಳಿಗೆ ಕೂಡ ಆಹಾರ ಮತ್ತು ಕುಡಿಯುವ ನೀರಿಗೂ ಆಹಾಕಾರವಾಗಿದೆ. ಆದ್ದರಿಂದ ಬರವನ್ನು ಅಳಿಸಲು ಪ್ರತಿಯೊಬ್ಬರು ಮರ ಬೆಳೆಸಿ ಬರ ಅಳಿಸಬೇಕು. ಪ್ರತಿ ಮನೆಗೊಂದು ಸಸಿ ನೆಟ್ಟರೆ ಉತ್ತಮ ಪರಿಸರ ನಿರ್ಮಾಣ ಮಾಡಬಹುದು. ಗ್ರಾಮೀಣ ಪ್ರದೇಶದಲ್ಲಿ ಸಾಕಷ್ಟು ಸರಕಾರದ ಭೂಮಿ ಇದ್ದು ಅಂತಹ ಪ್ರದೇಶದಲ್ಲಿ ಅರಣ್ಯ ಬೆಳೆಸಿದರೆ ಬರ ಅಳಿಸಬಹುದಾಗಿದೆ. ದೇಶದ ಸರ್ವೊತೋಮುಖ ಅಭಿವೃದ್ಧಿಯಲ್ಲಿ ಸ್ವಚ್ಛ ಪರಿಸರವು ಕೂಡಾ ಒಂದಾಗಿದೆ. ಆದ್ದರಿಂದ ಒಟ್ಟಿನಲ್ಲಿ ಪರಿಸರ ಸಂರಕ್ಷಣೆಗೆ ಎಲ್ಲರೂ ಸ್ವಯಂ ಪ್ರೇರಣೆಯಿಂದ ಮುಂದಾಗಬೇಕಾಗಿದೆ. ಉತ್ತಮ ಪರಿಸರ ಸಂರಕ್ಷಿಸಲು ಎಲ್ಲರೂ ಒಟ್ಟಾಗಿ ಕೈ ಜೋಡಿಸೋಣ ಉತ್ತಮ ಪರಿಸರ ನಿರ್ಮಿಸೋಣ.

❄

# ಜನ ಮೆಚ್ಚಿದ ಉದ್ಯಾನವನ

– ಎಂ. ಸುಂದರ್

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಸೂಲಿಬೆಲೆ ಗ್ರಾಮ ಪಂಚಾಯಿತಿಯು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರದಿಂದ 41 ಕಿ.ಮೀ, ಹೊಸಕೋಟೆ ತಾಲ್ಲೂಕು ಕೇಂದ್ರದಿಂದ 14 ಕಿ.ಮೀ ದೂರದಲ್ಲಿದ್ದು, ಹೋಬಳಿ ಕೇಂದ್ರ ಹಾಗೂ ತಾಲ್ಲೂಕಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿದ ಗ್ರಾಮವಾಗಿರುತ್ತದೆ. ಗ್ರಾಮ



ಪಂಚಾಯತಿಯ ಭೌಗೋಳಿಕ ವಿಸ್ತೀರ್ಣ 686.92 ಹೆಕ್ಟೇರ್ ಪ್ರದೇಶ ಹಾಗೂ 8597 ಜನಸಂಖ್ಯೆ ಇದ್ದು ಇದರಲ್ಲಿ 1475 ಬಿಪಿಲ್, 362 ಎಪಿಲ್ ಕುಟುಂಬಗಳನ್ನು ಹೊಂದಿದ್ದು ಸೂಲಿಬೆಲೆ, ರಾಂಪುರ, ಕದಿರಿನಪುರ ಹಾಗೂ ಕೋಡಿಪುರ ಬೇಚಾರಕ್ ಗ್ರಾಮಗಳು ಕೂಡಿ ಗ್ರಾಮ ಪಂಚಾಯಿತಿಯ ಕೇಂದ್ರಸ್ಥಾನ ಸೂಲಿಬೆಲೆ ಆಗಿರುತ್ತದೆ.

ಸೂಲಿಬೆಲೆ ಗ್ರಾಮ ಪಂಚಾಯತಿಯ ಕಟ್ಟಡದ ಮುಂದೆ ಸುಮಾರು 20 ಗುಂಟೆ ಖಾಲಿ ಜಮೀನು ಇದ್ದು ಕೆಲವು ಗಿಡಮರಗಳು ಬೆಳೆದಿದ್ದವು. ಪ್ರತಿನಿತ್ಯ ನೂರಾರು ನಾಗರೀಕರು ವಿವಿಧ ಕೆಲಸ ಕಾರ್ಯಗಳಿಗಾಗಿ ಪಂಚಾಯತಿ ಕಚೇರಿಗೆ ಬಂದು ಹೋಗುತ್ತಿರುತ್ತಾರೆ. ಇವರ ಕಣ್ಮನ ಸೆಳೆಯವಂತೆ ಪಂಚಾಯತಿಯ ಮುಂದೆ ಇರುವ ಖಾಲಿ ಜಾಗದಲ್ಲಿ

ಹೊಸಕೋಟೆ ತಾಲ್ಲೂಕಿನ ಸೂಲಿಬೆಲೆ ಗ್ರಾಮ ಪಂಚಾಯಿತಿಯು ಕಛೇರಿಯ ಮುಂಭಾಗದಲ್ಲಿ ಸುಂದರವಾದ ಉದ್ಯಾನವನವನ್ನು ನಿರ್ಮಿಸಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಸೂಲಿಬೆಲೆ ಗ್ರಾಮ ಪಂಚಾಯತಿ,
ಹೊಸಕೋಟೆ ತಾ॥, ಬೆಂ. ಗ್ರಾಮಾಂತರ ಜಿಲ್ಲೆ



ಒಂದು ಗ್ರಾಮೀಣ ಉದ್ಯಾನವನವನ್ನು ನಿರ್ಮಿಸಬೇಕೆಂಬ ಪಂಚಾಯತಿಯ ಆಸಕ್ತಿಗೆ ಒಂದು ನಿರ್ಣಯ ಕೈಗೊಳ್ಳಲು ಸಹಾಯಕವಾಗಿದ್ದು 2015-16 ನೇ ಸಾಲಿನಲ್ಲಿ ಘೋಷಣೆಯಾದ ಮಾನ್ಯ ಮುಖ್ಯ ಮಂತ್ರಿಗಳ 21 ಅಂಶಗಳ ಕಾರ್ಯಕ್ರಮವಾದ 'ಗ್ರಾಮೀಣ ಉದ್ಯಾನವನ'. ಈ ಕಾಮಗಾರಿಯನ್ನು 2015-16ನೇ ಸಾಲಿನ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕ್ರಿಯಾಯೋಜನೆಯಲ್ಲಿ ಅಳವಡಿಸಿಕೊಂಡು ನೊಂದಾಯಿತ ಜಾಬ್‌ಕಾರ್ಡ್ ಹೊಂದಿರುವ ಕೂಲಿಕಾರ್ಮಿಕರ ಸಹಾಯದಿಂದ ಅನುಷ್ಠಾನ ಗೊಳಿಸಲಾಗಿದೆ. ಈ ಉದ್ಯಾನವನದ ಮಧ್ಯೆ ಧ್ವಜ ಸ್ಥಂಭವನ್ನು ನಿರ್ಮಿಸಲಾಗಿದೆ.

ಇದು ನೋಡುಗರ ಕಣ್ಮನ ಸೆಳೆಯುವಂತೆ ಕಾಣುತ್ತಿದೆ. ಪಂಚಾಯಿತಿಗೆ ಬರುವ ಎಲ್ಲಾ ನಾಗರೀಕರು ಹಚ್ಚ ಹಸಿರಿನಿಂದ ಕೂಡಿದ ಸುಂದರವಾದ ಉದ್ಯಾನವನವನ್ನು ನೋಡಿ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ.

ಉದ್ಯಾನವನದಲ್ಲಿ ಮಹಾತ್ಮ ಗಾಂಧೀಜಿ ಯವರ ಪ್ರತಿಮೆಯನ್ನು ಪ್ರತಿಷ್ಠಾಪಿಸಲಾಗಿದೆ. ಇದರಿಂದ ಪಂಚಾಯಿತಿಯ ಸುತ್ತಮುತ್ತ ಒಳ್ಳೆಯ ವಾತಾವರಣ ನಿರ್ಮಾಣವಾಗಿದ್ದು, ಪಂಚಾಯತಿಗೆ ದಿನನಿತ್ಯ ಬಂದು ಹೋಗುವ ಎಲ್ಲರಿಗೂ ತುಂಬಾ ಉಪಯುಕ್ತವಾಗಿದೆ.

ಸೂಲಿಬೆಲೆ ಗ್ರಾಮದ ಪಂಚಾಯತಿ ಕಚೇರಿಯ ಆವರಣದಲ್ಲಿ ಉದ್ಯಾನವನ ಕಾಮಗಾರಿ ಮಾಡಿದ ಕೂಲಿ ಕಾರ್ಮಿಕರು ಕೂಡ ಇಂತಹ ಕೆಲಸ ಮಾಡಿರುವುದಕ್ಕೆ ಹರುಷ ವ್ಯಕ್ತಪಡಿಸಿದ್ದಾರೆ.

❄






ಪ್ರೊ. ಎ. ಎಚ್. ಮಾಸಾಪತಿ

ವೈದ್ಯಕೀಯ ಶಿಕ್ಷಣ ಹಾಗೂ ಅಭ್ಯೆಯಲ್ಲಿ ಮಾನವೀಯತೆ ಮತ್ತು ಸಾಮಾಜಿಕ ವಿಜ್ಞಾನಗಳನ್ನು ಸೇರ್ಪಡೆಗೊಳಿಸುವ ಅಗತ್ಯವಿದೆ. ಈ ವಿಷಯಗಳಲ್ಲಿ, ಎಲ್ಲ ವೈದ್ಯರಿಗಾಗಿ ಕನಿಷ್ಠ ಅಗತ್ಯದ ತರಬೇತಿಯನ್ನು ಪಠ್ಯಕ್ರಮದಲ್ಲಿ ಸೇರಿಸುವುದು ಅಗತ್ಯವಾಗಿದೆ.

# ಆರೋಗ್ಯ ಶಿಕ್ಷಣ ಮತ್ತು ಮಾನವಾಭಿವೃದ್ಧಿ

ಸಮಕಾಲೀನ ಬಂಡವಾಳಶಾಹಿ ಜಗತ್ತಿನಲ್ಲಿ 'ಸರ್ವರಿಗೂ ಆರೋಗ್ಯ' ಎಂಬ ಸಮಾಜವಾದಿ ಆದರ್ಶವನ್ನು ಸಂಘರ್ಷಣೆಗೆ ಗುರಿಪಡಿಸಲಾಗಿದೆ. ವೈದ್ಯಕೀಯ ಶಿಕ್ಷಣವು ಸಮರ್ಥ ವೃತ್ತಿಪರರನ್ನು ಸೃಷ್ಟಿಸಲು ಕೌಶಲ್ಯಾಧಾರಿತವಾಗಬೇಕು. ಪ್ರಾಥಮಿಕ ಆರೋಗ್ಯ ಕಾಳಜಿ ವ್ಯವಸ್ಥೆಯಲ್ಲಿ ಮಾನಸಿಕ ಆರೋಗ್ಯವನ್ನು ಪರಿಣಾಮಕಾರಕವಾಗಿ ಏಕೀಕರಣಗೊಳಿಸಲು ಸಾಮಾನ್ಯ ಆರೋಗ್ಯದ ಮೂಲ ಸೌಲಭ್ಯಗಳ ಸಶಕ್ತೀಕರಣ ಮತ್ತು ಪ್ರಾಥಮಿಕ ಆರೋಗ್ಯ ಕಾಳಜಿ ವಿತರಣೆಯು ಕಡ್ಡಾಯವಾಗಿದೆ. ಭಾರತದ ಬದಲಾವಣೆ ಹೊಂದಿದ ವಾಸ್ತವಿಕತೆಯು ಖಾಸಗಿ ವಲಯದ




ಉಪಯುಕ್ತತೆಯನ್ನೊಳಗೊಂಡಿರುವ ಹೊಸ ತಾಂತ್ರಿಕ ಮಾಹಿತಿಯನ್ನು ಅಪೇಕ್ಷಿಸುತ್ತದೆ. ಸಾಮೂಹಿಕ ಮಾಧ್ಯಮದ ಮೂಲಕ ಸಾರ್ವಜನಿಕರಿಗೆ ಆರೋಗ್ಯದ ಬಗೆಗೆ ಶಿಕ್ಷಣ ನೀಡುವುದರಿಂದ ಆರೋಗ್ಯ ಸೇವೆಗಳ ಬೇಡಿಕೆ ಹೆಚ್ಚುತ್ತದೆ.

ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳು ಹಾಗೂ ಧುರೀಣರು ವಿಫಲವಾದ ಕಾರ್ಯಕ್ರಮಗಳನ್ನು ಏಕೆ ಪುನರ್ ರೂಪಿಸಿ, ಮರುಪರಿಚಯಿಸುವರೆಂಬ ಪ್ರಶ್ನೆಯನ್ನು ಕೇಳಲಾಗಿದೆ. ಅವರು ಚಟುವಟಿಕೆಗೆ ಅಂತಿಮ ಸಿದ್ಧಿ, ಸಮರ್ಥನೆಗೆ ತಾಂತ್ರಿಕ ಧುರೀಣತ್ವ ಹಾಗೂ ಪರಿಹಾರವೆಂದು ದೋಷಯುಕ್ತವಾಗಿ ಪರಿಗಣಿಸುವಂತೆ ಕಾಣುತ್ತದೆ. ಅಯಶಸ್ವಿಯಾದ ತಂತ್ರಗಳನ್ನು ಪುನರ್ ರೂಪಿಸುವಂತಹ

ನಿರ್ದೇಶಕರು, ವಿಕಾಸ ಪ್ರಕಾಶನ, ನಂ. 1/4, 1ನೇ ಅಡ್ಡರಸ್ತೆ, ಕೆ.ಎಚ್.ಬಿ. ರಸ್ತೆ,
ಸುಲ್ತಾನ್‌ಪಾಳ್ಯ, ಬೆಂಗಳೂರು – 560 0032

ಮೃದುಗೊಳಿಸಿದ ದಸ್ತಾವೇಜು, ಮಿನುಗುವ ಉದ್ಘಾಟನೆ, ಉತ್ತೇಜನಕಾರಕ ಉಪನ್ಯಾಸ ಮತ್ತು ಆಳವಿಲ್ಲದ ಆರೋಗ್ಯ ಕಾರ್ಯಕ್ರಮಗಳು, ಪ್ರಾಥಮಿಕ ಆರೋಗ್ಯ ಕಾಳಜಿ ವೃತ್ತಿಯಲ್ಲಿ ರೂಪಾಂತರಿಸುವ ಸಂಶೋಧನಾ ಸಾಕ್ಷಿಯ ಕಠಿಣವಾದ ತಾಂತ್ರಿಕ ಮಾಹಿತಿಗೆ ಪರ್ಯಾಯ ವಾಗಲಾರವು.

ಕ್ರಿಯಾಶೀಲವಾದ ಒಂದು ಎಚ್. ಆಯ್. ವಿ/ ಏಡ್ಸ್ ಮಾದರಿಯ ವ್ಯಾಪ್ತಿಯಲ್ಲಿ, ಬಳಕೆದಾರರು, ಕುಟುಂಬಗಳು, ಆಸಕ್ತ ಗುಂಪುಗಳು, ಆರೋಗ್ಯ ವೃತ್ತಿಪರರು ಹಾಗೂ ವಿಜ್ಞಾನಿಗಳು ಪರಿವರ್ತನೆಗಾಗಿ, ಸೇವಾ ಸೌಲಭ್ಯ ಪೂರೈಕೆಯ ಏಕೈಕ ಧ್ಯೇಯದೊಂದಿಗೆ ಸಮಾವೇಶವಾಗುತ್ತಾರೆ. ಆದರೆ, ಸುಲಭಸಾಧ್ಯವಿರುವ ಪರಿಣಾಮಕಾರಿ ಚಿಕಿತ್ಸೆ ಮತ್ತು ಸುಧಾರಿತ ರಾಷ್ಟ್ರೀಯ ಹಣಕಾಸಿನಿಂದ, ಆರೋಗ್ಯ ಸಂಬಂಧಿತ ಅವಶ್ಯಕತೆ ಹಾಗೂ ಸೇವೆಗಳ ನಡುವಿನ ವ್ಯತ್ಯಾಸವನ್ನು ಅಂತ್ಯಗೊಳಿಸಲು ಸಾಧ್ಯವಾಗಿಲ್ಲ. ಒಂದೆಡೆಗೆ, ಆರೋಗ್ಯ ಕಾಳಜಿ ವ್ಯವಸ್ಥೆಗೆ ಸಾಕಷ್ಟು ಹಣವನ್ನು ಪೂರೈಸಲಾಗಿದ್ದರೂ, ಹಣದ ವಿನಿಯೋಗ ಸಂಪೂರ್ಣವಾಗಿ ಆಗಿರುವುದಿಲ್ಲ. ಇನ್ನೊಂಡೆಗೆ,



ಆರೋಗ್ಯ ಸೇವೆಗಳಿಗಾಗಿ ವಿಪರೀತ ಹಣಕಾಸಿನ ಅಭಾವವಿದೆ. ಇಂತಹ ವಿಷಮ ಪರಿಸ್ಥಿತಿಯನ್ನು ಭಾರತದ ಹಲವಾರು ರಾಜ್ಯಗಳಲ್ಲಿ ಕಾಣಬಹುದಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ಹಲವಾರು ವಾಸ್ತವಿಕ ಸಂಗತಿಗಳು ಬೆಳಕಿಗೆ ಬಂದಿವೆ.

ದಕ್ಷಿಣ–ಪೂರ್ವ ಏಶಿಯಾದ ದೇಶಗಳು ಹಲವಾರು ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕೇತರ ರೋಗಗಳಿಂದ ಅಪಾರ ಕಷ್ಟ / ನಷ್ಟವನ್ನು ಅನುಭವಿಸುತ್ತವೆ. ಇಂತಹ ಕಠೋರ ವಾಸ್ತವಿಕತೆಯನ್ನು ಗಮನದಲ್ಲಿಟ್ಟುಕೊಂಡು ಪ್ರಗತಿಪರ ಧೋರಣೆ ಹಾಗೂ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕು. ಸಾಂಕ್ರಾಮಿಕೇತರ ರೋಗಗಳಿಂದ ಸಂಭವಿಸುವ ಆರೋಗ್ಯ ಕಾಳಜಿ ವೆಚ್ಚವು ಅತ್ಯಧಿಕವಾಗುತ್ತದೆ. ವಿವಿಧ ಪ್ರಕಾರದ ಹೊಸ ರೋಗಗಳಿಂದ ಉಂಟಾಗುವ ದೈಹಿಕ ದುರ್ಬಲತೆಯು ಮಾನವನ ಕಾರ್ಯ, ಶಕ್ತಿ, ಉತ್ಪಾದನಾ ಸಾಮರ್ಥ್ಯ ಮತ್ತು ಜೀವನ ಗುಣಮಟ್ಟದ ಮೇಲೆ ದುಷ್ಪರಿಣಾಮ ಬೀರುತ್ತದೆ.

### ಸಾರ್ವಜನಿಕ ಆರೋಗ್ಯ

ಜಗತ್ತಿನಾದ್ಯಂತ ಅನೇಕ ಆರೋಗ್ಯ ಕಾಳಜಿ ಯೋಜಕರು, ಮಧುಮೇಹ, ಅತಿಶಯ ಮಾನಸಿಕ ಉದ್ವೇಗ, ಹೃದಯಾಘಾತ, ಹೃದಯ ರಕ್ತನಾಳ ಸಂಬಂಧಿ ಸಮಸ್ಯೆಗಳಂತಹ ಸಾಂಕ್ರಾಮಿಕೇತರ ರೋಗಗಳಿಗೆ ಹೆಚ್ಚಿನ ಆದ್ಯತೆ ನೀಡಿರುವಂತೆ ಕಾಣುವುದಿಲ್ಲ. ಹಲವಾರು ಪರಿವರ್ತನಶೀಲ ಮತ್ತು ಹಿಂದುಳಿದ ದೇಶಗಳಂತೆ, ದಕ್ಷಿಣ–ಪೂರ್ವ ಏಶಿಯಾದ ರಾಷ್ಟ್ರಗಳು ಸಾಂಕ್ರಾಮಿಕ ರೋಗಗಳ ಮೇಲೆ ಲಕ್ಷ್ಯವನ್ನು ಕೇಂದ್ರೀಕರಿಸಿವೆ. ಕಳೆದ ಶತಮಾನದಲ್ಲಿ ರೋಗತಜ್ಞರು ಹಾಗೂ ಸಾರ್ವಜನಿಕ ಆರೋಗ್ಯ ಕಾರ್ಯಕರ್ತರು ಸಾಂಕ್ರಾಮಿಕ ರೋಗಗಳಿಗೆ ಪ್ರಧಾನ ಗಮನ ನೀಡಿದ್ದಾರೆ.

ಆಧುನಿಕ ಸಮಾಜದಲ್ಲಿ ಅತಿ ಶೀಘ್ರಗತಿ ಯಿಂದ ಬೆಳೆಯುತ್ತಿರುವ ಹೊಸ ಸಾಂಕ್ರಾಮಿಕೇತರ ರೋಗಗಳಿಗೆ ಸಾಕಷ್ಟು ಲಕ್ಷ್ಯ ಕೊಡಲು ಸಾಧ್ಯವಾಗಿಲ್ಲ. ಸಾಂಕ್ರಾಮಿಕ ರೋಗಗಳಿಗಿಂತಲೂ ಸಾಂಕ್ರಾಮಿಕೇತರ ರೋಗಗಳು ಹೆಚ್ಚು ಗಂಡಾಂತರಕಾರಿ ಆಗಿರುವುದರಿಂದ ಸಮಕಾಲೀನ ಆರೋಗ್ಯ ಸಮಸ್ಯೆಗಳು ಸಂಕೀರ್ಣವಾಗಿವೆ. ಸಾಂಕ್ರಾಮಿಕೇತರ ರೋಗಗಳು ಮಾನವನ

ಜೀವನದ ಶಕ್ತಿ / ಸಾಮರ್ಥ್ಯವನ್ನು ದುರ್ಬಲಗೊಳಿಸಿ, ಮೃತ್ಯುವಿನ ದವಡೆಯಲ್ಲಿ ಸಿಲುಕಿಸುತ್ತವೆ. ದಕ್ಷಿಣ-ಪೂರ್ವ ಏಶಿಯಾದಲ್ಲಿ ಮಾತೃತ್ವ / ಜನನಕೋಶ ಸಂಬಂಧಿತ ಮತ್ತು ಪೌಷ್ಠಿಕಾಂಶದ ಬಗೆಗಿನ ರೋಗಗಳಿಗಿಂತಲೂ,




ಅತ್ಯಧಿಕ ಸಂಖ್ಯೆಯ ಮರಣಗಳು, ಸಾಂಕ್ರಾಮಿಕೇತರ ರೋಗಗಳಿಂದ ಸಂಭವಿಸುತ್ತವೆ. ಇಂತಹ ರೋಗಗಳೊಂದಿಗೆ ಪರಿಣಾಮಕಾರಿಯಾಗಿ ಹೋರಾಟ ನಡೆಸಲು, 'ದೀರ್ಘಾವಧಿಯ ಆರೋಗ್ಯ ಕಾಳಜಿ' (Long Term Health Care) ಅಗತ್ಯವಾಗಿರುವುದರಿಂದ ಅನೇಕ ದೇಶಗಳು ತಮ್ಮ ಪರಿಶ್ರಮ ಪ್ರಯತ್ನ ಹಾಗೂ ಹಣಕಾಸು ಪೂರೈಕೆಯ ವಿಧಾನಗಳನ್ನು ಪುನರ್ ವ್ಯವಸ್ಥೆಗೆ ಗುರಿಪಡಿಸಬೇಕು. ಸಂಕೀರ್ಣವಾದ ನೂತನ ಜೀವನ ಶೈಲಿಯ ರೋಗಗಳು, ಅತ್ಯಾಧುನಿಕ ಸಾಮಾಜಿಕ/ಆರ್ಥಿಕ ಹೂಡಿಕೆಯನ್ನು ಅಪೇಕ್ಷಿಸುತ್ತವೆ.

ಹಲವಾರು ಪ್ರಧಾನ ಸಾಂಕ್ರಾಮಿಕೇತರ ರೋಗಗಳು ಪ್ರಬಲವಾದ ಸಾಮಾಜಿಕ ಮತ್ತು ಜೀವನ ಶೈಲಿಯ ಅಂಶಗಳನ್ನು ಹೊಂದಿವೆ. ಇಂತಹ ರೋಗಗಳ ನಿವಾರಣೆಗಾಗಿ, ಹೊಸ ಚಿಂತನೆ ಹಾಗೂ ಪ್ರತಿಬಂಧಕ ಮಾದರಿಗಳು (Dietary patterns) ಬದಲಾವಣೆ ಹೊಂದಿರುವುದರಿಂದ, ಗಂಭೀರ ಸ್ವರೂಪದ ಆರೋಗ್ಯ ಸಂಬಂಧಿತ ಸವಾಲುಗಳು ಉದ್ಭವಿಸಿವೆ. ಮಿತಿಮೀರಿದ ಆಹಾರ ಸೇವನೆಯು ಸ್ಥೂಲಕಾಯ /ಬೊಜ್ಜು (obesity) ಬೆಳವಣಿಗೆಗೆ ಕಾರಣವಾಗಿದೆ. ಅದರಿಂದ ಮಧುಮೇಹ ಹಾಗೂ ಹೃದಯ ಸಂಬಂಧಿತ ಕಾಯಿಲೆಗಳು ಹೆಚ್ಚಾಗುವ ಸಂಭವವಿದೆ. ಇತ್ತೀಚಿನ ದಿನಗಳಲ್ಲಿ ವಾಯು ವಿಹಾರ ಹಾಗೂ ದೈಹಿಕ ವ್ಯಾಯಾಮದಲ್ಲಿ ಸಾರ್ವಜನಿಕರ ಹಿತಾಸಕ್ತಿ ಕಡಿಮೆ ಆಗಿರುವಂತೆ ಕಾಣುತ್ತದೆ. ವಿದ್ಯಾರ್ಥಿಗಳಿಗೆ ಸೂಕ್ತವಾದ ದೈಹಿಕ ಶಿಕ್ಷಣ ನೀಡುವಂತಹ ಮಹತ್ವದ ಕಾರ್ಯದಲ್ಲಿ ಶಾಲೆಗಳ ವ್ಯವಸ್ಥಾಪಕರು ಮತ್ತು ಸಂಬಂಧಿತ ಅಧಿಕಾರಿಗಳು ವಿಫಲವಾಗಿರುವದರಿಂದ ವಿದ್ಯಾರ್ಥಿಗಳು ಅನಾರೋಗ್ಯದಿಂದ ಪೀಡಿತರಾಗುತ್ತಾರೆ.

ಜಗತ್ತಿನಾದ್ಯಂತ ವಲಸೆಗಾರರು ಸಾಂಕ್ರಾಮಿಕೇತರ ರೋಗಗಳಿಗೆ ಬಲಿಯಾಗುವ ಸಾಧ್ಯತೆಯು ಹೆಚ್ಚಾಗಿದೆ. ವಿಶಿಷ್ಟವಾಗಿ ಮಧುಮೇಹ (ಟೈಪ್ 2), ಹೃದಯ ರಕ್ತನಾಳ ಸಂಬಂಧಿತ ಕಾಯಿಲೆ, ಶ್ವಾಸೋಚ್ಛ್ವಾಸ / ಉಸಿರಾಟದ ಬೇನೆ, ಪುನರೋತ್ಪತ್ತಿ ಸಮಸ್ಯೆ ಹಾಗೂ ಮಾನಸಿಕ ಆರೋಗ್ಯದ ವಿವಾದಾಂಶಗಳು ಇತ್ಯಾದಿ ರೋಗಗಳು ದುಷ್ಪರಿಣಾಮ ಬೀರುತ್ತವೆ. ಗ್ರಾಮೀಣ ಪ್ರದೇಶಗಳಿಂದ ನಗರಗಳಿಗೆ ಬೃಹದ್ ಪ್ರಮಾಣದಲ್ಲಿ ಜನರ ಸಂಚಾರ ಮತ್ತು ಗಡಿ ಪ್ರದೇಶಗಳಲ್ಲಿ ಸಾಂಕ್ರಾಮಿಕೇತರ ರೋಗಗಳು ಹೆಚ್ಚಾಗಿ ಕಂಡುಬಂದಿವೆ. ಅವುಗಳ ನಿಯಂತ್ರಣಕ್ಕೆ ವಿಶೇಷ ಗಮನ ನೀಡಬೇಕು. ಈ ದಿಶೆಯಲ್ಲಿ ಆರೋಗ್ಯ ಸಚಿವಾಲಯದ ಜೊತೆಗೆ ಇತರ ಸಚಿವಾಲಯಗಳು (ಅರ್ಥಾತ್ ಶಿಕ್ಷಣ, ಕಾರ್ಮಿಕ, ಆಹಾರ/ಪೌಷ್ಠಿಕಾಂಶ, ಸಾಗಾಣಿಕೆ ಸಂಪರ್ಕ ಇತ್ಯಾದಿ) ರೋಗಗಳನ್ನು ಸೂಕ್ತವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಒಗ್ಗಟ್ಟಿನಿಂದ ಕಾರ್ಯನಿರ್ವಹಿಸಬೇಕು.

## ಆರೋಗ್ಯ ಶಿಕ್ಷಣ ಸಮಸ್ಯೆ

ಹಲವಾರು ವೈದ್ಯಕೀಯ ಶಿಕ್ಷಣತಜ್ಞರು, ಪ್ರಗತಿಪರ, ಪ್ರಜ್ಞಾವಂತ ವೈದ್ಯರು ಹಾಗೂ ಕ್ರಿಯಾಶೀಲ ವೈದ್ಯಕೀಯ ಕಾರ್ಯಕರ್ತರು, ಭಾರತದ ವೈದ್ಯಕೀಯ ಶಿಕ್ಷಣದ ಸಮಕಾಲೀನ

ಸಮಸ್ಯೆಗಳನ್ನು ವಿಶ್ಲೇಷಿಸಿದ್ದಾರೆ. ರೋಗಗ್ರಸ್ತವಾದ ಆರೋಗ್ಯ ಶಿಕ್ಷಣ ಸುಧಾರಣೆಗಾಗಿ ಅನೇಕ ಉಪಯುಕ್ತ ಸಲಹೆ / ಸೂಚನೆಗಳನ್ನು ನೀಡಲಾಗಿದೆ. ವೈದ್ಯಕೀಯ ಶಿಕ್ಷಣದ ಬೇಡಿಕೆಯು ಪ್ರತಿ ವರ್ಷ ಹೆಚ್ಚುವುದರಿಂದ ಖಾಸಗಿ ವೈದ್ಯಕೀಯ ಉದ್ದಿಮೆದಾರರು ಈ ಕ್ಷೇತ್ರದಲ್ಲಿ ಕಾರ್ಯನಿರತ ರಾಗಲು ಸಾಕಷ್ಟು ಅವಕಾಶಗಳನ್ನು ಹೊಂದಿದ್ದಾರೆ. ಇಂತಹ ಅವಕಾಶಗಳನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಕೆ ಮಾಡಿಕೊಳ್ಳಲು ಶೈಕ್ಷಣಿಕ ದಲ್ಲಾಳಿಗಳು ಮತ್ತು ಮಧ್ಯಸ್ಥಗಾರರು ಸದಾ ಸನ್ನದ್ಧರಾಗಿರುತ್ತಾರೆ. ಅವರು ಯಾವುದೇ ಉತ್ತಮ ಗುಣಮಟ್ಟ ಹಾಗೂ ನೈತಿಕ ಮೌಲ್ಯಗಳನ್ನು ಕುರಿತು ಗಂಭೀರವಾಗಿ ಯೋಚಿಸಲು ಅಪೇಕ್ಷಿಸುವುದಿಲ್ಲ ವೆಂಬಂತೆ ಕಾಣುತ್ತದೆ.

ಖಾಸಗಿ ವೈದ್ಯಕೀಯ ಮಹಾವಿದ್ಯಾಲಯಗಳ ಹೆಚ್ಚುತ್ತಿರುವ ಬೇಡಿಕೆಯು ದೆಸೆಯಿಂದ ಶ್ರೀಮಂತರು, ಅಧಿಕಾರ ಸಂಪನ್ನರು ಮತ್ತು ಸೂಕ್ತವಾದ ರಾಜಕೀಯ ಸಂಪರ್ಕ ಹೊಂದಿದ ವ್ಯಕ್ತಿಗಳು ಯುಕ್ತಿಯ ಪ್ರಯೋಗ ಮಾಡಿ ಅಥವಾ ಕೈಚಳಕ ಪ್ರದರ್ಶಿಸಲು ವೈದ್ಯಕೀಯ ಪರಿಷತ್ತಿನ ಮೇಲೆ ಪ್ರಭಾವ ಬೀರುತ್ತಾರೆ. ಇತ್ತೀಚೆಗೆ ಭಾರತದ ವೈದ್ಯಕೀಯ ಪರಿಷತ್ತಿನಲ್ಲಿ ಜರುಗಿದ ಅಹಿತಕರ ಘಟನೆಗಳ ಬಗೆಗಿನ ವರದಿಯು ಶೋಚನೀಯುವಾಗಿದೆ. ಕಳಂಕಿತ ಮತ್ತು ಅಪಖ್ಯಾತಿಗೆ ಗುರಿಯಾದ ಪರಿಷತ್ತನ್ನು ವಿಸರ್ಜಿಸಿ ದಕ್ಷತೆ, ಸಮರ್ಪಣಾ ಭಾವನೆ ಮತ್ತು ಉತ್ತಮ ಗುಣಸಂಪನ್ನರಾದ ಸದಸ್ಯರ ತಂಡವನ್ನು ಪರಿಷತ್ತಿಗೆ (MCI) ನೇಮಿಸುವಂತಹ ಸೂಕ್ತವಾದ ನಿರ್ಣಯವನ್ನು ಭಾರತ ಸರ್ಕಾರ ಕೈಗೊಂಡಿದೆ. ಯಾವುದೇ ಜವಾಬ್ದಾರಿಯುತವಾದ ಮಹತ್ವದ ಸಂಸ್ಥೆಗಳ ಪ್ರಾಮಾಣಿಕತೆ ಹಾಗೂ ಪಾರದರ್ಶಕತೆಯು ಸಂಶಯದ ವಿಷವರ್ತುಲ ದಲ್ಲಿ ಸಿಲುಕಬಾರದು. ಕೇಂದ್ರೀಯ ವಿಚಾರಣಾ ಕಾರ್ಯಾಲಯುವು (C.B.I.) ಮಹತ್ವದ ಪರಿಷತ್ತುಗಳ ಅವ್ಯವಹಾರಗಳನ್ನು ಅನಾವರಣ ಗೊಳಿಸುತದೆ.

ನೂತನ ವೈದ್ಯಕೀಯ ಮಂಡಳಿಯು, ವೈದ್ಯಕೀಯ ಶಿಕ್ಷಣ ವ್ಯವಸ್ಥೆಯ ಬಗೆಗಿನ ಸಾರ್ವಜನಿಕ ಅವಿಶ್ವಾಸವನ್ನು ನಿವಾರಿಸಬೇಕು. ವೈದ್ಯಕೀಯ ಮಹಾವಿದ್ಯಾಲಯಗಳ ಆರಂಭಿಕ ಅನುಮತಿ ಹಾಗೂ ಅಂತಿಮ ಮನ್ನಣೆ, ಕಲಿಕೆ / ಬೋಧನೆಯ ಗುಣಮಟ್ಟ ಸುಧಾರಣೆ, ಆರೋಗ್ಯದ ಅಗತ್ಯಗಳನ್ನು ಚೆನ್ನಾಗಿ ಗಮನಿಸಿ, ಪಠ್ಯಕ್ರಮದಲ್ಲಿ ಪರಿವರ್ತನೆ ಮತ್ತು ಪರೀಕ್ಷಾ ಪದ್ಧತಿಯಲ್ಲಿ ಪಾರದರ್ಶಕತೆಯನ್ನು ಸ್ಥಾಪಿಸಬೇಕು. ಹೊಸ ವೈದ್ಯಕೀಯ ಪರಿಷತ್ತು ಶೀಘ್ರಗತಿಯಿಂದ ಪತನವಾಗುತ್ತಿರುವ ವೈದ್ಯಕೀಯ ಶಿಕ್ಷಣದ ಗುಣಮಟ್ಟ ಮತ್ತು ಮೌಲ್ಯಗಳನ್ನು



ಅಭಿವೃದ್ಧಿಪಡಿಸುವಂತಹ ಅವಕಾಶವಿದೆ.

ಖಾಸಗಿ ಅಥವಾ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯುಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಸಂದರ್ಭದಲ್ಲಿ ಭಾರತದ ವೈದ್ಯಕೀಯ ಪರಿಷತ್ತು ಪಾರದರ್ಶಕತೆಯಿಂದ ಪರಿಶೀಲನೆ ಕೈಗೊಳ್ಳಬೇಕಾಗುತ್ತದೆ. ಯಾವುದೇ ಪ್ರಕಾರದ ನಿರ್ಣಯ ಕೈಗೊಳ್ಳಲು ಹಾಗೂ ಶಿಫಾರಸ್ಸು ಮಾಡಲು ಪರಿವೀಕ್ಷಕರು ಹೊಣೆಗಾರಿಕೆಯೊಂದಿಗೆ ಪೂರ್ಣ ಅಧಿಕಾರವನ್ನು ಹೊಂದಿದ್ದಾರೆ. ಪರಿವೀಕ್ಷಕರ ನಿರ್ಣಯಗಳಿಗೆ ಭಾರತದ ವೈದ್ಯಕೀಯ ಪರಿಷತ್ತು ಬದ್ಧವಾಗಿದೆ. ನೊಂದ ಇಲ್ಲವೇ ಅನ್ಯಾಯಕ್ಕೆ ಗುರಿಯಾದ ಸಂಸ್ಥೆಗಳು ಪರಿವೀಕ್ಷಣೆಯ ಮರುಪರಿಶೀಲನೆಗಾಗಿ

ಮನವಿ ಸಲ್ಲಿಸಿದ ಸಂದರ್ಭಗಳಲ್ಲಿ ದ್ವಿತೀಯ ಹಂತದ ಪರಿವೀಕ್ಷಣೆಯನ್ನು ಸರ್ಕಾರಿ ಸದಸ್ಯರು ಅಥವಾ ವಿಶೇಷ ಪ್ರತಿನಿಧಿಗಳು ನಿರ್ವಹಿಸ ಬೇಕಾಗುತ್ತದೆ. ಇಂತಹ ಸೂಕ್ತವಾದ ಕ್ರಮಗಳಿಂದ ದಲ್ಲಾಳಿಗಳ ಒತ್ತಡದ ಗುಂಪುಗಳನ್ನು ನಿರ್ಮೂಲನೆಗೊಳಿಸಲು ಸಾಧ್ಯವಿದೆ.

ಗ್ರಾಮೀಣ ಭಾರತದಲ್ಲಿ ಲಕ್ಷಾಂತರ ವೈದ್ಯರ ಸೇವೆಯು ಅಗತ್ಯವಾಗಿದೆ. ಸುಮಾರು 7



ಲಕ್ಷಕ್ಕಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಕಾರ್ಯನಿರತರಾಗಬೇಕಾಗುತ್ತದೆ. ಇಂತಹ ಬೃಹದಾಕಾರದ ಸಮಸ್ಯೆಯನ್ನು ಕೇವಲ 4 ಅಥವಾ 5 ವರ್ಷಗಳಲ್ಲಿ ಪರಿಹರಿಸಲು ಸಾಧ್ಯವಿಲ್ಲ. ಸಾಕಷ್ಟು ಮೂಲಭೂತ ಸೌಲಭ್ಯ ಪೂರ್ಣ ಪ್ರಮಾಣದ ದಕ್ಷರಾದ ವೈದ್ಯರು ಹೆಚ್ಚಿನ ಸಂಖ್ಯೆಯ ವೈದ್ಯಕೀಯ ಮಹಾವಿದ್ಯಾಲಯಗಳ ಸ್ಥಾಪನೆ, ಗ್ರಾಮೀಣ ವೈದ್ಯಕೀಯ ಸೇವೆಗಳನ್ನು ಸೂಕ್ತವಾಗಿ ನಿರ್ವಹಿಸಲು ತರಬೇತಿ, ವ್ಯಾಸಂಗ ಕ್ರಮದಲ್ಲಿ ಕ್ರಾಂತಿಕಾರಿ ಬದಲಾವಣೆ ಇತ್ಯಾದಿ ಮಹತ್ವದ ಸವಾಲುಗಳನ್ನು ಎದುರಿಸಬೇಕಾಗುತ್ತದೆ.

## ಮಾನಸಿಕ ಆರೋಗ್ಯ ಕಾರ್ಯಕ್ರಮ

ಭಾರತದಲ್ಲಿ ಮಾನಸಿಕ ಆರೋಗ್ಯದ ಸಮಸ್ಯೆಗಳು ನಿರ್ಲಕ್ಷಿತವಾಗಿದೆ. ಲಕ್ಷಾಂತರ ಜನರು ಮಾನಸಿಕ ರೋಗಗಳಿಂದ ಬಳಲುತ್ತಾರೆ. ಪ್ರತಿ 10 ವ್ಯಕ್ತಿಗಳಲ್ಲಿ 1 ವ್ಯಕ್ತಿಗೆ ಮಾತ್ರ ಸೂಕ್ತವಾದ ಚಿಕಿತ್ಸೆಯು ಲಭ್ಯವಾಗಿದೆ. ಆರೋಗ್ಯ ಸೇವಾ ಸೌಲಭ್ಯಗಳಿಗಾಗಿ ಪ್ರಾಥಮಿಕ ಔಷಧಿ ಮತ್ತು ಪ್ರವೇಶಾವಕಾಶವಿಲ್ಲದೆ, ಅನೇಕರು ಮೌನವಾಗಿ ಸಾಕಷ್ಟು ಯಾತನೆಯನ್ನು ಅನುಭವಿಸುತ್ತಾರೆ. 1970ರ ದಶಕದಲ್ಲಿ, ಜಾಗತಿಕ ಆರೋಗ್ಯ ಸಂಸ್ಥೆಯ ಅಲ್ಪ ಹಾಗೂ ಮಧ್ಯಮ ಆದಾಯದ ದೇಶಗಳ ಪ್ರಾಥಮಿಕ ಆರೋಗ್ಯ ಕಾಳಜಿಯಲ್ಲಿ ಮಾನಸಿಕ ಆರೋಗ್ಯವನ್ನು ಸಮಾವೇಶಗೊಳಿಸುವ ನೇತೃತ್ವಕ್ಕೆ ಪ್ರೇರಣೆ ನೀಡಿದೆ. ಜಾಗತಿಕ ಆರೋಗ್ಯ ಸಂಸ್ಥೆಯ ತಜ್ಞರು ಸಮಿತಿ ವರದಿಗಳು ಅವುಗಳ ಬಹುರಾಷ್ಟ್ರೀಯ ಸಹಯೋಗಿತ್ವದ ಸಾಮುದಾಯಿಕ ಕಾಳಜಿ ಪ್ರಾಯೋಜನೆಗಳು ಮತ್ತು 2000 ಇಸ್ವಿಯ ವೇಳೆಗೆ 'ಸರ್ವರಿಗೂ ಆರೋಗ್ಯ' ಎಂಬ ಆಲ್ಮಾ ಅಟಾ ಘೋಷಣೆಯ ಮೂಲಕ, ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮಗಳನ್ನು ಆರಂಭಿಸಲು ವೇದಿಕೆಯ ನಿರ್ಮಾಣವಾಗಿದೆ. ಸಾಮುದಾಯಿಕ ಕಾಳಜಿಯ ಅಗತ್ಯವನ್ನು ಗುರುತಿಸಿ 1982ರಲ್ಲಿ ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮ ವನ್ನು ಆರಂಭಿಸಲು ಪ್ರಸ್ತಾಪಿಸಲಾಗಿದೆ. ಕನಿಷ್ಠ ಮಾನಸಿಕ ಆರೋಗ್ಯ ಕಾಳಜಿ ದೊರಕುವಂತೆ ಖಾತ್ರಿಪಡಿಸುವ ಧ್ಯೇಯವನ್ನು ಹೊಂದಲಾಗಿದೆ. ಮಾನಸಿಕ ಆರೋಗ್ಯ ವೃತ್ತಿಪರರ ಕೊರತೆಯಿಂದ, ಪ್ರಾಥಮಿಕ ಆರೋಗ್ಯ ಕಾಳಜಿ ವ್ಯವಸ್ಥೆಯ ಮೂಲಕ ಮಾನಸಿಕ ಆರೋಗ್ಯ ಕಾಳಜಿ ನೀಡಬೇಕೆಂಬ ಪ್ರಧಾನ ತಂತ್ರದ ಏಕೀಕರಣಕ್ಕಾಗಿ, ಬೇಡಿಕೆ ಸಲ್ಲಿಸಲಾಗಿದೆ. ಇಂತಹ ಕಾರ್ಯಕ್ರಮವು ಉಪಯುಕ್ತವಾದ ಧ್ಯೇಯವನ್ನು ಹೊಂದಿದ್ದರೂ ಸಹ ಮುಂಗಡ ಪತ್ರದಲ್ಲಿ ಹಣಕಾಸಿನ ಬೆಂಬಲದ ಅಭಾವ ಹಾಗೂ ವೆಚ್ಚದ ಅಂದಾಜಿನ ಸಂಪೂರ್ಣ ಶೂನ್ಯತೆಯಿಂದ, ಕಾರ್ಯಕ್ರಮವು ನಿರೀಕ್ಷಿತವಾದ ಫಲಿತಾಂಶ ನೀಡಲು ವಿಫಲವಾಗಿದೆ.

2001ರ ಆಗಸ್ಟದಲ್ಲಿ ಸಂಭವಿಸಿದ 'ಯರ್ವಡಿ ಅಗ್ನಿ ಅವಘಡ'ವು ಸಾವಿರಾರು ಜೀವಿಗಳ ದುರಂತ ಕಥೆಗೆ ಜ್ವಲಂತನ ಸಾಕ್ಷಿಯಾಗಿದೆ. ಇಂತಹ ಹೃದಯದ್ರಾವಕ ಘಟನೆಗಳಿಂದ ಉದ್ಭವಿಸುವ ಮಾನಸಿಕ ರೋಗಗಳು ನಾಗರಿಕ ಸಮಾಜದ ಗಂಭೀರ ಸವಾಲುಗಳಾಗಿವೆ. ರಾಜ್ಯ ಸರ್ಕಾರಗಳ

ಮಾನಸಿಕ ಆರೋಗ್ಯ ಸಂಸ್ಥೆಗಳು ಸ್ಪಂದನಶೀಲ ವಾಗಲು, ಭಾರತದ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನ ನೀಡಿದೆ. ಮಾನಸಿಕ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕಾಗಿ ಹೆಚ್ಚಿನ ಆದ್ಯತೆ ಕೊಡಲು ಮತ್ತು ಹೆಚ್ಚುವರಿ ಆರ್ಥಿಕ ಸೌಲಭ್ಯಗಳನ್ನು ಕಲ್ಪಿಸುವ ದಿಶೆಯಲ್ಲಿ ಸರ್ವೋಚ್ಚ ನ್ಯಾಯಾಲಯದ ಲಕ್ಷ್ಯವು ಕೇಂದ್ರೀಕೃತವಾಗಿದೆ. ಮುಂಗಡ ಪತ್ರದಲ್ಲಿ ಗೊತ್ತುಪಡಿಸಿದ ಹಣಕಾಸಿನ ಬೆಂಬಲದೊಂದಿಗೆ, 2003 ರಲ್ಲಿ ರಾಷ್ಟ್ರೀಯ ಕಾರ್ಯಕ್ರಮವನ್ನು ಪುನರ್ ರಚಿಸಲಾಗಿದೆ. 9ನೇ ಪಂಚವಾರ್ಷಿಕ ಯೋಜನೆಯಲ್ಲಿ ಗೊತ್ತುಪಡಿಸಿದ ಹಣಕಾಸಿನ ಬೆಂಬಲ 28 ಕೋಟಿ ರೂ. ಗಳಾಗಿದ್ದರೆ, 11ನೇ ಯೋಜನೆಯಲ್ಲಿ 400 ಕೋಟಿ ರೂಗಳಿಗೆ ಹೆಚ್ಚಿಸಲಾಗಿದೆ. ಆದಾಗ್ಯೂ ಸಹ, ಮಾನಸಿಕ ಆರೋಗ್ಯ ಕಾರ್ಯಕ್ರಮಗಳಿಗಾಗಿ ನಿಗದಿಪಡಿಸಿದ ಹಣಕಾಸಿನ ಅಲ್ಪ ಭಾಗವನ್ನು ಮಾತ್ರ ಖರ್ಚುಮಾಡಲಾಗಿದೆ.

ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯಕ್ರಮಗಳನ್ನು ಸೂಕ್ತವಾಗಿ ಅನುಷ್ಠಾನ ಗೊಳಿಸಿಲ್ಲ. ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮಗಳು (DMHPS) ಅಬ್ಬರದ ಪ್ರಚಾರದೊಂದಿಗೆ ಆರಂಭವಾಗಿದ್ದರೂ ಸಹ, ಹಲವಾರು ಜಿಲ್ಲೆಗಳಲ್ಲಿ ಇಂತಹ ಕಾರ್ಯಕ್ರಮಗಳು ನಿಷ್ಕ್ರಿಯವಾಗಿವೆ. ಅನೇಕ ತಜ್ಞರು ವಿಫಲತೆಯ ವಿವಿಧ ಕಾರಣಗಳನ್ನು ವಿಶ್ಲೇಷಿಸಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಒಳ-ರೋಗಿಗಳ ಸೌಲಭ್ಯದ ಕೊರತೆ, ವೈದ್ಯರ ಸಶಕ್ತೀಕರಣ ಶೂನ್ಯತೆ, ಹೊರ-ರೋಗಿ ಆಸ್ಪತ್ರೆಗಳು, ಜಿಲ್ಲಾ ಆರೋಗ್ಯ ಕೇಂದ್ರದಿಂದ ಹೊರಗೆ ಹೋಗಿ, ಕಾರ್ಯಮಾಡಲು ವಿಫಲವಾಗಿವೆ. ಅದಲ್ಲದೆ, ಪ್ರಾಥಮಿಕ ಆರೋಗ್ಯ ಸೇವೆಗಳ ವಿತರಣಾ ವ್ಯವಸ್ಥೆಯೊಂದಿಗೆ ಮಾನಸಿಕ ಆರೋಗ್ಯ ಕಾರ್ಯಕ್ರಮಗಳನ್ನು ಏಕೀಕೃತ ಗೊಳಿಸಲಾಗಿಲ್ಲ. ಆದುದರಿಂದ, ಆರೋಗ್ಯ ಸೇವೆಯು ಪರಿಣಾಮಕಾರಿ ಆಗಿಲ್ಲ.

ಜಿಲ್ಲಾ ಮಟ್ಟದಲ್ಲಿ, ಬಳ್ಳಾರಿ ಪ್ರಾಯೋಜನೆಯು ಮಾನಸಿಕ ಆರೋಗ್ಯ ಕಾರ್ಯಕ್ರಮವನ್ನು ರೂಪಿಸಲು ಪ್ರಯತ್ನಿಸಿದೆ. ಇಂತಹ ಕಾರ್ಯಕ್ರಮ ವನ್ನು ರಾಷ್ಟ್ರದ ಅನೇಕ ಜಿಲ್ಲೆಗಳಲ್ಲಿ ವಿಸ್ತರಿಸಲಾಗಿದೆ. ಆರಂಭಿಕ ಹಂತದಲ್ಲಿ, ರೋಗ ತಪಾಸಣೆ ಮತ್ತು ನಿರ್ವಹಣೆಗಾಗಿ ಪ್ರತಿ ಜಿಲ್ಲೆಯಲ್ಲಿ, ತರಬೇತಿ ಕೇಂದ್ರದ ಸ್ಥಾಪನೆ, ಸ್ಥಾನಿಕ ವೃತ್ತಿಪರರಿಗೆ ತರಬೇತಿ ಹಾಗೂ ಹೊರ-ರೋಗಿಗಳಿಗೆ ಆರೋಗ್ಯ ಸೇವೆಗಳ ಪೂರೈಕೆ ಇತ್ಯಾದಿ, ಧ್ಯೇಯಗಳನ್ನು ಹೊಂದಲಾಗಿದೆ. ಸಾರ್ವತ್ರಿಕ ಶಿಕ್ಷಣ ಮತ್ತು ಭವಿಷತ್ತಿನ ಯೋಜನೆಗಾಗಿ, ಮಾಹಿತಿ ಪೂರೈಸುವ ಮೂಲಕ ಕಳಂಕದಿಂದ ಬಿಡುಗಡೆಗೊಳಿಸುವ ಧ್ಯೇಯವಿದೆ. ಸುಮಾರು 122 ಜಿಲ್ಲೆಗಳಲ್ಲಿ ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮವು ಅಸ್ತಿತ್ವದಲ್ಲಿದೆ.

ವಿಶ್ವ ಆರೋಗ್ಯ ಸಂಘಟನೆ (WHO) ಆಶ್ರಯದಲ್ಲಿ (2009 ರ ಅಕ್ಟೋಬರ್ 1ನೇ ವಾರ) ಜರುಗಿದ 'ಉತ್ತಮ ಮಾನಸಿಕ ನಡುವಳಿಕೆಯ' ಕಾರ್ಯಾಗಾರದಿಂದ ಮಹತ್ವದ ಪರಿಣಾಮ ಗಳನ್ನು ನಿರೀಕ್ಷಿಸಲಾಗಿತ್ತು. ಆದರೆ ಇಂತಹ ಕಾರ್ಯಾಗಾದಿಂದ ಭ್ರಮೆಯೊಂದು ಬಯಲಾ ಗಿರುವಂತೆ ಕಾಣುತ್ತದೆ. ಕೆಲವು ಸನ್ಯಾಸಿಗಳು ಹಾಗೂ ಸಾಮಾಜಿಕ ಕಾರ್ಯಕರ್ತರು, ತಾವು ಸೂಚಿಸುವ ಮಾರ್ಗವು ಮಾತ್ರ ಸರ್ವಶ್ರೇಷ್ಠವೆಂದು ಸಮರ್ಥಿಸಿಕೊಂಡಿದ್ದಾರೆ. ಆದರೆ, ಇತರ ಕೆಲವರು ಅರ್ಥಹೀನ ಆಚರಣೆಗಳಿಗೆ 'ವೈಜ್ಞಾನಿಕ ಮುದ್ರೆ' ಒತ್ತಲು ಪ್ರಯತ್ನಿಸಿದ್ದಾರೆ. ಇಂತಹ ಆಚರಣೆಗಳು ಲಿಂಗ ಪಕ್ಷಪಾತದಿಂದ ಪ್ರೇರಿತವಾಗಿವೆ. ಈ ಕಾರ್ಯಾಗಾರಕ್ಕೆ ಒಳಪಟ್ಟ ದೇಶಗಳಲ್ಲಿ ಲಕ್ಷಾಂತರ ಮುಸ್ಲಿಮ್ ಮತ್ತು ಕ್ರೈಸ್ತ ಧರ್ಮಾನುಯಾಯಿ ಗಳಿದ್ದರೂ ಸಹ ಆ ಧರ್ಮಗಳ ಪ್ರತಿನಿಧಿಗಳು ಕಾರ್ಯಾಗಾರದಲ್ಲಿ ಭಾಗವಹಿಸಿರಲಿಲ್ಲ.

ವಿಶ್ವ ಆರೋಗ್ಯ ಸಂಘಟನೆಯ 'ಜಾಲತಾಣ' (web site)ದಲ್ಲಿ, ಜಗತ್ತಿನಾದ್ಯಂತ ಮಾನಸಿಕ ಸಮಸ್ಯೆಗಳ ವ್ಯಾಪಕಗೊಳ್ಳುತ್ತಿರುವ ಆಘಾತಕಾರಿ ಮಾಹಿತಿ ದೊರೆಯುತ್ತದೆ. ಪ್ರಪಂಚದ ಶೇಕಡಾ

20ರಷ್ಟು ಮಕ್ಕಳು ಹಾಗೂ ಯುವಕರು ಮಾನಸಿಕ ಅಸ್ವಸ್ಥತೆಯಿಂದ ನರಳುತ್ತಿದ್ದಾರೆ. ಅವರಲ್ಲಿ ಅರ್ಧಕ್ಕಿಂತಲು ಹೆಚ್ಚು ಜನರು (ಸುಮಾರು 8 ಲಕ್ಷ ಜನರು) 15ರಿಂದ 44 ವರ್ಷ ವಯಸ್ಸಿನವರು ಮಾನಸಿಕ ರೋಗಗಳಿಂದ ಪ್ರತಿ ವರ್ಷ ಆತ್ಮಹತ್ಯೆ ಮಡಿಕೊಳ್ಳುತ್ತಾರೆ. ನೈಸರ್ಗಿಕ ಮತ್ತು ಮಾನವ ಕೃತ ವಿಪತ್ತುಗಳಿಂದಾಗಿ, ಮಾನಸಿಕ ಅಸ್ವಸ್ಥತೆಯ ಪ್ರಮಾಣವು ದ್ವಿಗುಣಗೊಳ್ಳುವ ದಿಶೆಯಲ್ಲಿ ಸಾಗಿದೆ. ಮಾನಸಿಕ ರೋಗಿಗಳಿಗೆ ಸೂಕ್ತವಾದ ಚಿಕಿತ್ಸೆ ನೀಡುವಂತಹ ಮನೋವೈದ್ಯರು, ಮನಶಾಸ್ತ್ರಜ್ಞರು ಹಾಗೂ ಸಾಮಾಜಿಕ ಕಾರ್ಯಕರ್ತರ ಕೊರತೆ ಇದೆ. ಅನೇಕ ದೇಶಗಳ ಸಾರ್ವಜನಿಕ ಆರೋಗ್ಯ ಯೋಜನೆಗಳಲ್ಲಿ, ಉತ್ತಮ ಮಾನಸಿಕ ನಡುವಳಿಕೆಯು ನಾಪತ್ತೆಯಾಗಿದೆ. ಇಂತಹ ಸಮಸ್ಯೆಗಳನ್ನು ನಿರ್ದಿಷ್ಟವಾದ ಸಾಮಾಜಿಕ/ ಸಾಂಸ್ಕೃತಿಕ ಸಂದರ್ಭಗಳಲ್ಲಿ ಪರಿಶೀಲಿಸಬೇಕು. ಮಾನಸಿಕ ಅಸ್ವಸ್ಥತೆಯ ನಿವಾರಣೆಗಾಗಿ, ವಿಶ್ವ ಆರೋಗ್ಯ ಸಂಘಟನೆಯ ಅಪಾಯಕಾರಿ ಕ್ಷೇತ್ರದ ಮೇಲೆ ಪಾದಾರ್ಪಣೆ ಮಾಡುವ ಭಯವಿದೆ. ಸಂಘಟಕರು ಸಮಸ್ಯೆಯ ವ್ಯಾಪಕತೆ ಹಾಗೂ ಆಳವನ್ನು ಅರ್ಥ ಮಾಡಿಕೊಳ್ಳುವ ಅಗತ್ಯವಿದೆ.

ವಿಶ್ವ ಆರೋಗ್ಯ ಸಂಘಟನೆಗೆ ತನ್ನ ಸೀಮಿತವಾದ ಮಾನವ ಮತ್ತು ಭೌತಿಕ ಸಂಪನೂಲಗಳ ಬಗೆಗೆ ಜ್ಞಾನೋದಯ ಉಂಟಾಗಿರುವಂತೆ ಕಾಣುತ್ತದೆ. ಜಗತ್ತಿನಾದ್ಯಂತ ಮಾನಸಿಕ ಅಸ್ವಸ್ಥತೆಯ ವಿರುದ್ಧ ಹೋರಾಟ ನಡೆಸಲು ಮತಾಂಧರು ಹಾಗೂ ಮತಾಂತರ ಕಾರರನ್ನು ಆಹ್ವಾನಿಸಿದ ಸಂಗತಿಯು ಆಶ್ಚರ್ಯ ಕಾರಕವಾಗಿದೆ. ಸಾರ್ವಜನಿಕ ಆರೋಗ್ಯ ಸೇವೆಯಲ್ಲಿ, ಉತ್ತಮ ಮಾನಸಿಕ ನಡುವಳಿಕೆಯ ಸಲಹೆ ನೀಡುವ ಕಾರ್ಯದಲ್ಲಿ ನಿರತರಾದ ಮನೋವೈದ್ಯರು, ಸಾಮಾಜಿಕ ವಿಜ್ಞಾನಿಗಳು, ಮನಶಾಸ್ತ್ರಜ್ಞರು ಮತ್ತು ಸಾಂಸ್ಕೃತಿಕ ಮಾನವ ಶಾಸ್ತ್ರಜ್ಞರ ಬದಲು ಧಾರ್ಮಿಕ ನಾಯಕರು, ಅಗೋಚರ ಶಕ್ತಿಯ ಚಿಕಿತ್ಸೆ ನೀಡುವವರು, ಮಾಟ-ಮಂತ್ರವಾದಿಗಳು, ದೆವ್ವ/ಪಿಶಾಚಿ ಬಿಡಿಸುವವರಿಗೆ ಸಂಘಟಕರು ಆದ್ಯತೆ ನೀಡಿರುವಂತೆ ಕಾಣಿತ್ತದೆ. ನಾಗರಿಕರಿಗೆ ಆರೋಗ್ಯ ಖಾತರಿ ನೀಡುವ ಪ್ರಕ್ರಿಯೆಯಲ್ಲಿ ರಾಷ್ಟ್ರದ ಹೊಣೆಗಾರಿಕೆಯ ಬಗೆಗಿನ ಪ್ರಸ್ತಾಪಗಳು ಮಾಯವಾಗಿದೆ.

## ವೈದ್ಯಕೀಯ ಮಾನವೀಕರಣ ಇಲಾಖೆ

## (Department of Medical Humanities)

ಸಾಮಾನ್ಯವಾಗಿ, ಭಾರತದ ವೈದ್ಯಕೀಯ ಮಹಾ ವಿದ್ಯಾಲಯಗಳಲ್ಲಿ, ವೈದ್ಯಕೀಯ ಮಾನವೀಯತೆಯ ಬೋಧನೆಯನ್ನು ಮಾಡಲಾಗುವುದಿಲ್ಲ. ಇಂತಹ ಅಧ್ಯಯನವನ್ನು ಪಠ್ಯಕ್ರಮದಲ್ಲಿ ಸಮಾವೇಶಗೊಳಿಸಲು, ಕೆಲವು ಸಂಸ್ಥೆಗಳು ಪ್ರಯತ್ನಿಸಿದರೂ ಸಹ ವ್ಯಾಪಕ ಸ್ವರೂಪದ ಮತ್ತು ಕಟ್ಟುನಿಟ್ಟಾದ ವಿಧಾನವನ್ನು ಅನುಸರಿಸುವದಿಲ್ಲ. ವೈದ್ಯಕೀಯ ವೃತ್ತಿಯಲ್ಲಿ ಅಡಗಿರುವ ಸಂಕೀರ್ಣ ಸಮಸ್ಯೆ ಹಾಗೂ ಅತಿ ವಿರಳ ಪ್ರಮಾಣದ ನೈತಿಕ ಮೌಲ್ಯಗಳನ್ನು ಕುರಿತು, ಬಹುಸಂಖ್ಯಾತ ವೈದ್ಯಕೀಯ ಶಾಲೆಗಳು ಚರ್ಚಿಸುವುದಿಲ್ಲ. ವೈದ್ಯಕೀಯ ಮಾನವೀಯತೆ ಯನ್ನು ಕುರಿತು ಅತ್ಯಲ್ಪ ಒತ್ತುನೀಡಲಾಗುತ್ತದೆ ಮತ್ತು ಸಮರ್ಪಣಾ ಭಾವನೆಯ ವಿಭಾಗಗಳು ಅಸ್ತಿತ್ವರಹಿತವಾಗಿವೆ. ವೈದ್ಯಕೀಯ ವೃತ್ತಿಪರತೆಗೆ ನೀತಿಶಾಸ್ತ್ರದ ಅನ್ವಯ ಪ್ರಕ್ರಿಯೆಯು ಕಠಿಣ ವಾಗಿದೆ. ಅದು ಔಪಚಾರಿಕ ತರಬೇತಿಯನ್ನು ಅಪೇಕ್ಷಿಸುತ್ತದೆ. ದೈನಂದಿನಿಕ ವೃತ್ತಿಪರತೆಯಲ್ಲಿ, ಸ್ವಾಯತ್ತತೆ, ಜನಕಲ್ಯಾಣ, ದ್ವೇಷಮುಕ್ತತೆ, ನ್ಯಾಯ, ಘನತೆ ಗೌರವ ಹಾಗೂ ಪ್ರಾಮಾಣಿಕತೆಯ ತತ್ವಗಳನ್ನು ಅನ್ವಯಿಸುವ ಸಂದರ್ಭದಲ್ಲಿ, ಕೌಶಲ್ಯ ಪೂರ್ಣತೆ ಮತ್ತು ಸೂಕ್ತವಾದ ಚರ್ಚೆಯ ಅಗತ್ಯವಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಅಯ್ಕೆಯಲ್ಲಿ ಮಾನವೀಯತೆ ಮತ್ತು ಸಾಮಾಜಿಕ ವಿಜ್ಞಾನ ಗಳನ್ನು ಸೇರ್ಪಡೆಗೊಳಿಸುವ ಅಗತ್ಯವಿದೆ. ಈ ವಿಷಯಗಳಲ್ಲಿ, ಎಲ್ಲ ವೈದ್ಯರಿಗಾಗಿ ಕನಿಷ್ಠ ಅಗತ್ಯದ ತರಬೇತಿಯನ್ನು ಪಠ್ಯಕ್ರಮವು ಒಳಗೊಳ್ಳಬೇಕು. ವಿಜ್ಞಾನವೊಂದೇ ವೈದ್ಯಕೀಯ ಶಿಕ್ಷಣಾರ್ಥಿಗಳಿಗಾಗಿ

ಪ್ರವೇಶಾವಕಾಶದ ಪ್ರಮಾಣವೆಂಬ ಧೋರಣೆಯನ್ನು ಮರುಪರಿಶೀಲಿಸುವ ಹಾಗೂ ವೈದ್ಯಕೀಯ ಪೂರ್ವ ಪಠ್ಯಕ್ರಮದಲ್ಲಿ ಮಾನವೀಯ ಅಧ್ಯಯನಗಳನ್ನು ಸಮಾವೇಶಗೊಳಿಸುವ ಸ್ಪಷ್ಟವಾದ ಅಗತ್ಯವಿದೆ. ಮಾನವೀಯ ಅಧ್ಯಯನಗಳಲ್ಲಿ ಪ್ರೌಢಿಮೆ ಸಂಪಾದಿಸಿದಂತಹ ಹಳೆಯ ವಿದ್ಯಾರ್ಥಿಗಳಿಗಾಗಿ ವೈದ್ಯಕೀಯ ತರಬೇತಿಯ ಆರಂಭವು ಒಂದು ಪರಿಶೀಲನಾರ್ಹವಾದ ಐಚ್ಛಿಕ ಮಾರ್ಗವಾಗಿದೆ. ಸಾಮಾನ್ಯವಾಗಿ ಕೆಲವು ಪ್ರಜ್ಞಾವಂತರು ಮತ್ತು ವಿಶಿಷ್ಟವಾಗಿ ಶ್ರೇಷ್ಠ ವೈದ್ಯರು ಮುಕ್ತವಾದ ಮನಸ್ಸು, ಮಾನವೀಯ ಆಧ್ಯಯನ ಹಾಗೂ ವಿಜ್ಞಾನದಲ್ಲಿ ವ್ಯಾಪಕವಾದ ಆಸಕ್ತಿ/ಅನುಭವ ಹೊಂದಿರುತ್ತಾರೆ.

ವೈದ್ಯಕೀಯ ಪೂರ್ವ ತರಬೇತಿ ಮತ್ತು ಪ್ರವೇಶಾವಕಾಶದ ಪರೀಕ್ಷೆಗಳು, ಶ್ರೇಷ್ಠವಾದ ವೈದ್ಯರನ್ನು ಸೃಷ್ಟಿಸಲು ಸಾಧ್ಯವೋ ಎಂಬ ಚರ್ಚೆಯು ಕೆಲವು ದಶಕಗಳಿಂದಲೂ ಮುಂದುವರಿದಿದೆ. ಓರ್ವ ಶ್ರೇಷ್ಠ ವೈದ್ಯನನ್ನು ಸೃಷ್ಟಿಸಲು ಯಾವುದೇ ಏಕೈಕ ಸೂತ್ರವಿಲ್ಲ. ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಪ್ರವೇಶಾಕಾಂಕ್ಷಿಗಳು, ಪದವೀಧರರಾಗಿದ್ದು, ಸಮುದಾಯದ ಸೇವೆಯನ್ನು ಸಮರ್ಪಣಾ ಭಾವನೆಯಿಂದ ಕೈಕೊಳ್ಳಲು ಸಿದ್ಧರಾಗಿದ್ದರೆ ಮತ್ತು ವಯಸ್ಸಿನ ಹೆಚ್ಚಳದಿಂದ ಭಾವನಾತ್ಮಕ ಪ್ರೌಢಿಮೆಯನ್ನು ಬೆಳೆಸಿಕೊಂಡಿದ್ದರೆ, ಅಂತಹ ವಿದ್ಯಾರ್ಥಿಗಳು ವೈದ್ಯಕೀಯ ಕ್ಷೇತ್ರದಲ್ಲಿ ಯಶಸ್ವಿಯಾಗಲು ಸಾಧ್ಯವಿದೆ. ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ವೈದ್ಯಕೀಯ ವಿದ್ಯಾರ್ಥಿಗಳಲ್ಲಿ, ತ್ವರಿತಗತಿಯ ಕೌಶಲ್ಯ ವರ್ಧನೆಯಾಗಿ, ಅವರು ರೋಗಿಗಳನ್ನು ಗುಣಪಡಿಸುವಂತಹ ಸಮಗ್ರವಾದ ಸಾಮರ್ಥ್ಯವನ್ನು ಹೊಂದುವರೆಂಬ ಭ್ರಮೆಯನ್ನು ತ್ಯಜಿಸಬೇಕು.

ಪಾಶ್ಚಿಮಾತ್ಯ ದೇಶಗಳಲ್ಲಿ ಅನೇಕ ವೈದ್ಯಕೀಯ ಶಾಲೆಗಳು, ವೈದ್ಯಕೀಯ ಮಾನವೀಕರಣ ವಿಭಾಗಗಳನ್ನು ಸ್ಥಾಪಿಸಿವೆ. ಇಂತಹ ವಿಭಾಗಗಳು ನಿಯಮಿತವಾಗಿ ಆಯ್ಕೆಯ ತರಬೇತಿ ನೀಡಲು ಸಮರ್ಪಣಾ ಭಾವನೆಯ ಬೋಧಕ ವರ್ಗ, ಮನ್ನಣೆ ಪಡೆದ ಪಠ್ಯಕ್ರಮ ಆಸಕ್ತಿ, ಹೊಂದಿದ ಗುಂಪುಗಳು ಹಾಗೂ ಗ್ರಂಥ ಕೂಟಗಳನ್ನು ಹೊಂದಿವೆ. ಇತ್ತೀಚೆಗಿನ ಬೆಳವಣಿಗೆಗಳು, ಆನ್‌ಲೈನ್ ವೈದ್ಯಕೀಯ ಮಾನವೀಕರಣ ಸಮುದಾಯಗಳು, ವೆಬ್ ಆಧಾರಿತ ಸಂಪನ್ಮೂಲಗಳು, ಅನ್ವೇಷಣಾತಕ ಡಾಟಾ ಬೇಸಿಸ್, ವ್ಯಾಪಕವಾದ ಬ್ಲಾಗ್ಸ್ ಮತ್ತು ಸಂಭಾಷಣಾ ಮಂಡಲಗಳನ್ನು ಒಳ ಗೊಂಡಿರುತ್ತದೆ.

ಆಧುನಿಕ ಜಗತ್ತಿನಲ್ಲಿ, ವೈದ್ಯರು ಮತ್ತು ರೋಗಿಗಳ ಹಕ್ಕುಗಳ ನಡುವಿನ ಸಂಘರ್ಷಣೆಯು ಸಂಕೀರ್ಣ ಸ್ವರೂಪ ಹೊಂದಿದೆ. ಪ್ರತಿಯೊಂದು ವೈದ್ಯಕೀಯ ಪ್ರಕರಣವನ್ನು ಅತ್ಯಂತ ಜಾಗರೂಕತೆಯಿಂದ ನಿಷ್ಪಕ್ಷವಾತವಾಗಿ ವಿಶ್ಲೇಷಿಸಬೇಕಾಗುತ್ತದೆ. ವೈದ್ಯರು ಅತೀಂದ್ರಿಯ ಶಕ್ತಿ ಸಂಪನ್ನರಾದ ದೇವರಲ್ಲ. ಅವರ ಕಾರ್ಯತತ್ಪರತೆ, ಕೌಶಲ್ಯಪೂರ್ಣತೆ ಹಾಗೂ ಜವಾಬ್ದಾರಿಗೂ ಸಹ ಒಂದು ವಿವೇಚನಾಬದ್ಧ ಇತಿಮಿತಿ ಇದೆ. ಆಸ್ಪತ್ರೆಯಲ್ಲಿ ರೋಗಿಗಳು ಮೃತರಾದ ಸಂದರ್ಭಗಳಲ್ಲಿ, ರೋಗಿಗಳ ಬಂಧು–ಬಾಂಧವರು ಮತ್ತು ಅಭಿಮಾನಿಗಳು ಭಾವಪರವಶರಾಗಿ ಅಜ್ಞಾನದಿಂದ ವೈದ್ಯರ ಮೇಲೆ ಮಾರಣಾಂತಿಕ ಆಕ್ರಮಣ ಮಾಡಿ, ಆಸ್ಪತ್ರೆಗಳ ಅಮೂಲ್ಯ ಆಸ್ತಿಯನ್ನು ಧ್ವಂಸಗೊಳಿಸುತ್ತಾರೆ. ರೋಗಿಗಳ ಹಿತಾಸಕ್ತಿಗಳ ರಕ್ಷಣೆಯ ಹೋರಾಟದ ಮಾರ್ಗದಲ್ಲಿ, ವೈದ್ಯರು ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ. ನಾಗರಿಕ ಸಮಾಜದಲ್ಲಿ ಕಾನೂನಿನ ಆಳ್ವಿಕೆಗೆ ಆದ್ಯತೆ ನೀಡಿ, ಸಮರ್ಥ ವೈದ್ಯರ ಘನತೆ/ಗೌರವನ್ನು ಸಂರಕ್ಷಿಸಬೇಕು. ಈ ದಿಶೆಯಲ್ಲಿ, ಸಾಮಾಜಿಕ ಪ್ರಜ್ಞೆಯನ್ನು ಜಾಗೃತಗೊಳಿಸಬೇಕು.

ವೈದ್ಯಕೀಯ ತಾಂತ್ರಿಕತೆಯ ಬೆಳವಣಿಗೆಯು ಜಾಗತಿಕ ಮಾನವೀಯ ಮೌಲ್ಯಗಳಿಗೆ ರಕ್ಷಕವಾಗಬೇಕೇ ಹೊರತು ಭಕ್ಷಕವಾಗಬಾರದು.

❄

# ಕುರಿ/ದನದ ಕೊಟ್ಟಿಗೆ ನಿರ್ಮಾಣ ಮಾಡುವಲ್ಲಿ ಯಶಸ್ವಿಯಾದ ಐರಣಿ ಗ್ರಾಮ ಪಂಚಾಯತಿ

**ಯಶೋಗಾಥೆ**



ಡಿ. ವಿ. ಅಂಗೂರ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವೈಯಕ್ತಿಕ ಕಾಮಗಾರಿಯಾದ ಕುರಿ ಮತ್ತು ದನದ ದೊಡ್ಡಿಗಳ ನಿರ್ಮಾಣಕ್ಕೆ ಐರಣಿ ಗ್ರಾಮ ಪಂಚಾಯತಿಯು ಆದ್ಯತೆ ನೀಡಿದೆ.

ಹಾವೇರಿ ಜಿಲ್ಲೆ ರಾಣೇಬೆನ್ನೂರು ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಐರಣಿ ಗ್ರಾಮ ಪಂಚಾಯತಿಯು ತಾಲ್ಲೂಕು ಕೇಂದ್ರದಿಂದ ಸುಮಾರು 21 ಕಿ. ಮೀ. ಜಿಲ್ಲಾ ಕೇಂದ್ರದಿಂದ 60 ಕಿ.ಮೀ. ದೂರದಲ್ಲಿರುವ ಈ ಗ್ರಾಮವು ಸುಮಾರು 630 ಕುಟುಂಬಗಳನ್ನು ಹೊಂದಿದ್ದು, ಹಿಂದುಳಿದ ಕೂಲಿಕಾರ್ಮಿಕರು, ಅತಿ ಹೆಚ್ಚು ಚಿಕ್ಕ ಹಿಡುವಳಿದಾರರನ್ನು ಒಳಗೊಂಡಿರುವ ಗ್ರಾಮ. ಇಲ್ಲಿನ ರೈತರು ಹೆಚ್ಚಾಗಿ ಭತ್ತ, ಗೋವಿನಜೋಳ, ಹತ್ತಿ, ಹೆಸರು, ಅಲಸಂದಿ ಬೆಳೆಗಳನ್ನು ಬೆಳೆಯುತ್ತಾರೆ. ಜನರು ಹೆಚ್ಚಾಗಿ



ಕೃಷಿಯನ್ನೆ ಅವಲಂಬಿಸಿದ್ದು ಕೃಷಿ ಕೂಲಿಕಾರ್ಮಿಕರು ಹಸು, ಎಮ್ಮೆ ,ಎತ್ತು ಕುರಿ, ಮೇಕೆ, ಕೋಳಿಸಾಕಾಣೆ ಇಲ್ಲಿನ ಜನರ ಉಪಕಸುಬಾಗಿದೆ. ಅತಿಯಾದ ಭತ್ತ ಬೆಳೆಯುವುದರಿಂದ ಸೊಳ್ಳೆಯ ಕಾಟ ವಿಪರೀತವಾಗಿದ್ದು ಸೊಳ್ಳೆಯ ಕಾಟದಿಂದ ಜನರು ಹಾಗೂ ಜಾನುವಾರುಗಳು ರೋಗಕ್ಕೆ ತುತ್ತಾಗುತ್ತಿರುವುದು ಸರ್ವೆಸಾಮಾನ್ಯವಾಗಿದೆ. ತಮ್ಮ ಸಾಕುಪ್ರಾಣಿಗಳಿಗೆ ಸರಿಯಾದ ವ್ಯವಸ್ಥೆ ಇಲ್ಲದೆ ಮತ್ತು ಅವುಗಳನ್ನು ಸರಿಯಾದ ರೀತಿಯಲ್ಲಿ ಆರೈಕೆ ಮಾಡದೆ ಇರುವುದರಿಂದ ಜನರು ಹಾಗೂ ಜಾನುವಾರುಗಳು ಸಂಕಷ್ಟದಲ್ಲಿರುವುದು ಜನಪ್ರತಿನಿಧಿಗಳಿಗೆ ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಶಿವಕುಮಾರ ಎಮ್. ಎಚ್. ರವರಿಗೆ ಮನವರಿಕೆಯಾಗಿದ್ದು ಜನರು ತಮ್ಮ ಸಾಕುಪ್ರಾಣಿಗಳಿಗೆ ಸರಿಯಾದ ವ್ಯವಸ್ಥೆಯಿಲ್ಲದೆ ಇರುವುದರಿಂದ ಜಾನುವಾರುಗಳನ್ನು ಸಾಕಾಣಿಕೆ ಮಾಡಲು ಹಿಂಜರಿಯುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಸರ್ಕಾರವು ಜಾರಿಗೆ ತಂದಿರುವ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕುರಿ ಮತ್ತು ದನದ ದೊಡ್ಡಿ ನಿರ್ಮಿಸಲು

ಐ,ಇ.ಸಿ ಸಂಯೋಜಕರು ನರೇಗಾ ತಾಲೂಕಾ ಪಂಚಾಯತ, ರಾಣೇಬೆನ್ನೂರ, ಜಿಲ್ಲಾ ಪಂಚಾಯತ ಹಾವೇರಿ.



ಅವಕಾಶ ಕಲ್ಪಿಸಲಾಗಿದೆ.

## ಐತಿಹಾಸಿಕ ಸ್ಥಳಗಳು

ಐರಣಿ ಗ್ರಾಮವು ತುಂಗಭದ್ರ ನದಿ ದಡದಲ್ಲಿದ್ದು, ಈ ಗ್ರಾಮವು ಐತಿಹಾಸಿಕವಾಗಿ ರಾಜಮಹಾರಾಜರ ಆಳ್ವಿಕೆಗೆ ಒಳಪಟ್ಟಿದ್ದು, ಸುಕ್ಷೇತ್ರ ಆರೂಢ ಸಂಪ್ರದಾಯಕ್ಕೆ ಒಳಪಟ್ಟ ಶ್ರೀ ಸದ್ಗುರು ಮುಪ್ಪಿನಾರ್ಯ ಸ್ವಾಮಿಗಳ ಮಠವು ಪ್ರಸಿದ್ಧಿಯಾಗಿದೆ. ಪ್ರತಿ ಅಮವಾಸ್ಯೆ ಮತ್ತು ಹುಣ್ಣಿಮೆಗೆ ಸಾವಿರಾರು ಭಕ್ತರು ಮಠಕ್ಕೆ ಬೇಟಿ ನೀಡಿ ಲಿಂಗೈಕ್ಯ ಶ್ರೀ ಸದ್ಗುರು ಮುಪ್ಪಿನಾರ್ಯ ಸ್ವಾಮಿಗಳ ಗದ್ದುಗೆ ದರ್ಶನ ಪಡೆಯುತ್ತಿರುವುದು ವಿಶೇಷವಾಗಿದೆ.

## ಯೋಜನೆ ಕುರಿತು ಜನರಲ್ಲಿ ಜಾಗೃತಿ

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನವು ಗ್ರಾಮೀಣ ಪ್ರದೇಶಕ್ಕೆ ವರದಾನವಾಗಿದೆ. ಇದರ ಮಹತ್ವವನ್ನು ಐ.ಇ.ಸಿ. ಕಾರ್ಯಕ್ರಮದ ಮೂಲಕ ಜನರಿಗೆ ತಿಳಿಸಿಕೊಡುವುದರ ಜೊತೆಗೆ ಮನೆ ಮನೆ ಭೇಟಿ ಮಾಡಿ ಯೋಜನೆಯ 21 ವಲಯ ಕಾಮಗಾರಿಗಳ ಬಗ್ಗೆ ಮಾಹಿತಿ ನೀಡಲಾಯಿತು .

ಜನರಿಗೆ ರೋಜ್‌ಗಾರ್ ದಿನಾಚರಣೆಯ ಮೂಲಕ ವೈಯಕ್ತಿಕ ಕಾಮಗಾರಿಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗಿದೆ. ದನದ ಕೊಟ್ಟಿಗೆ ನಿರ್ಮಿಸಿಕೊಳ್ಳಲು ಎಸ್.ಸಿ, ಎಸ್.ಟಿ ಕುಟುಂಬಗಳಿಗೆ ರೂ 35000/- ಹಾಗೂ ಬಿ.ಪಿ.ಎಲ್ ಕುಟುಂಬಗಳಿಗೆ 16000/- ಸಹಾಯಧನ ನೀಡಲಾಗುತ್ತಿದೆ ಎಂದು ಗ್ರಾಮ ಪಂಚಾಯತಿ ಯವರು ಗ್ರಾಮಸ್ಥರಿಗೆ ಮಾಹಿತಿ ನೀಡಲಾಯಿತು.

## ಯೋಜನೆ ಅನುಷ್ಠಾನ

2015-16 ನೇ ಸಾಲಿನಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ವೈಯಕ್ತಿಕ ಕಾಮಗಾರಿಯಾದ ಕುರಿ ಮತ್ತು ದನದ ದೊಡ್ಡಿಗಳ ನಿರ್ಮಾಣಕ್ಕೆ ಐರಣಿ ಗ್ರಾಮ ಪಂಚಾಯತಿಯು ಆದ್ಯತೆ ನೀಡಿದ್ದು, ಸದರಿ ಗ್ರಾಮದಲ್ಲಿ ಸುಮಾರು 45 ದನದ ಕೊಟ್ಟಿಗೆ ನಿರ್ಮಾಣ ಮಾಡಲಾಗಿದ್ದು, ಇದರ ಪ್ರಯೋಜನವನ್ನು ಐರಣಿ ಗ್ರಾಮದ ಫಲಾನುಭವಿಗಳು ತಮ್ಮ ಹೆಸರುಗಳನ್ನು ಗ್ರಾಮ ಸಭೆಗಳ ಮೂಲಕ ಕ್ರಿಯಾ ಯೋಜನೆಯಲ್ಲಿ



ಸೇರಿಸಿ 2015-16 ನೇ ಸಾಲಿನ ಕಾಮಗಾರಿಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದಾರೆ.

ಕುರಿ ದನದ ದೊಡ್ಡಿ ನಿರ್ಮಾಣ ಮಾಡಿಕೊಳ್ಳಲು ಜನರ ಬೇಡಿಕೆ ಹೆಚ್ಚಾಗಿದ್ದು ಸದರಿ ಗ್ರಾಮ ಪಂಚಾಯತಿ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ಬೇಡಿಕೆಯನ್ನು ಈಡೇರಿಸಲು ಪಣ ತೊಟ್ಟಿದ್ದಾರೆ.

## ಸಮುದಾಯದ ಪ್ರತಿಕ್ರಿಯೆ

ಸದರಿ ಯೋಜನೆಯ ಪ್ರಯೋಜನ ಪಡೆದ ಪರಿಶಿಷ್ಠ ಜಾತಿಯ ಫಲಾನುಭವಿಯಾದ ಶ್ರೀ ಗಾಳೆಪ್ಪ ಹಾಲಪ್ಪ ಕಲ್ಲಜ್ಜೇರ ಗ್ರಾಮದ ರೈತರಿಗೆ ಜಾನುವಾರು ಸಾಕಾಣಿಕೆಗೆ ಪ್ರೇರಣೆಯಾಗಿದ್ದಾರೆ.



ಇವರು ಕೃಷಿಯೊಂದಿಗೆ ಉಪ ಕಸುಬಾದ ಹೈನುಗಾರಿಕೆ ಮಾಡುತ್ತಿದ್ದು, ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಜಾನುವಾರುಗಳ ಸಾಕಾಣಿಕೆಗಳಿಗೆ ಶ್ರೀರಕ್ಷೆಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಮುಂದಿನ ಪ್ರಸಕ್ತ ಸಾಲಿನಲ್ಲಿ 2016-17ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಯವರು ಜಾನುವಾರುಗಳಿಗೆ ಸೊಳ್ಳೆ ಕಾಟ ಮತ್ತು ರೋಗ ರುಜಿನಗಳಿಂದ ಮುಕ್ತಿಗೊಳಿಸಲು ಸುಮಾರು 70 ರಿಂದ 75 ದನದ ಕೊಟ್ಟಿಗೆ ನಿರ್ಮಿಸಲು ಗುರಿ ಹಾಕಿ ಕೊಂಡಿದ್ದಾರೆ.

**ಕುರಿ, ದನದ ಕೊಟ್ಟಿಗೆ ನಿರ್ಮಾಣದಿಂದ ಆದ ಪ್ರಯೋಜನಗಳು:**

1) ಸದೃಢ ಕುರಿ ದನಗಳನ್ನು ಬೆಳೆಸಲು ಅನುಕೂಲವಾಗಿದೆ.

2) ಬಿಸಿಲು ಮಳೆ ಗಾಳಿಯಿಂದ ಕುರಿ ದನಗಳ ರಕ್ಷಣೆ.

3) ವೈಯಕ್ತಿಕ ಫಲಾನುಭವಿಗಳಿಗೆ ಉದ್ಯೋಗ ಲಭ್ಯವಾಗಿ ಆರ್ಥಿಕ ಸಹಾಯ ದೊರಕಿ ದಂತಾಗಿದೆ.

4) ದನದ ಶೆಡ್ಡಿನಿಂದ ಗಾಳೆಪ್ಪನವರ ಮನೆಯಲ್ಲಿ ದನಗಳು ಹೆಚ್ಚಾಗಿದ್ದು, ಇವರ ಕುಟುಂಬದಲ್ಲಿ ಹರ್ಷ ತುಂಬಿದೆ.

5) ಮಹಾತ್ಮಗಾಂಧಿ ರಾಷ್ಟೀಯ ಉದ್ಯೋಗ ಖಾತರಿ ಯೋಜನೆಯನ್ನು ಬಳಸಿ ಕೊಂಡಿದ್ದಲ್ಲದೆ ಅಕ್ಕಪಕ್ಕದ ರೈತರಿಗೂ ಕೂಡ ಈ ಯೋಜನೆಯನ್ನು ಬಳಸಿಕೊಳ್ಳುವಂತೆ ಪ್ರೇರೇಪಣೆ ನೀಡುತ್ತಿದ್ದಾರೆ.

ಯೋಜನೆಯಡಿ ಶ್ರೀಗಾಳೆಪ್ಪ ಕಲ್ಲಜ್ಜೇರ ದನದ ಕೊಟ್ಟಿಗೆ ಮಾಡಿಕೊಂಡಿದ್ದರಿಂದ ಜಾನುವಾರುಗಳು ಈಗ ಸೊಳ್ಳೆಗಳಿಂದ ಮತ್ತು ಸಾಂಕ್ರಾಮಿಕ ರೋಗಗಳಿಂದ ಮುಕ್ತಿಗೊಳಿಸಿದಂತಾಗಿದೆ. ಈ ಮೊದಲು ಬಿಸಿಲು, ಮಳೆ, ಚಳಿ ಗಾಳಿಯಿಂದ ಜಾನುವಾರುಗಳು ತತ್ತರಿಸಿ ಹೊಗಿದ್ದವು ತಿಂಗಳಲ್ಲಿ ಒಮ್ಮೆಯಾದರೂ ಪಶುವೈದ್ಯರಿಂದ ಚಿಕಿತ್ಸೆ ಕೊಡಿಸುತ್ತಿದ್ದೆವು, ಆದರೆ ಈಗ ರೋಗ ರುಜಿನಗಳಿಂದ ಮುಕ್ತಿ ಹೊಂದಿ ಪ್ರತಿದಿನಕ್ಕೆ 3 ರಿಂದ 4 ಲೀಟರ್ ಹಾಲು ಕೊಡುವಂತಹ



ಜಾನುವಾರುಗಳು ಈಗ 5 ರಿಂದ 6 ಲೀಟರ್ ಹಾಲು ಕೊಡುತ್ತಿವೆ ಎಂದು ಸದರಿ ಫಲಾನುಭವಿಯ ಮನದಾಳದ ಮಾತು.

**ಉಪ ಸಂಹಾರ**

ಮಹಾತ್ಮಗಾಂಧಿ ರಾಷ್ಟೀಯ ಉದ್ಯೋಗ ಖಾತರಿ ಯೋಜನೆಯನ್ನು ಗ್ರಾಮೀಣ ಪ್ರದೇಶದಲ್ಲಿ ಕುರಿ/ದನದ ಕೊಟ್ಟಿಗೆ ಮತ್ತು ಕೋಳಿ ಶೆಡ್ಡುಗಳನ್ನು ನಿರ್ಮಿಸಿಕೊಳ್ಳಲು ಈ ಯೋಜನೆಯು ಬಹಳ ಪ್ರಯೋಜನಕಾರಿ ಯಾಗಿದೆ. ಇದರ ಜೊತೆಗೆ ಜನರ ಆರ್ಥಿಕ ಹಾಗೂ ಸಾಮಾಜಿಕ ಜೀವನ ಮಟ್ಟವು ಸುಧಾರಣೆ ಯಾಗುವುದರೊಂದಿಗೆ ಪ್ರಾಣಿಗಳಿಗೂ ಕೂಡಾ ಒಳ್ಳೆಯ ಆಶ್ರಯ ದೊರೆತಂತಾಗಿದೆ. ಜಾನುವಾರು ಗಳ ಸಾಕಾಣಿಕೆಗಳಿಗೆ ಶ್ರೀರಕ್ಷೆಯಾಗಿದೆ .

❄

# ಸ್ವಚ್ಛ ಕೊಪ್ಪಳದ ಸ್ವಚ್ಛಾಗ್ರಹಿ ಡಣಾಪುರ ಮಲ್ಲಮ್ಮ

## ಯಶೋಗಾಥೆ



ಮಂಜುಳಾ ಬಡಿಗೇರ್

ಗಂಗಾವತಿ ತಾಲ್ಲೂಕಿನ ಡಣಾಪುರ ಗ್ರಾಮದ ವಿದ್ಯಾರ್ಥಿನಿ ಮಲ್ಲಮ್ಮ ಉಪವಾಸ ಸತ್ಯಾಗ್ರಹ ದಿಂದ ವೈಯಕ್ತಿಕ ಶೌಚಾಲಯ ಹೊಂದುವಲ್ಲಿ ಯಶಸ್ವಿಯಾಗಿ ಎಲ್ಲರ ಅಭಿನಂಧನೆಗೆ ಪಾತ್ರಳಾಗಿದ್ದಾಳೆ.

ಹೋರಾಟದ ಹಾದಿಯಲ್ಲಿ ಸಾಗಿಬಂದ ಜೀವನ ಕ್ರಮ ನಮ್ಮದು, ಅಂದು ಹಲವಾರು ಜನ ಹಲವಾರು ಕಾರಣಗಳಿಗೆ ಹೋರಾಟ, ಸತ್ಯಾಗ್ರಹ ಉಪವಾಸ ಕೈಗೊಂಡು ಯಶಸ್ವಿಯಾದ ಕಥೆಗಳನ್ನು ಓದಿದ್ದೇವೆ, ಕೇಳಿದ್ದೇವೆ. ಆದರೆ ಮಹಿಳೆ ಹೊರಬಂದು ಜೀವನ ನಡೆಸಲು ಹಿಂದೇಟು ಹಾಕುವ ಕಾಲ ಇಂದು, ಇದಕ್ಕೆ ತದ್ವಿರುದ್ದ ಎನ್ನುವಂತೆ ಸ್ವಚ್ಛ ಜೀವನಕ್ಕಾಗಿ, ಸ್ವಚ್ಛ ಗ್ರಾಮಕ್ಕಾಗಿ, ಸ್ವಚ್ಛ ಪರಿಸರಕ್ಕಾಗಿ ತನ್ನ ಜೀವನವನ್ನೇ ಪಣಕ್ಕಿಟ್ಟು ಉಪವಾಸ ಕೈಗೊಂಡು ಮನೆಯ ಸದಸ್ಯರನ್ನೆಲ್ಲ ಎದುರಿಸಿಕೊಂಡು ಶೌಚಾಲಯ ನಿರ್ಮಾಣಕ್ಕೆ ಹೋರಾಟ ಮಾಡಿ ಅದರಲ್ಲಿ ಗೆಲುವನ್ನು ಕಂಡ ದಿಟ್ಟ ಬಾಲಕಿ ಮಲ್ಲಮ್ಮ ರಾಜ್ಯಮಟ್ಟದಲ್ಲಿ ಗಮನಸೆಳೆದು ಎಲ್ಲರಿಗೂ ಮಾದರಿಯಾಗಿದ್ದಾಳೆ. 10 ನೇ ತರಗತಿಯಲ್ಲಿ ಸ್ವಚ್ಛ ಪರಿಸರದ ಕನಸನ್ನು ಕಂಡು, ಶಿಕ್ಷಕರ ಪಾಠದಿಂದ ಪ್ರೇರೆಪಿತಳಾಗಿ ಕುಗ್ರಾಮವಾದ ಡಣಾಪುರದಲ್ಲಿ ಶೌಚಾಲಯ ಪಡೆಯಲು ಹೋರಾಟ ಮಾಡಿ ಯಶಸ್ವಿಯಾದ ಬಾಲಕಿ.




ಮಲ್ಲಮ್ಮ ಎಂಬುವ ಬಾಲಕಿಯ ಯಶೋಗಾಥೆ ಪ್ರಾರಂಭ ವಾಗುವುದು ಕೊಪ್ಪಳದ ಗಂಗಾವತಿ ತಾಲ್ಲೂಕಿನ ಡಣಾಪುರ ಗ್ರಾಮದಿಂದ. ಈ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಒಟ್ಟು 1,497 ಕುಟುಂಬಗಳಿದ್ದು, 798 ಕುಟುಂಬಗಳು ಶೌಚಾಲಯ ಹೊಂದಿದ್ದು ಅದನ್ನು ಬಳಕೆ ಮಾಡುತ್ತಿದ್ದಾರೆ. ಉಳಿದಂತೆ 699 ಕುಟುಂಬಗಳು ಶೌಚಾಲಯ ನಿರ್ಮಿಸಿಕೊಳ್ಳುವುದಾಗಿ ಒಪ್ಪಿಗೆ ಸೂಚಿಸಿದ್ದಾರೆ. ಡಣಾಪುರ ಗ್ರಾಮದ ಸರ್ಕಾರಿ ಪ್ರೌಢಶಾಲೆಯ 10ನೇ ತರಗತಿಯ ವಿದ್ಯಾರ್ಥಿನಿ ಮಲ್ಲಮ್ಮ ಶಿಕ್ಷಕರ ಸ್ವಚ್ಛತೆಯ ಪಾಠದಿಂದ ಪ್ರೇರೇಪಿತಳಾಗಿದ್ದಳು. ಸ್ವಚ್ಛತೆ ಹಾಗೂ

ಸ್ವಚ್ಛ ಭಾರತ ಮಿಷನ್, ಐ.ಇ.ಸಿ ಸಮಾಲೋಚಕರು, ಜಿಲ್ಲಾ ಪಂಚಾಯತ್, ಕೊಪ್ಪಳ

ವೈಯಕ್ತಿಕ ಶೌಚಾಲಯದ ಮಹತ್ವ ತಿಳಿದಿದ್ದ ಮಲ್ಲಮ್ಮಳಿಗೆ ಶೌಚಾಲಯ ನಿರ್ಮಿಸಿಕೊಂಡರೆ ಸರಕಾರದಿಂದ ಪ್ರೋತ್ಸಾಹಧನ ಸಿಗತ್ತದೆಂಬ ಅರಿವಿತ್ತು. ಅದಕ್ಕಾಗಿ ತನ್ನ ತಾಯಿ ಸಣ್ಣನಿಂಗಮ್ಮ ಅವರಿಗೆ ಹಲವು ಬಾರಿ ಶೌಚಾಲಯ ನಿರ್ಮಿಸಿಕೊಡಿ ಎಂದು ಪೀಡಿಸಿದ್ದಳು. ಆದರೆ ಬಡವರಾದ ಸಣ್ಣನಿಂಗಮ್ಮ ಸಧ್ಯಕ್ಕೆ ಶೌಚಾಲಯ ಕಟ್ಟಿಸಲು ಆಗುವುದಿಲ್ಲ ಎಂದು ಮಗಳಿಗೆ



ಸಮಾಧಾನ ಹೇಳಿ ಮುಂದೂಡಿದ್ದರು. ಇದರಿಂದ ನಿರಾಸೆಗೊಂಡ ಮಲ್ಲಮ್ಮ ಮೂರು ದಿನ ಉಪವಾಸ ಮಾಡಿದ್ದಳು. ಈ ವಿಷಯ ಬೆಳಕಿಗೆ ಬಂದಾಗ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಆರ್.ರಾಮಚಂದ್ರನ್‌ರವರು ನೀಡಿದ ಭರವಸೆಯಂತೆ ಗ್ರಾಮ ಪಂಚಾಯತಿ .ಅಧ್ಯಕ್ಷರು, ಸದಸ್ಯರುಗಳ ಹಾಗೂ ಗ್ರಾಮ ಪಂಚಾಯತಿ ಸಿಬ್ಬಂದಿಗಳ ಸಹಕಾರದೊಂದಿಗೆ ಸ್ವಚ್ಛ ಭಾರತ ಮಿಶನ್ ಯೋಜನೆಯಡಿ ವಾರದೊಳಗೆ ಮಲ್ಲಮ್ಮಳ ಮನೆ ಮುಂದೆ ಶೌಚಾಲಯ ನಿರ್ಮಾಣವಾಗಿದ್ದು ಮಲ್ಲಮ್ಮಳ ಸತ್ಯಾಗ್ರಹಕ್ಕೆ ಕೊನೆಗೂ ಫಲ ಸಿಕ್ಕಿದೆ.

ಜಿಲ್ಲೆಯಲ್ಲಿನ ಪ್ರತಿ ಕುಟುಂಬ ವೈಯಕ್ತಿಕ ಶೌಚಾಲಯ ಹೊಂದಲು ಜಿಲ್ಲಾ ಮಟ್ಟದ ಅಧಿಕಾರಿಗಳು, ತಾಲ್ಲೂಕು ಪಂಚಾಯತ್ ಅಧಿಕಾರಿಗಳು, ಗ್ರಾಮ ಪಂಚಾಯತಿ ಅಧಿಕಾರಿಗಳು, ಅಧ್ಯಕ್ಷರು, ಸದಸ್ಯರು ಶ್ರಮಿಸುತ್ತಿದ್ದು, ಪ್ರತಿ ಗ್ರಾಮಕ್ಕೆ ಬೆಳಗ್ಗೆ 5 ಗಂಟೆಗೆ ನಿರಂತರ ಭೇಟಿ ನೀಡಿ, ಸ್ವಚ್ಛತಾ ಅಭಿಯಾನ ಮಾಡುತ್ತಾ, ಮನೆ-ಮನೆಗೆ ತೆರಳಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡು ರೋಗ ಮುಕ್ತ ಗ್ರಾಮಗಳನ್ನಾಗಿ ಮಾಡಿ ಎಂದು ಜನರ ಮನವೊಲಿಸುತ್ತಿದ್ದಾರೆ.

ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಕೊಪ್ಪಳ ಜಿಲ್ಲೆಯನ್ನು 2016-2017ನೇ ಸಾಲಿಗೆ ಬಯಲು ಶೌಚ ಮುಕ್ತ ಜಿಲ್ಲೆಯನ್ನಾಗಿಸಲು ನಿರ್ಧರಿಸಲಾಗಿದ್ದು ಮೊದಲ ಹಂತದಲ್ಲಿ ಜಿಲ್ಲೆಯಲ್ಲಿ ವೈಯಕ್ತಿಕ ಶೌಚಾಲಯ ಹೊಂದಿದವರು ಹಾಗೂ ಹೊಂದಿಲ್ಲದವರ ಕುಟುಂಬಗಳ ಮಾಹಿತಿಯನ್ನು ಕ್ರೋಢೀಕರಿಸಲು ಮಹಿಳಾ ಒಕ್ಕೂಟದವರಿಂದ ಸಮೀಕ್ಷೆ ಕೈಕೊಳ್ಳಲಾಗಿತ್ತು. ಅಕ್ಟೋಬರ್ 2ರೊಳಗೆ ಗಂಗಾವತಿ ತಾಲ್ಲೂಕನ್ನು ಬಯಲು ಬಹಿರ್ದೆಸೆ ಮುಕ್ತ ತಾಲ್ಲೂಕನ್ನಾಗಿಸಲು ನಿರ್ಧರಿಸಲಾಗಿದ್ದು ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಸದಸ್ಯರು ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರಿಗೆ ಕಾರ್ಯಾಗಾರ ಆಯೋಜಿಸಲಾಗಿತ್ತು. ಹೀಗೆ ಎಡಬಿಡದೆ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದ್ದು ಜನರಲ್ಲಿ ಜಾಗೃತಿ ಮೂಡಿಸುವುದು, ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವುದು, ರೋಗ ಮುಕ್ತ ಗ್ರಾಮಗಳನ್ನಾಗಿ ಮಾಡಲು ಅಧಿಕಾರಿಗಳ ತಂಡ ಪಣ ತೊಟ್ಟಿದ್ದು, ಜು. 14 ರಂದು ಗಂಗಾವತಿ ತಾಲ್ಲೂಕಿನ ಡಣಾಪುರ ಗ್ರಾಮಕ್ಕೆ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜನಪ್ರತಿನಿಧಿಗಳು ಹಾಗೂ ಇತರೆ ಅಧಿಕಾರಿಗಳೊಂದಿಗೆ ಬೆಳಗ್ಗೆ 5.30ಕ್ಕೆ ಜಾಗೃತಿ ಅಭಿಯಾನ ಮಾಡಲು ಭೇಟಿ ನೀಡಿದ್ದರು. ಮನೆ - ಮನೆ ಭೇಟಿ ನೀಡಿ ಶೌಚಾಲಯ ನಿರ್ಮಿಸಿಕೊಳ್ಳಿ ಎಂದು ಜನರ ಮನವೊಲಿಸುವ ಸಂದರ್ಭದಲ್ಲಿ ಬಾಲಕಿ



ಮಲ್ಲಮ್ಮಳ ಸದ್ದಿಲ್ಲದ ಹೋರಾಟ ಗಮನಕ್ಕೆ ಬಂದಿದ್ದು ಅಪಾರ ಮೆಚ್ಚುಗೆ ಮತ್ತು ಹರ್ಷ ವ್ಯಕ್ತಪಡಿಸಿ, ಮಲ್ಲಮ್ಮಳ ಮನೆ ಮುಂದೆ ಶೀಘ್ರವೇ ವೈಯಕ್ತಿಕ ಶೌಚಾಲಯ ನಿರ್ಮಿಸಿ ಕೊಡುವುದಾಗಿ ಭರವಸೆ ನೀಡಿದ್ದರು.

ಶೌಚಾಲಯ ನಿರ್ಮಾಣ ಕಾರ್ಯ ಪೂರ್ಣಗೊಂಡ ನಂತರ ಜಿ.ಪಂ. ಸಿಇಒ ಆರ್. ರಾಮಚಂದ್ರನ್ ಮಲ್ಲಮ್ಮಳ ಮನೆಗೆ ಭೇಟಿ ನೀಡಿ ಶೌಚಾಲಯ ವೀಕ್ಷಿಸಿದರು. ಶೌಚಾಲಯದ ಬಗ್ಗೆ ಕುಟುಂಬದವರಿಗೆ, ಗ್ರಾಮಸ್ಥರಿಗೆ ಅರಿವು ಮೂಡಿಸಿದ್ದಕ್ಕಾಗಿ ಮಲ್ಲಮ್ಮಳಿಗೆ ಅಭಿನಂದಿಸಿ, 'ಸತ್ಯಾಕ್ಕಾಗಿ ಹೋರಾಡುವವರು ಸತ್ಯಾಗ್ರಹಿ, ಸ್ವಚ್ಛತೆಗಾಗಿ ಹೋರಾಡುವವರು ಸ್ವಚ್ಛಾಗ್ರಹಿ' ಇಂದಿನಿಂದ ಕೊಪ್ಪಳ ಜಿಲ್ಲೆಯ ಸ್ವಚ್ಛಾಗ್ರಹಿ ಮಲ್ಲಮ್ಮ ಎಂದು ಪ್ರಶಂಸಿದರು. ಮಲ್ಲಮ್ಮ ಎಲ್ಲರಿಗೂ ಮಾದರಿಯಾಗಿದ್ದಾಳೆ, ಮಲ್ಲಮ್ಮನಂತ ದಿಟ್ಟ ಬಾಲಕಿ, ಪ್ರತಿ ಗ್ರಾಮದಲ್ಲಿದ್ದರೆ ಕೇವಲ ಕೊಪ್ಪಳ ಜಿಲ್ಲೆ ಮಾತ್ರವಲ್ಲ ಇಡೀ ದೇಶವನ್ನೇ ಬಯಲು ಬಹಿರ್ದೆಸೆ ಮುಕ್ತ ಮಾಡಿ ಗಾಂಧೀಜಿ ಕನಸಿನಂತೆ ನಮ್ಮ ದೇಶವನ್ನು ಸ್ವಚ್ಛ ಭಾರತವನ್ನಾಗಿ ಮಾಡಬಹುದು ಎಂದು ಗ್ರಾಮಸ್ಥರಿಗೆ ಮನವರಿಕೆ ಮಾಡಿಸಿದರು. ವಾರದೊಳಗೆ ಶೌಚಾಲಯ ನಿರ್ಮಾಣಕ್ಕೆ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ತಿಳಿಸಿದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿಯೊಬ್ಬರು ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳಬೇಕು ಇದು ಸ್ವಾಭಿಮಾನದ ಸಂಕೇತ ಎಂದು ಮನವಿ ಮಾಡಿಕೊಂಡರು.

ಈ ಸಾಧನೆಯನ್ನು ಮೆಚ್ಚಿ ಮಲ್ಲಮ್ಮಳಿಗೆ ಅಗಸ್ಟ್ 15, ಸ್ವಾತಂತ್ರ ದಿನಾಚರಣೆಯಂದು ಉನ್ನತ ಶಿಕ್ಷಣ ಸಚಿವರಾದ ಬಸವರಾಜ್ ರಾಯರೆಡ್ಡಿಯವರು ಸನ್ಮಾನಿಸಿದರು. ಜಿಲ್ಲಾಧಿಕಾರಿಗಳಾದ ಕನಗವಲ್ಲಿಯವರು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಆರ್. ರಾಮಚಂದ್ರನ್ ರವರು, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಾದ ಡಾ|| ಕೆ. ತ್ಯಾಗರಾಜನ್ ರವರು, ಯೋಜನಾ ನಿರ್ದೇಶಕರಾದ ರವಿ ಬಸರಿಹಳ್ಳಿ, ಜಿ.ಪಂ. ಸದಸ್ಯೆ ವಿಜಯಲಕ್ಷ್ಮಿ ಪ್ರಭಾಕರ್, ಗ್ರಾ.ಪಂ. ಅಧ್ಯಕ್ಷ ಶಫಿ ಶೇಕ್ಷಾವಲಿ, ಉಪಾಧ್ಯಕ್ಷೆ ತಾಯಮ್ಮ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತ್ ಅಧಿಕಾರಿಗಳು, ಮಲ್ಲಮ್ಮನ ಶಿಕ್ಷಕರು, ಸ್ನೇಹಿತೆಯರು ಎಲ್ಲರೂ ಅಭಿನಂದಿಸಿ ಸಂತಸ ವ್ಯಕ್ತ ಪಡಿಸಿದರು. ❄

# ರೈತರ ಒಕ್ಕಲು ಕಣದ ಯಶಸ್ವಿ ನಿರ್ಮಾಣ

**ಯಶೋಗಾಥೆ**



ಪಾಂಡುರಂಗ ಜಿ.

ರೈತರ ಸಂಕಷ್ಟಗಳನ್ನು ಮನಗಂಡಿರುವ ಕರ್ನಾಟಕ ಸರ್ಕಾರವು ಹಳ್ಳಿಗಳ ಎಲ್ಲಾ ರೈತ ವರ್ಗವು ಬಳಸುವಂಥಹ ಕಣಗಳನ್ನು ನಿರ್ಮಿಸಲು ನಿರ್ಧರಿಸಿದೆ.

ಮೆಟ್ರಿಕಿ ಗ್ರಾಮ ಪಂಚಾಯತಿಯು ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರದಿಂದ 30 ಕಿ.ಮೀ ದೂರದಲ್ಲಿದೆ. ಮೆಟ್ರಿಕಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೆಟ್ರಿಕಿ, ಗುಂಡ್ಲಹಳ್ಳಿ, ರಾಮಸಾಗರ, ಬಸಾಪುರ, ಲಕ್ಕಲಹಳ್ಳಿ ಗ್ರಾಮಗಳಿದ್ದು, ಸದರಿ ಗ್ರಾಮ ಪಂಚಾಯತಿಯು 21 ಚುನಾಯಿತ ಸದಸ್ಯರನ್ನು ಹೊಂದಿದೆ. 2001ರ ಜನಗಣತಿಯ ಪ್ರಕಾರ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 547 ಕುಟುಂಬಗಳಿದ್ದು 1577 ಜನಸಂಖ್ಯೆಯನ್ನು ಹೊಂದಿದೆ. ಅದರಲ್ಲಿ 1062 ಪುರುಷರು ಮತ್ತು 515 ಮಹಿಳೆಯರು ಇದ್ದಾರೆ. ಸದರಿ ಗ್ರಾಮ ಪಂಚಾಯತಿಯು 1218 ಹೆಕ್ಟರ್ ಭೌಗೋಳಿಕ ಕ್ಷೇತ್ರವನ್ನು ಹೊಂದಿದೆ. 1218 ಹೆಕ್ಟರ್ ಬಿತ್ತನೆ ಪ್ರದೇಶವಾಗಿದೆ. ಹತ್ತಿ, ಜೋಳ, ಶೇಂಗಾ, ಸಜ್ಜೆ, ನವಣೆ, ಗುರಾಳು ಪ್ರಮುಖ ಬೆಳೆಗಳಾಗಿವೆ. ಈ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 5 ಸರಕಾರಿ



ಪ್ರಾಥಮಿಕ ಶಾಲೆಗಳು, 1 ಮೊರಾರ್ಜಿ ದೇಸಾಯಿ ವಸತಿ ಶಾಲೆ ಹೊಂದಿದೆ. ಮೆಟ್ರಿಕಿ ಗ್ರಾಮದಲ್ಲಿ ವಿಜಯನಗರ ಸಾಮ್ರಾಜ್ಯವನ್ನು ಅಳಿದ ಮೊದಲ ದೊರೆ, ಕಡುಗಲಿ ವೀರ, ಪರನಾರಿ ಸಹೋದರ ಎಂಬ ಬಿರುದನ್ನು ಹೊಂದಿರುವ ಶ್ರೀಗಂಡುಗಲಿ ಕುಮಾರರಾಮನ ಜಾತ್ರೆ ತುಂಬಾ ಖ್ಯಾತಿ ಹೊಂದಿದೆ. ಎಲ್ಲಾ ಜಾತ್ರೆಗಳಲ್ಲಿ ತೇರು ಎಳೆಯುವುದು ಸಾಮಾನ್ಯ. ಇಲ್ಲಿ ಯುವಕರೊಂದಿಗೆ ರೋಷ ಕ್ಯಾಕೆ, ಡೊಳ್ಳು, ಸಮಾಳಗಳ ಮೂಲಕ ಕೆಂದೂಳುನಲ್ಲಿ ಮನರಂಜನೆಯ ಮೂಲಕ ಕಾಲಾಟ ಅಡಿ ಸೂರ್ಯ ಉದಯಿಸುವ ಮುನ್ನ ಶ್ರೀಗಂಡುಗಲಿ ಕುಮಾರರಾಮ ಗರ್ಭಗುಡಿ ಪ್ರವೇಶಿಸಿತ್ತಾನೆ.

ಜಿಲ್ಲಾ ಐ.ಇ.ಸಿ ಸಹಾಯಕರು, ಜಿಲ್ಲಾ ಪಂಚಾಯತ್, ಬಳ್ಳಾರಿ



ಭಾರತ ರಾಷ್ಟ್ರವು ಮೂಲತಃ ಹಳ್ಳಿಗಳ ದೇಶ. ಹಳ್ಳಿಗಳು ಭಾರತ ರಾಷ್ಟ್ರದ ಬೆನ್ನೆಲುಬು ಎಂದು ರಾಷ್ಟ್ರಪಿತ ಮಹಾತ್ಮ ಗಾಂಧೀಜಿಯವರು ಬಹು ಹಿಂದೆ ಹೇಳಿದ್ದರು. ಹಳ್ಳಿಗಳ ಉದ್ಧಾರದಿಂದ ಮಾತ್ರ ಭಾರತದೇಶ ಮುಂದುವರೆಯಲು ಸಾಧ್ಯ ಎನ್ನುವ ಗ್ರಾಮ ಸ್ವರಾಜ್ಯದ ಪರಿಕಲ್ಪನೆಯನ್ನು ನೀಡಿದ್ದರು. ಈ ಪರಿಕಲ್ಪನೆಯನ್ನು ಸಾಕಾರಗೊಳಸುವ ನಿಟ್ಟಿನಲ್ಲಿ ಸ್ವಾತಂತ್ರ್ಯಾನಂತರ ಎಲ್ಲಾ ಸರ್ಕಾರಗಳು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಅದರಲ್ಲಿ ವಿಶೇಷವಾಗಿ ಹಲವು ಉದ್ಯೋಗ ಭರವಸೆ ಕಾರ್ಯಕ್ರಮಗಳನ್ನು ಕಾಲ ಕಾಲಕ್ಕೆ ಪರಿಷ್ಕರಿಸಿ ಜಾರಿಗೆ ತಂದಿವೆ.

ಗ್ರಾಮೀಣ ಪ್ರದೇಶದಲ್ಲಿ ಲಭ್ಯವಿರುವ ನೈಸರ್ಗಿಕ ಮತ್ತು ಮಾನವ ಸಂಪನ್ಮೂಲಗಳನ್ನು ದಕ್ಷ ಮತ್ತು ಪ್ರಾಮಾಣಿಕ ವಿಧಾನಗಳ ಮೂಲಕ ಬಳಕೆ ಮಾಡಿಕೊಂಡು ಬಡತನ ಪ್ರಮಾಣ ತಗ್ಗಿಸಿ, ಆದಾಯ ಅಸಮಾನತೆಯನ್ನು ತಗ್ಗಿಸಿ ನಿರುದ್ಯೋಗ ಸಮಸ್ಯೆಯನ್ನು ಕಡಿಮೆ ಮಾಡಿ ನಿರುದ್ಯೋಗ ಪ್ರಮಾಣವನ್ನು ಕಡಿತ ಮಾಡುವ ಉದ್ದೇಶದಿಂದ ಭಾರತ ಸರ್ಕಾರವು 'ಗ್ರಾಮೀಣ ದುಡಿಯುವ ಕೈಗಳಿಗೆ ಕಾಯಕ' ಎನ್ನುವ ಘೋಷವಾಕ್ಯದೊಂದಿಗೆ 2005 ರಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005 ಎನ್ನುವ ಮಹಾತ್ವಾಕಾಂಕ್ಷೆಯ ಯೋಜನೆಯನ್ನು ಈ ಕೆಳಕಂಡ ಉದ್ದೇಶಗಳನ್ನು ಒಳಗೊಂಡಂತೆ ಜಾರಿಗೆ ತಂದಿದೆ.

"ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆ ಮೇಲು" ಎನ್ನುವ ಸರ್ವಜ್ಞ ಕವಿ ವಾಣಿಯಂತೆ ನಮ್ಮ ರೈತರ ಕಾಯಕ ಮಿಗಿಲಾದುದು. ರೈತನ ಕಾಯಕದ ಸಂಭ್ರಮ ವ್ಯಕ್ತವಾಗುವುದು ಒಕ್ಕುವಿಕೆಯಲ್ಲಿ. ಸುಗ್ಗಿ ಎಂಬುದು ಒಕ್ಕಲುತನದ ಸಂಭ್ರಮದ ಕಾಲ. ಕಣವು ಆ ಸಂಭ್ರಮದ ತಾಣ. ಮುಂಗಾರು ಮಳೆಯಿಂದ ಆರಂಭವಾಗಿ ಉಳುಮೆ, ಬಿತ್ತನೆ, ಎಡೆ, ಕಳೆ ನಿಯಂತ್ರಣ. ಕೊಯಿಲು, ತೆನೆ, ಕಣ, ರಾಶಿ ಪೂಜೆಗಳಲ್ಲಿ ಸಾಗಿ ಹಗೇವುಗಳಲ್ಲಿ ಶೇಖರಣೆ ಗೊಳ್ಳುತ್ತದೆ.

ರೈತನ ಕಾಯಕಕ್ಕೆ ಘನತೆ ಇದೆ. ಬೆಳೆಗಳಿಗೆ ಬೆಲೆಯಿದೆ. ಈಗಾಗಿ ಒಕ್ಕಲು ಕಣ ಬೇಕಾಗಿದೆ. ಒಕ್ಕಲು ಕಣವನ್ನು ನಿರ್ಮಿಸಿ ಒಕ್ಕಲು ಸಂಭ್ರಮವನ್ನು, ವೈಭವನ್ನು ಮರಳಿ ತರೋಣ, ರೈತರ ಕಾಯಕ್ಕೆ ಕೈಜೊಡಿಸೋಣ, ದೇಶದ ಬೆನ್ನೆಲುಬನ್ನು ಗಟ್ಟಿಯಾಗಿಸೋಣ.



### ಉದ್ದೇಶಗಳು

1) ಗ್ರಾಮೀಣ ಕುಟುಂಬಗಳಿಗೆ ಆರ್ಥಿಕ ಭದ್ರತೆಯನ್ನುಒದಗಿಸುವ ಸಲುವಾಗಿ ಒಂದುಆರ್ಥಿಕವರ್ಷದಲ್ಲಿಒಂದುಕುಟುಂಬಕ್ಕೆ 100 ದಿನಗಳ ಉದ್ಯೋಗ ನೀಡುವುದು.

2) ಒಂದು ಮಾನವ ದಿನಕ್ಕೆ ಕೂಲಿಯನ್ನು ಕರ್ನಾಟಕದಲ್ಲಿ ರೂ 204 ಗಳನ್ನು ನಿಗಧಿ ಪಡಿಸಲಾಗಿದೆ.

3) ಗ್ರಾಮಗಳಲ್ಲಿ ಸುಸ್ಥಿರ ಮತ್ತು ಧೀರ್ಘಕಾಲಿನ ಸಮುದಾಯ ಆಸ್ತಿಗಳನ್ನು ಸೃಷ್ಟಿಸುವುದು.

4) ಗ್ರಾಮೀಣಜನರ ವಲಸೆಯನ್ನುತಪ್ಪಿಸುವುದು



## ರೈತರ ಒಕ್ಕಲು ಕಣ

ಭಾರತದದೇಶದಲ್ಲಿರೈತರು ಬೆಳೆಗಳನ್ನು ಬೆಳೆಯುವುದು ಎಷ್ಟು ಕಷ್ಟವೊ,ಅದರ ಸಂಸ್ಕರಣೆಯೂ ಅಷ್ಟೇ ಕಷ್ಟವಾಗಿದೆ.ರೈತರು ಬೆಳೆಗಳನ್ನು ಸಂಸ್ಕರಿಸಲು ಕೃಷಿ ಒಕ್ಕಣೆ ಕಣಗಳು ಅಗತ್ಯವಾಗಿವೆ. ನಮ್ಮರೈತ ಭಾಂಧವರು ಶ್ರಮವಹಿಸಿ ಬೆಳೆದ ಫಸಲು ಕೈಗೆ ಬಂದಾಗ ಕಣಗಳಿಲ್ಲದೆ ರಸ್ತೆಗಳನ್ನೆ ಕಣ ಮಾಡಿಕೊಂಡು ಒಕ್ಕಣೆ ಮಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ರಸ್ತೆಗಳನ್ನೆ ಕಣಗಳನ್ನಾಗಿ ಮಾಡಿಕೊಳ್ಳುವುದರಿಂದ ಆಗುವ ಅನಾನುಕೂಲ ಗಳನ್ನು ಈ ಕೆಳಗಿನಂತೆ ವಿವರಿಸಬಹುದು.

- ಧಾನ್ಯ ಶೇಖರಣೆ ಸಮಸ್ಯೆ.
- ಧಾನ್ಯಒಕ್ಕಣೆಯ ಸಮಸ್ಯೆ.
- ಧಾನ್ಯಗಳನ್ನು ಒಣಗಿಸಲು ಸ್ಥಳದ ಕೊರತೆ.
- ರಸ್ತೆಯಲ್ಲಿ ಧಾನ್ಯ ಒಕ್ಕಣೆ ಮಾಡುವಾಗ ವಾಹನ ಸಂಚಾರದಿಂದ ನಷ್ಟವಾಗುವ ಸಂಭವ.
- ರಸ್ತೆಯಲ್ಲಿ ಧಾನ್ಯ ಒಕ್ಕಣೆ ಮಾಡುವಾಗ ವಾಹನ ಸಂಚಾರಕ್ಕೆ ಅಡಚಣೆ.
- ಧಾನ್ಯಗಳನ್ನು ರಸ್ತೆಯಲ್ಲಿ ಒಕ್ಕಣೆಕೆ ಮಾಡುವುದರಿಂದ ರಸ್ತೆ ಹದೆಗೆಟ್ಟು ಹೋಗುವುದು.
- ರಸ್ತೆಯಲ್ಲಿ ಒಕ್ಕಣೆ ಮಾಡುವಾಗರೈತರು ಮತ್ತು ಜಾನುವಾರುಗಳು ಅಪಘಾತಕ್ಕೆ ಈಡಾಗುವ ಸಂಭವಗಳು.

| ಕಾಮಗಾರಿ ಸಂಕ್ಷಿಪ್ತ ವಿವರ | |
|---|---|
| ಕಾಮಗಾರಿ ಹೆಸರು | : ಮೆಟ್ರಿಕಿ ಗ್ರಾಮ ಪಂಚಾಯತಿಯ ಗುಂಡ್ಲಹಳ್ಳಿ ಗ್ರಾಮದ ಊರ ಗುಡ್ಡದ ಹಿಂದೆ ಸಾರ್ವಜನಿಕ ಒಕ್ಕಲು ಕಣ ನಿರ್ಮಾಣ |
| ಕಾಮಗಾರಿ ಸಂಕೇತ ಸಂಖ್ಯೆ | : 1505006021/FG/485 |
| ಅಂದಾಜು ಮೊತ್ತ | : 3.10 ಲಕ್ಷಗಳು |
| ವಾಸ್ತವ ವೆಚ್ಚ ರೂ | : 3.06 ಲಕ್ಷಗಳು |
| ಉತ್ಪನ್ನವಾದ | |
| ಮಾನವ ದಿನಗಳು | : 901 |
| ಕೂಲಿ ಮೊತ್ತ | : 1.84 ಲಕ್ಷಗಳು |
| ಸಾಮಗ್ರಿ ವೆಚ್ಚ | : 1.22 ಲಕ್ಷಗಳು |

## ಈ ಯೋಜನೆಗೂ ಮುನ್ನ

ರೈತರ ಸಂಕಷ್ಟಗಳನ್ನು ಮನಗಂಡಿರುವ ಕರ್ನಾಟಕ ಸರ್ಕಾರವು ಹಳ್ಳಿಗಳ ಎಲ್ಲಾ ರೈತ ವರ್ಗವು ಬಳಸುವಂಥಹ ಕಣಗಳನ್ನು ನಿರ್ಮಿಸಲು ನಿರ್ಧರಿಸಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ದೇಶದಲ್ಲೆ ಮೊಟ್ಟ ಮೊದಲ ಬಾರಿಗೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಕೃಷಿ ಒಕ್ಕಣೆ ಕಣಗಳನ್ನು ನಿರ್ಮಿಸಿಕೊಂಡು ಒಕ್ಕಲುತನ ಮಾಡಲು ಅವಕಾಶ ಮಾಡಿಕೊಟ್ಟು ರೈತರ ಬವಣೆಯನ್ನು ಕಡಿಮೆ ಮಾಡಲು, ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು 2014-15 ನೇ ಸಾಲಿನಲ್ಲಿ ತಮ್ಮ 15 ಅಂಶಗಳ ಕಾರ್ಯಕ್ರಮದಡಿಯಲ್ಲಿ ರೈತರಿಗಾಗಿ ಕೃಷಿ ಒಕ್ಕಣೆ ಕಣಗಳ ನಿರ್ಮಾಣ ಕಾರ್ಯಕ್ರಮಕ್ಕೆ ಚಾಲನೆ ನೀಡುವುದರ ಮೂಲಕ ಧಾನ್ಯ ಸಂಸ್ಕರಣೆಗೆ ಅತ್ಯವಶ್ಯಕವಾದ ಕೃಷಿ ಕಣಗಳ ನಿರ್ಮಾಣ ಮಾಡುವುದರೊಂದಿಗೆ ರೈತರ ತೊಂದರೆ ನಿವಾರಿಸಿ, ರೈತರ ಮೊಗದಲ್ಲಿ ಹರ್ಷ ಕಾಣುವಂಥಹ ಕಾರ್ಯಕ್ರಮವನ್ನು ಜಾರಿಗೆ ತಂದಿದ್ದಾರೆ.

ಕರ್ನಾಟಕ ಸರ್ಕಾರವು ರಾಜ್ಯದ ಇತಿಹಾಸದಲ್ಲಿ ಅಲ್ಲ, ದೇಶದ ಇತಿಹಾಸದಲ್ಲಿ ಈ ರೀತಿಯ ಜನಪರ ಕಾರ್ಯಕ್ರಮವನ್ನು ಮಹಾತ್ಮಗಾಂಧಿ ರಾಷ್ಟ್ರೀಯ



ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಅಳವಡಿಸಿ ದೇಶಕ್ಕೆ ಮಾದರಿಯಾದಂಥಹ ಕಾರ್ಯಕ್ರಮವನ್ನು ಜಾರಿಗೆ ತಂದಿದೆ. ಈ ಕಾರ್ಯಕ್ರಮದ ಅಡಿಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ರೈತರಿಗೆ ಕೃಷಿ ಒಕ್ಕಣೆ ಕಣ ಕಾರ್ಯಕ್ರಮವನ್ನು ವಿಶೇಷವಾಗಿ ಅಳವಡಿಸಿಕೊಂಡು ರೈತರ ಕಷ್ಟಗಳಿಗೆ ಸ್ಪಂದಿಸಿ ಅವರ ಏಳಿಗೆಗೆ ಶ್ರಮಿಸುತ್ತಿದೆ.

ಬಳ್ಳಾರಿ ಯಿಂದ 60 ಕಿ ಮೀ ದೂರ ಇರುವ ಸಂಡೂರು ತಾಲ್ಲೂಕಿನ ಜನರು ಮುಖ್ಯವಾಗಿ ಭೂಮಿಯನ್ನೇ ನಂಬಿ ಬದುಕುತ್ತಿದ್ದು ಅಕಾಲಿಕ ಮತ್ತು ಅಸಮರ್ಪಕ ಮಳೆಯಿಂದ ತಾಲ್ಲೂಕಿನ ರೈತ ಜೀವನದಲ್ಲಿ ಜೂಜಾಟವಾಡುತ್ತಿದೆ. ಒಂದು ವೇಳೆ ಉತ್ತಮ ಮಳೆಯಾಗಿ ಒಳ್ಳೆಯ ಫಸಲು ಬಂದರೂ ಸಹ ಬೆಳೆಯನ್ನು ಒಕ್ಕಲುತನ ಮಾಡಲು ಸ್ಥಳಾವಕಾಶವಿಲ್ಲದೆ ಪರದಾಡುವಂತಹ ಸ್ಥಿತಿ ನಿರ್ಮಾಣವಾಗಿದ್ದು, ವಾಹನ ಸಂಚರಿಸುವ ಮುಖ್ಯರಸ್ತೆಯಲ್ಲಿ ಒಕ್ಕಲುತನ ಮಾಡುವಂಥಹ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಈ ನಿಟ್ಟಿನಲ್ಲಿ ಸಂಡೂರು ತಾಲ್ಲೂಕಿನ, ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗಳ ಸಹಯೋಗ ದೊಂದಿಗೆ ಹಲವಾರು ಒಕ್ಕಲು ಕಣಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ಮಿಸಿ ರೈತರಿಗೆ ನೆರವಾಗುತ್ತಿದೆ.

ಚೋರುನೂರು ಹೋಬಳಿ ವ್ಯಾಪ್ತಿಯಲ್ಲಿ ಬರುವ ಸೋವೆನಹಳ್ಳಿ ಗ್ರಾಮ ಪಂಚಾಯತಿಯು ತಾಲ್ಲೂಕು ಕೇಂದ್ರದಿಂದ 28 ಕಿ.ಮೀ ದೂರದಲ್ಲಿದ್ದು ಈ ಪ್ರದೇಶದಲ್ಲಿ ಮೆಕ್ಕೆಜೋಳ ಜೋಳ, ರಾಗಿ ಸೇಂಗಾ ಇನ್ನು ಅನೇಕ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಬೆಳೆದಂತಹ ಧಾನ್ಯಗಳನ್ನು ಒಕ್ಕಲುತನ ಮಾಡಲು ಸೋವೆನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸೋರವನಹಳ್ಳಿ ಗ್ರಾಮದ ಗ್ರಾಮಸಭೆಯಲ್ಲಿ ಅನುಮೊದನೆಯನ್ನು ಪಡೆದು, ಒಕ್ಕಲುಕಣ ನಿರ್ಮಾಣ ಮಾಡಲಾಗಿದ್ದು ಈ ಒಕ್ಕಲು ಕಣವು 21x18 ಮೀಟರ್ ಇದ್ದು ಸೋವೆನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವಂತಹ ಹಲವಾರು ಗ್ರಾಮಗಳ ರೈತರ ಕೃಷಿ ಒಕ್ಕಣೆ ಸಮಸ್ಯೆಯನ್ನು ನೀಗಿಸಿದೆ.

**ಕಾಮಗಾರಿಯಿಂದಾದ ಉಪಯೋಗಗಳು**

- ಒಕ್ಕಲುತನಕ್ಕೆ ರಸ್ತೆಯನ್ನು ಅವಲಂಬಿಸಿದ ರೈತರಿಗೆ ಒಂದು ಧೀರ್ಘಕಾಲದ ಪರಿಹಾರ ದೊರಕಿದೆ.
- ಗುಣಮಟ್ಟದ ಧಾನ್ಯಗಳನ್ನು ಪಡೆಯಲು ಅನುಕೂಲವಾಗಿದೆ.
- ಕಣದಲ್ಲಿ ಸ್ವಚ್ಚತೆ ಇರುವುದರಿಂದ ಧಾನ್ಯಗಳು ವ್ಯರ್ಥವಾಗದೇ ರೋಗರುಜಿನ ಉಂಟು ಮಾಡುವ ಧಾನ್ಯಗಳಾಗಿ ಮಾರ್ಪಡುವುದಿಲ್ಲ.
- ಈ ಕಣವು ಸರ್ಕಾರಿ ಜಾಗದಲ್ಲಿರುವುದರಿಂದ ಎಲ್ಲಾ ರೈತರು ಯಾವುದೇ ಭಯವಿಲ್ಲದೆ ಕೆಲಸವನ್ನು ನಿರ್ವಹಿಸಲು ಸುಗಮವಾಗಿದೆ.
- ಈ ಕಣವು ಬಹಳ ಉತ್ತಮವಾಗಿರುವುದರಿಂದ ಇದರಲ್ಲಿ ಉತ್ಪನ್ನಗಳನ್ನು ರಕ್ಷಿಸಲು ಒಣಗಿಸಲು ಸರ್ವಕಾಲಕ್ಕೆ ಉಪಯೋಗವಾಗಲಿದೆ.

ಇದರಿಂದ ಒಕ್ಕಲುತನಕ್ಕೆ ರಸ್ತೆಯುನ್ನು ಅವಲಂಬಿಸಿ ಎದುರಿಸುತ್ತಿರುವ ಸಮಸ್ಯೆಗಳಿಂದ ಸಂಪೂರ್ಣವಾಗಿ ಬಿಡುಗಡೆ ಸಿಕ್ಕಿದಂತಾಗಿದೆ ಎಂಬುದು ರೈತರ ಅನಿಸಿಕೆಯಾಗಿದೆ.

ಕವಿಯ(ಕ್ಷ) ಪ್ರಶ್ನೆ?

# ಶೌಚಾಲಯ ಪ್ರಜ್ಞೆ ಮೂಡಲಿ

ದೇಶದ ಅಭಿವೃದ್ಧಿಗೆ ಗ್ರಾಮದ ಪ್ರಗತಿಯೇ ಭದ್ರ ಬುನಾದಿಯಾಗಿದೆ. ಗ್ರಾಮದಲ್ಲಿ ಸುಖ ಶಾಂತಿ ನೆಲೆಸಬೇಕಾದರೆ ಮೊದಲು ಅಲ್ಲಿ ಸ್ವಚ್ಛತೆಯ ವಾತಾವರಣ ನಿರ್ಮಾಣವಾಗಬೇಕಾಗುತ್ತದೆ. ಪ್ರತಿಯೊಬ್ಬರು ತಮ್ಮ ಮನೆಯ ಬದಿಯಲ್ಲಿ ಶೌಚಾಲಯವನ್ನು ನಿರ್ಮಿಸಿಕೊಳ್ಳಬೇಕು. ಹಳ್ಳಿಗಳಲ್ಲಿ ಇಂದಿಗೂ ಬಹು ಜನರು ಶೌಚಾಲಯಕೆಂದು ಬಯಲಿಗೆ ಹೋಗುತ್ತಾರೆ. ಅನೇಕ ಜನರು ಒಂದೇ ಸ್ಥಳದಲ್ಲಿ ಶೌಚಕ್ಕೆ ಕೂಡುವುದರಿಂದ ಅಲ್ಲಿ ದುರ್ವಾಸನೆ ಉಂಟಾಗಿ ನೊಣ ಹಾಗೂ ರೋಗಣುಗಳು ಹೆಚ್ಚಾಗುತ್ತವೆ. ರೋಗದ ಉತ್ಪತ್ತಿಗೆ ಈ ಅಸ್ವಚ್ಛತೆಯೇ ಕಾರಣವಾಗುತ್ತದೆ. ಹೆಣ್ಣು ಮಕ್ಕಳು ಮರ್ಯಾದೆಗೆ ಅಂಜಿ ಸಂಜೆ ಹಾಗೂ ಬೆಳಗಿನ ಜಾವದಲ್ಲಿ ಬಯಲು ಶೌಚಾಲಯಕ್ಕೆ ಹೋಗುತ್ತಾರೆ. ಪ್ರತಿಯೊಬ್ಬ ಕುಟುಂಬದ ಮುಖ್ಯಸ್ಥನು ಮನೆಯ ಬದಿಯಲ್ಲಿ ಶೌಚಾಲಯ ನಿರ್ಮಿಸಿಕೊಂಡು ಮನೆಯ ಮರ್ಯಾದೆಯನ್ನು ಹಾಗೂ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಅವಶ್ಯವಾಗಿದೆ.



### ಈ ಕುರಿತು ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು.

1. ಮರ್ಯಾದೆಗೆ ಕುಂದು ತರುವ ಹಾಗೂ ರೋಗಕ್ಕೆ ಕಾರಣವಾದ ಬಯಲು ಶೌಚಾಲಯವನ್ನು ತ್ಯಜಿಸುವುದು ಸರಿಯಲ್ಲವೇ?
2. ನಮ್ಮ ಮನೆಯ ಹೆಣ್ಣು ಮಕ್ಕಳ ಮರ್ಯಾದೆ, ಗೌರವನ್ನು ಕಾಪಾಡುವುದು ಪ್ರತಿಯೊಂದು ಮನೆಯ ಯಜಮಾನನ ಕರ್ತವ್ಯವಲ್ಲದೇ ?
3. ಪರಿಸರ ಸ್ವಚ್ಛವಾಗಿದ್ದರೆ ರೋಗ ಮುಕ್ತರಾಗಿ ಜನರು ಸುಖದಿಂದ ಬಾಳಲು ಕಾರಣವಾಗುವುದಿಲ್ಲವೇ?
4. ಬಯಲು ಬಹಿರ್ದೆಸೆಮುಕ್ತ ಗ್ರಾಮಕ್ಕಾಗಿ ಸರ್ವರೂ ಶೌಚಾಲಯ ನಿರ್ಮಿಸಲು ಸಹಕರಿಸುವುದು ಸಜ್ಜನಿಕೆಯ ಲಕ್ಷಣವಲ್ಲವೇ?

ಶ್ರೀ ಬಸವರಾಜ ಹೂಗಾರ
ಮುಕ್ಕಾಂ ಅಂಚೆ ಹಿರೇಸಿಂಗನಗುತ್ತಿ,
ತಾಲೂಕು ಹುನಗುಂದ, ಬಾಗಲಕೋಟೆ 587154.

ಕಾವ್ಯ ವಿಕಾಸ

# ಸ್ವಾವಲಂಬನೆ



ಶ್ರೀಕಾಂತ. ಹಾ. ಬಾಲೆಹೊಸೂರು

ಗ್ರಾಮ ಸ್ವರಾಜ್ಯ ನಮ್ಮಯ ಗುರಿ
ಹಳ್ಳಿಯ ಉದ್ಧಾರ ದೇಶದ ಅಭಿವೃದ್ಧಿ
ಬಿಟ್ಟು ಬನ್ನಿ ಮನದ ಅಳಕು
ಕಾಣಿ ಗ್ರಾಮದ ಅಭಿವೃದ್ಧಿ ಕನಸು

ದಿಲ್ಲಿಯ ಗಲ್ಲಿಯಲ್ಲಿಲ್ಲ ಅಧಿಕಾರ
ಹಳ್ಳಿಯ ಗ್ರಾಮ ಪಂಚಾಯತಿಯ ಪರಮಾಧಿಕಾರ
ಮನದ ಮೌಢ್ಯತೆ ದೂರ ಸರಿಸಿ
ನಮ್ಮಯ ಹಳ್ಳಿಯ ಸರ್ಕಾರ ರಚಿಸೋಣ

ನಮ್ಮಯ ಮುಂದಿನ ಸಮಸ್ಯೆಗೆ
ನಮ್ಮಯ ಅಂಗೈಯಲ್ಲಿದೆ ಪರಿಹಾರ
ಅಧಿಕಾರ ವಿಕೇಂದ್ರಿಕರಣದ ತತ್ವ
ಅರ್ಥ ಮಾಡಿಕೊಳ್ಳೋಣ ಒಗ್ಗಟಿನಲಿ

ಭಾಪು ಸೇವಾ ಕೇಂದ್ರ ಹಳ್ಳಿಯ
ಬೇಡಿಕೆ ಸ್ಥಳದಲ್ಲಿಯೇ ಈಡೇರಿಕೆ
ಗ್ರಾಮ ಸಭೆ ಹಳ್ಳಿಯ ವಿಧಾನ ಸಭೆ
ಎಂದು ಸಾಬೀತು ಮಾಡೋಣ

ಅಭಿವೃದ್ಧಿಗೆ ಬೇಡ ತಾರತಮ್ಯ
ಬದ್ಧತೆ ಭದ್ರತೆಯಲಿ ಸಾಗೋಣ
ಜಾಗೃತ ನಡೆಯ ನಡಿಸೋಣ
ನಾಡು ನುಡಿಯ ರಕ್ಷಣೆ ಮಾಡೋಣ.

ದ್ವಿತೀಯ ದರ್ಜೆ ಲೆಕ್ಕ ಸಹಾಯಕ, ಜಿಲ್ಲಾ ಪಂಚಾಯತ್ ಬಳ್ಳಾರಿ

# ಗ್ರಾಮ ಪಂಚಾಯತಿಗಳ ಜಿಲ್ಲಾವಾರು ಪಂಚತಂತ್ರ ಪ್ರಗತಿಯ ವರದಿ ದಿನಾಂಕ 29-08-2016 ರಲ್ಲಿದ್ದಂತೆ.

| | ಪಂಚಾಯತಿಗಳ ಸಂಖ್ಯೆ | 2014-15 ನೇ ಸಾಲಿನ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2015-16 ನೇ ಸಾಲಿನಲ್ಲಿ ಬ್ಯಾಲೆನ್ಸ್ ಶೀಟ್ ಪೂರ್ಣಗೊಳಿಸಿದ ಶೇಕಡವಾರು ಗ್ರಾ.ಪಂ.ಗಳು | 2015-16 ನೇ ಸಾಲಿನಲ್ಲಿ ಬೇಡಿಕೆಯಂತೆ ಶೇ 60 ಕ್ಕಿಂತ ಹೆಚ್ಚು ಆಸ್ತಿ ತೆರಿಗೆ ವಸೂಲಾತಿ ಮಾಡಿರುವ ಶೇಕಡವಾರು ಗ್ರಾ.ಪಂ ಗಳು | ಹಾಲಿ ಆರ್ಥಿಕ ವರ್ಷದಲ್ಲಿ ರಾಜ್ಯದ ಸರಾಸರಿಗಿಂತ ಶೇಕಡ 75 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ಪಡೆದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಶೇಕಡ 95 ಕ್ಕಿಂತ ಹೆಚ್ಚು ಜಿಎಸ್‌ಸಿ ಬೇಡಿಕೆಗಳನ್ನು ನಿಗದಿತ ಸಮಯದಲ್ಲಿ ವಿತರಿಸಿದ ಶೇಕಡವಾರು ಗ್ರಾ.ಪಂ.ಗಳು | ಹಾಲಿ ಆರ್ಥಿಕ ವರ್ಷದಲ್ಲಿ ಹಿಂದಿನ ಮಾಹೆಯಲ್ಲಿ ನಡೆಸಿದ ಸಾಮಾನ್ಯ ಸಭೆ ಹಾಗೂ ಅದರ ನಡವಳಿಯನ್ನು ಸ್ಕ್ಯಾನ್ ಮಾಡಿ ಅಪ್ ಲೋಡ್ ಮಾಡಿರುವ ಶೇಕಡವಾರು ಗ್ರಾ.ಪಂ. ಗಳು | ಹಿಂದಿನ ದಿನದ ಹಾಜರಾತಿ ದಾಖಲಿಸಿದ ಶೇಕಡವಾರು ಗ್ರಾ.ಪಂಗಳು | ಒಟ್ಟಾರೆ ಶೇಕಡವಾರ ಸಾಧನೆ | ಶ್ರೇಣಿ |
|---|---|---|---|---|---|---|---|---|---|---|
| ಬೆಂಗಳೂರು (ಗ್ರಾ) | 105 | 93 | 100 | 5 | 92 | 80 | 95 | 0 | 66 | 1 |
| ಉಡುಪಿ | 158 | 90 | 100 | 77 | 57 | 44 | 92 | 0 | 65 | 2 |
| ಬಾಗಲಕೋಟೆ | 198 | 79 | 99 | 2 | 79 | 96 | 93 | 0 | 64 | 3 |
| ಉತ್ತರ ಕನ್ನಡ | 231 | 89 | 98 | 83 | 26 | 87 | 57 | 0 | 62 | 4 |
| ಕೋಲಾರ | 156 | 100 | 67 | 1 | 100 | 92 | 55 | 0 | 59 | 5 |
| ದಕ್ಷಿಣ ಕನ್ನಡ | 230 | 87 | 90 | 90 | 13 | 60 | 69 | 0 | 58 | 6 |
| ಶಿವಮೊಗ್ಗ | 271 | 95 | 100 | 19 | 45 | 87 | 54 | 0 | 57 | 7 |
| ಮೈಸೂರು | 266 | 87 | 93 | 0 | 55 | 74 | 77 | 0 | 55 | 8 |
| ಧಾರವಾಡ | 144 | 88 | 100 | 0 | 48 | 93 | 54 | 0 | 54 | 9 |
| ತುಮಕೂರು | 331 | 96 | 100 | 1 | 74 | 62 | 40 | 0 | 53 | 10 |
| ಕೊಡಗು | 104 | 94 | 100 | 35 | 0 | 63 | 79 | 0 | 53 | 11 |
| ಮಂಡ್ಯ | 234 | 99 | 98 | 2 | 36 | 88 | 43 | 0 | 52 | 12 |
| ಬೆಂಗಳೂರು (ನ) | 96 | 84 | 95 | 27 | 58 | 14 | 91 | 0 | 52 | 13 |
| ರಾಮನಗರ | 127 | 99 | 57 | 0 | 69 | 85 | 42 | 0 | 50 | 14 |
| ದಾವಣಗೆರೆ | 233 | 97 | 86 | 1 | 46 | 92 | 29 | 0 | 50 | 15 |
| ಚಿತ್ರದುರ್ಗ | 189 | 97 | 100 | 0 | 53 | 73 | 26 | 0 | 49 | 16 |
| ಚಿಕ್ಕಮಗಳೂರು | 227 | 99 | 99 | 25 | 19 | 44 | 49 | 0 | 47 | 17 |
| ಚಿಕ್ಕಬಳ್ಳಾಪುರ | 157 | 96 | 29 | 1 | 89 | 86 | 29 | 0 | 47 | 18 |
| ಹಾವೇರಿ | 224 | 92 | 83 | 0 | 48 | 73 | 27 | 0 | 46 | 19 |
| ಬೀದರ್ | 186 | 94 | 94 | 0 | 43 | 64 | 29 | 0 | 46 | 20 |
| ಹಾಸನ | 267 | 96 | 100 | 7 | 17 | 42 | 58 | 0 | 45 | 21 |
| ಬಳ್ಳಾರಿ | 199 | 91 | 100 | 4 | 9 | 52 | 57 | 0 | 44 | 22 |
| ಚಾಮರಾಜನಗರ | 130 | 91 | 99 | 0 | 22 | 65 | 29 | 0 | 43 | 23 |
| ಗದಗ | 122 | 86 | 45 | 0 | 52 | 84 | 14 | 0 | 40 | 24 |
| ವಿಜಯಪುರ | 213 | 90 | 53 | 0 | 44 | 50 | 32 | 0 | 38 | 25 |
| ಕೊಪ್ಪಳ | 153 | 84 | 73 | 0 | 16 | 46 | 22 | 0 | 34 | 26 |
| ಬೆಳಗಾವಿ | 504 | 93 | 29 | 1 | 15 | 58 | 8 | 0 | 29 | 27 |
| ರಾಯಚೂರು | 180 | 88 | 20 | 1 | 34 | 38 | 1 | 0 | 26 | 28 |
| ಯಾದಗಿರಿ | 123 | 92 | 35 | 4 | 0 | 30 | 12 | 0 | 24 | 29 |
| ಕಲಬುರಗಿ | 264 | 82 | 18 | 0 | 13 | 40 | 10 | 0 | 23 | 30 |

## ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆಯ ಜಿಲ್ಲಾವಾರು ಸಕಾಲ ಪ್ರಗತಿ ವರದಿ (ಆಗಸ್ಟ್ 2016)

| ಜಿಲ್ಲೆ | ನಿಗದಿತ ಸಮಯದಲ್ಲಿ ವಿಲೇವಾರಿ ಆಧರಿಸಿ ಪಡೆದ ಶ್ರೇಣಿ (ಎ) | ಒಂದು ಲಕ್ಷ ಜನಸಂಖ್ಯೆಗೆ ಸ್ವೀಕೃತಿ ಆಧರಿಸಿ ಪಡೆದ ಶ್ರೇಣಿ (ಬಿ) | ಒಟ್ಟಾರೆ ಶ್ರೇಣಿ (ಎ+ಬಿ) |
|---|---|---|---|
| ಕೋಲಾರ | 4 | 1 | 1 |
| ಬಾಗಲಕೋಟೆ | 2 | 4 | 2 |
| ಉಡುಪಿ | 1 | 8 | 3 |
| ಚಿಕ್ಕಬಳ್ಳಾಪುರ | 8 | 3 | 4 |
| ಹಾವೇರಿ | 5 | 6 | 5 |
| ಶಿವಮೊಗ್ಗ | 2 | 9 | 6 |
| ಬೆಂಗಳೂರು (ಗ್ರಾ) | 12 | 2 | 7 |
| ಚಿಕ್ಕಮಗಳೂರು | 11 | 5 | 8 |
| ಮಂಡ್ಯ | 6 | 14 | 9 |
| ಗದಗ | 6 | 16 | 10 |
| ತುಮಕೂರು | 18 | 7 | 11 |
| ಮೈಸೂರು | 12 | 13 | 12 |
| ಚಿತ್ರದುರ್ಗ | 16 | 11 | 13 |
| ರಾಮನಗರ | 19 | 10 | 14 |
| ಬಳ್ಳಾರಿ | 19 | 12 | 15 |
| ದಕ್ಷಿಣ ಕನ್ನಡ | 14 | 17 | 16 |
| ಚಾಮರಾಜನಗರ | 15 | 18 | 17 |
| ದಾವಣಗೆರೆ | 10 | 26 | 18 |
| ಧಾರವಾಡ | 9 | 30 | 19 |
| ಹಾಸನ | 21 | 20 | 20 |
| ಕೊಡಗು | 17 | 25 | 21 |
| ಬೀದರ್ | 24 | 19 | 22 |
| ಉತ್ತರ ಕನ್ನಡ | 29 | 15 | 23 |
| ಕೊಪ್ಪಳ | 23 | 21 | 24 |
| ವಿಜಯಪುರ | 22 | 23 | 25 |
| ಬೆಂಗಳೂರು (ನ) | 25 | 22 | 26 |
| ಯಾದಗಿರಿ | 26 | 24 | 27 |
| ಕಲಬುರಗಿ | 27 | 27 | 28 |
| ಬೆಳಗಾವಿ | 29 | 28 | 29 |
| ರಾಯಚೂರು | 28 | 29 | 30 |

**ಕರ್ನಾಟಕ ಸರ್ಕಾರ**

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3 ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದಿನಾಂಕ: 02.07.2016

ಸಂಖ್ಯೆ: ಗ್ರಾಅಪ:39:ಉಖಾಯೋ 2016

# ಸುತ್ತೋಲೆ

**ವಿಷಯ:** ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ- ಮೇಲ್ವಿಚಾರಣೆ ಹಾಗೂ ಕುಂದು ಕೊರತೆಗಳ ನಿವಾರಣೆ ಜವಾಬ್ದಾರಿಯನ್ನು ಕಂದಾಯ ಉಪವಿಭಾಗಾಧಿಕಾರಿಗಳಿಗೆ ವಹಿಸುವ ಕುರಿತು.

**********

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ, 2005ರಡಿ ಕೇಂದ್ರ ಸರ್ಕಾರ ಪ್ರಾಯೋಜಿತ ಮಹಾತ್ಮ ಗಾಂಧಿ ನರೇಗಾ ಯೋಜನೆಯು ರಾಜ್ಯ ಸರ್ಕಾರದ ವತಿಯಿಂದ ಅನುಷ್ಠಾನಗೊಳಿಸಲ್ಪಡುತ್ತಿದೆ. ಗ್ರಾಮೀಣಾ ಪ್ರದೇಶದಲ್ಲಿರುವ ಪ್ರತಿಯೊಂದು ಕುಟುಂಬದ ವಯಸ್ಕ ಸದಸ್ಯರುಗಳು ಸ್ವ-ಇಚ್ಛೆಯಿಂದ ಅಕುಶಲ ಕೆಲಸ ಕೇಳಿ ಅರ್ಜಿ ಸಲ್ಲಿಸಿದರೆ, ಒಂದು ಆರ್ಥಿಕ ವರ್ಷದಲ್ಲಿ ಪ್ರತಿ ಕುಟುಂಬಕ್ಕೆ ಕನಿಷ್ಠ ನೂರು ದಿನಗಳ ಕೂಲಿ ಸಹಿತ ಉದ್ಯೋಗವನ್ನು ಒದಗಿಸುವಂತೆ ಈ ಅಧಿನಿಯಮವು ಆಗ್ರಹಿಸುತ್ತದೆ. ಯೋಜನೆಯ ಅನುಷ್ಠಾನದ ಕ್ರಮ ವಿಧಾನಗಳನ್ನು ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಾಚರಣೆ ಮಾರ್ಗಸೂಚಿ-2013 (4ನೇ ಆವೃತ್ತಿ) ಮತ್ತು 2016ರ ವಾರ್ಷಿಕ ಪ್ರಧಾನ ಸುತ್ತೋಲೆಯಲ್ಲಿ ವಿಸ್ತೃತ ವಿವರಣೆಗಳಿರುತ್ತವೆ. ಈ ಕೆಳಕಂಡ ಕಾರ್ಯಕ್ರಮ / ವಿಧಾನಗಳನ್ನು ಅನುಸರಿಸಿ ರಾಜ್ಯದಲ್ಲಿ ಯೋಜನೆಯನ್ನು ಅನುಷ್ಠಾನಗೊಳಿಸಿ ನಿಗದಿತ ಅವಧಿಯೊಳಗೆ ಕೂಲಿ ಕಾರ್ಮಿಕರಿಗೆ ಉದ್ಯೋಗ ಒದಗಿಸುವುದಕ್ಕೆ ಹಾಗೂ ಸಕಾಲದಲ್ಲಿ ಕೂಲಿ ಸಂದಾಯ ಮಾಡುವುದಕ್ಕೆ ಈ ಯೋಜನೆಯ ಕಾರ್ಯಕರ್ತರು ಜವಾಬ್ದಾರಿಯುತರಾಗಿರುತ್ತಾರೆ.

ಮಹಾತ್ಮ ಗಾಂಧಿ ನರೇಗಾ ಅಧಿನಿಯಮ ಹಾಗೂ ಕಾರ್ಯಾಚರಣೆ ಮಾರ್ಗಸೂಚಿಗಳಲ್ಲಿ ಅವಕಾಶ ಮಾಡಿರುವಂತೆ ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿವಾರ್ಹಕ ಅಧಿಕಾರಿಯು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯಾಗಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ಕಾರ್ಯಕ್ರಮಾಧಿಕಾರಿಯಾಗಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ/ ಪಂಚಾಯತ್ ಕಾರ್ಯದರ್ಶಿ ಯೋಜನೆಯ ಅನುಷ್ಠಾನದ ಜವಾಬ್ದಾರಿ ಹೊಂದಿ ಕಾರ್ಯ ನಿರ್ವಹಿಸುವರು. ಯೋಜನೆಯ ಅನುಷ್ಠಾನವು ಈ ಕೆಳಕಂಡ ಕ್ರಮವಿಧಾನಗಳನ್ವಯ ವ್ಯವಸ್ಥಿತವಾಗಿ ಕಾರ್ಯಾಚರಣೆಗೊಳ್ಳುತ್ತದೆ:

(ಅ) 10 ರಿಂದ 20 ಕೂಲಿಕಾರರನ್ನೊಳಗೊಂಡ **ಕಾಯಕ ಸಂಘಗಳನ್ನು** ಸಂಘಟಿಸಿ ಅವರಲ್ಲಿ ಗ್ರಾಮ ಪಂಚಾಯಿತಿಗೆ ಕನಿಷ್ಠ ಒಬ್ಬರಂತೆ **ಕಾಯಕ ಬಂಧುವನ್ನು** ಆಯ್ಕೆ ಮಾಡಿಕೊಂಡು, ಕೆಲಸದ ಬೇಡಿಕೆ ಉಂಟು ಮಾಡುವ ಮೂಲಕ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು. e-NMR ಅನ್ನು ಹೊರಡಿಸಿ, ವಾರದ ಸಭೆ ನಡೆಸಿ ಮುಕ್ತಾಯಗೊಂಡ ಕಾಮಗಾರಿಗಳ ಬಿಲ್ಲುಗಳು ತಯಾರಿಕೆಯಾಗುವ ಹಾಗೂ ಅದಕ್ಕನುಸಾರ ಕೂಲಿ ಸಂದಾಯವಾಗಿರುವುದನ್ನು ಖಚಿತ ಪಡಿಸಿಕೊಳ್ಳಲಾಗುವುದು..

(ಆ) **ಪಂಚಾಯತ್ ಅಭಿವೃದ್ಧಿ ಅಧಿಕಾರಿ**ಯು ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಠಾನಕ್ಕೆ ಪ್ರಾಥಮಿಕ ಭಾದ್ಯಸ್ಥರಾಗಿದ್ದು, ಉದ್ಯೋಗ ಚೀಟಿಯನ್ನು ವಿತರಿಸಲು, ಗ್ರಾಮಸಭೆ/ ವಾರ್ಡ್ ಸಭೆ ನಡೆಸಲು ಹಾಗೂ ಅನುಮೋದಿತ ಕಾಮಗಾರಿಗಳನ್ನು ಪ್ರಾರಂಭಿಸಲು ಜವಾಬ್ದಾರಿ ಹೊಂದಿರುವರು.

(ಇ) ಪಂಚಾಯತ್ ಅಭಿವೃದ್ಧಿ ಅಧಿಕಾರಿಯು ಪ್ರತಿ ವಾರದ ಸಭೆಯಲ್ಲಿ ಭಾಗವಹಿಸಿ, e-NMR ಪಟ್ಟಿಯು ಕ್ರಮಬದ್ಧವಾಗಿರುವುದನ್ನು, ಮುಂದುವರಿದಿರುವ ಕಾಮಗಾರಿಗಳ ಪ್ರಗತಿಯನ್ನು ಮೋಬೈಲ್ ಆ್ಯಪ್‌ನಲ್ಲಿ ಆರೋಹಣವಾಗಿರುವುದನ್ನು ಖಚಿತಪಡಿಸಿಕೊಳ್ಳುವರು.

(ಈ) **ಇಂಜಿನಿಯರವರು / ಕೃಷಿ ಪದವೀಧರರು** ವಾರದ ಸಭೆಯಲ್ಲಿ ಭಾಗವಹಿಸಿ ಕಾಮಗಾರಿ ಬಿಲ್ಲುಗಳನ್ನು ಸಲ್ಲಿಸಲು ಕ್ರಮ ವಹಿಸಿರುವುದನ್ನು, ಸಮುದಾಯ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ತಯಾರಿಸಿರುವ ಕಾಮಗಾರಿ ಬಿಲ್ಲುಗಳು ಅಳತೆಗನುಗುಣವಾಗಿ ಇರುವುದನ್ನು ಹಾಗೂ ಮಸ್ಟರ್ ರೋಲ್ಸ್‌ಗಳು ಮುಕ್ತಾಯಗೊಂಡಿರುವುದನ್ನು ಹಾಗೂ ವಾರಕ್ಕೊಮ್ಮೆ ಕೂಲಿ ಸಂದಾಯವಾಗುವುದನ್ನು ಖಚಿತಪಡಿಸಿಕೊಳ್ಳುವರು.

(ಉ) ಹೊರಗುತ್ತಿಗೆಯ ಇಂಜಿನಿಯರ್, ಕೃಷಿ / ತೋಟಗಾರಿಕೆ / ಅರಣ್ಯ ಪದವೀಧರರು/ ಅನುಷ್ಠಾನ ಇಲಾಖೆಗಳ ಸಿಬ್ಬಂದಿ ವರ್ಗದವರು ವಾರದ ಸಭೆಗಳಲ್ಲಿ ಭಾಗವಹಿಸಿ ಅವರವರ ವ್ಯಾಪ್ತಿಯ ಕಾಮಗಾರಿಗಳ ಪ್ರಗತಿಯ ವಿವರಣೆ ನೀಡುವರು.

(ಊ) ಸಹಾಯಕ ನಿರ್ದೇಶಕರು ಯೋಜನೆಯ ಪೂರ್ಣಕಾಲಿಕ ಮೇಲ್ವಿಚಾರಕರಾಗಿದ್ದು, ತಿಂಗಳಲ್ಲಿ ಕನಿಷ್ಠ 18 ದಿನಗಳು ಕ್ಷೇತ್ರ ವೀಕ್ಷಣೆ ಕೈಗೊಳ್ಳುವರು. ಅಲ್ಲದೇ, ತಾಂತ್ರಿಕ ಸಹಾಯಕರಿಗೆ ಹಾಗೂ ಇತರ ಸಿಬ್ಬಂದಿಗೆ ಅಗತ್ಯ ನೆರವು ನೀಡುವರು. ಅವರು ಕೂಲಿ ದಿವಸ್ (ರೋಜ್‌ಗಾರ್ ದಿವಸ) ಸಂಘಟನೆಯ ಕುರಿತಾದ ವರದಿಯನ್ನು ಮೇಲಾಧಿಕಾರಿಗಳಿಗೆ ಸಲ್ಲಿಸುವರು.

(ಋ) ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಯು ಕಾರ್ಯಕ್ರಮಾಧಿಕಾರಿಯಾಗಿದ್ದು, ಯೋಜನೆಯ ಅನುಷ್ಠಾನದ ಸಂಪೂರ್ಣ ಜವಾಬ್ದಾರಿ ಹೊಂದಿದ್ದು, ಬೇಡಿಕೆ ಅನುಸಾರ ಅಕುಶಲ ಕೂಲಿಕಾರರಿಗೆ ಉದ್ಯೋಗ ನೀಡುವುದಕ್ಕೆ, ಸಕಾಲದಲ್ಲಿ ಕೂಲಿ ಸಂದಾಯವಾಗುವುದಕ್ಕೆ, ಕಾಮಗಾರಿಗಳ ಪ್ರಗತಿ ಸಾಧಿಸುವುದಕ್ಕೆ ಹಾಗೂ ವಾರದ ಸಭೆಗಳ ಪರಿವೀಕ್ಷಣೆ ಮಾಡುವುದಕ್ಕೆ ಹೊಣೆಗಾರರಾಗಿರುವರು. **ಕಾರ್ಯನಿರ್ವಾಹಕ ಅಧಿಕಾರಿಯು** ತಿಂಗಳಲ್ಲಿ ಕನಿಷ್ಠ 10 ಗ್ರಾಮ ಪಂಚಾಯಿತಿಗಳಿಗೆ ಭೇಟಿ ನೀಡಿ ಕಾಮಗಾರಿಗಳಿಗೆ ಸಂಬಂಧದ ಕಡತಗಳನ್ನು ಪರಿವೀಕ್ಷಿಸಿ ಯೋಜನೆಯ ಅನುಷ್ಠಾನವು ಕ್ರಮಬದ್ಧವಾಗಿ ನಡೆಯುತ್ತಿರುವುದನ್ನು ಧೃಡಪಡಿಸಿಕೊಳ್ಳುವರು. ಅಲ್ಲದೇ, ನಿಗದಿತ ಕಾಲಾವಧಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಕಾಮಗಾರಿಗಳ ತನಿಖೆ ಕೈಗೊಳ್ಳುವರು.

(ಎ) ಸಹಾಯಕ ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯು ಎಲ್ಲಾ ತಾಲ್ಲೂಕುಗಳು, ಗ್ರಾಮ ಪಂಚಾಯಿತಿಗಳು ಹಾಗೂ ಸಿಬ್ಬಂದಿಗಳಿಂದ ಕೂಲಿ ಸಂದಾಯ ಬಾಕಿ ಇರುವ, ತಾಂತ್ರಿಕ ಸಹಾಯಕರು ನಿಗದಿತ ಸಮಯದೊಳಗೆ ಹಿಂದಿರುಗಿಸದೇ ಇರುವ ಮಸ್ಟರ್ ರೋಲ್ಸ್‌ಗಳ ಕುರಿತಾದ ದೈನಂದಿನ ವರದಿಗಳನ್ನು ಪಡೆಯುವರು ಮತ್ತು ಮಾನವ ದಿನಗಳ ಸೃಜನೆಯಾಗಿರುವುದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಬಂಧಪಟ್ಟ DMIS & TMIS ಗಳಿಂದ ಪಡೆಯುವರು ಹಾಗೂ ಎಲ್ಲಾ ಸಿಬ್ಬಂದಿಯವರಿಗೆ ಸಕಾಲದಲ್ಲಿ ವೇತನ ಪಾವತಿಯಾಗುವುದನ್ನು ಖಚಿತ ಪಡಿಸಿಕೊಳ್ಳುವರು.

(ಏ) ಜಿಲ್ಲಾ ಪಂಚಾಯಿತಿಯ ಉಪಕಾರ್ಯದರ್ಶಿ / ಯೋಜನಾ ನಿರ್ದೇಶಕರು (ಮ.ಗಾ.ನರೇಗಾ ಉಸ್ತುವಾರಿಯ) ರವರು ತಾಲ್ಲೂಕು, ಗ್ರಾಮ ಪಂಚಾಯಿತಿ, ಸಿಬ್ಬಂದಿಯ ಕಾರ್ಯನಿರ್ವಹಣೆ ಪರಿವೀಕ್ಷಣೆಯ, ತಪ್ಪಿಸ್ಥರ ವಿರುದ್ಧ ಶಿಸ್ತುಕ್ರಮಕ್ಕೊಳಪಡಿಸುವ ಹಾಗೂ ಹಣ ಸಂದಾಯದ ಸಂಬಂಧದಲ್ಲಿ ಬ್ಯಾಂಕ್ ಮತ್ತು ರಾಜ್ಯ ಸರ್ಕಾರದೊಂದಿಗೆ ಸಮನ್ವಯತೆ ಸಾಧಿಸವ ಕೆಲಸ ನಿರ್ವಹಿಸುವರು. ಕನಿಷ್ಠ ವಾರಕ್ಕೊಮ್ಮೆಯಾದರೂ ತಾಲ್ಲೂಕಿಗೆ ಭೇಟಿ ನೀಡಿ ಕಾಮಗಾರಿಗಳು ನಡೆಯುತ್ತಿರುವುದನ್ನು ಪರಿವೀಕ್ಷಿಸಿ ತನಿಖೆ ಕೈಗೊಳ್ಳುವರು. ಅವರು ತಾಲ್ಲೂಕು ಪಂಚಾಯಿತಿಯ ಮತ್ತು ಇತರೆ ಸಿಬ್ಬಂದಿಯ ಸಂಬಂಧದಲ್ಲಿ ವಾರದ ವರದಿಯನ್ನು ಸಲ್ಲಿಸಲು ಕ್ರಮ ವಹಿಸುವರು. ಅಲ್ಲದೇ ಜಿಲ್ಲೆಯಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರೊಡಗೂಡಿ ಸಮನ್ವಯದೊಂದಿಗೆ ಕಾರ್ಯನಿರ್ವಹಿಸುವರು.

(ಐ) ಜಿಲ್ಲಾ ಪಂಚಾಯತ್, ಮುಖ್ಯ ಕಾರ್ಯನಿವಾಹಕ ಅಧಿಕಾರಿಯವರು ಜಿಲ್ಲಾ ಕಾರ್ಯಕ್ರಮ ಸಮನ್ವಯಾಧಿಕಾರಿಯಾಗಿದ್ದು, ಜಿಲ್ಲೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯು ಅನುಷ್ಠಾನಗೊಳಿಸುವುದರ ಸಂಪೂರ್ಣ ಜವಾಬ್ದಾರಿ ಹೊಂದಿರುವರು. ಅಲ್ಲದೇ ಕೂಲಿ ಹಾಗೂ ಸಾಮಾಗ್ರಿ ವೆಚ್ಚಗಳ ಸಂದಾಯದಲ್ಲಿ, ಹಾಜರಾತಿ ಪಟ್ಟಿ ವಿತರಣೆಯಲ್ಲಿ, ಕಾಮಗಾರಿ ಬಿಲ್ಲುಗಳ ತಯಾರಿಕೆಯ ಸಂಬಂಧದಲ್ಲಿ ಉದ್ಭವವಾಗುವ ಸಮಸ್ಯೆಗಳಿಗೆ ಪರಿಹಾರ ನೀಡುವ ಹಾಗೂ ಪ್ರತಿಯೊಂದು ಗ್ರಾಮ ಪಂಚಾಯಿತಿ ಮತ್ತು ಅನುಷ್ಠಾನ ಇಲಾಖೆಗಳ ಕ್ರಿಯಾ ಯೋಜನೆಗಳಿಗೆ

ಆಡಳಿತಾತ್ಮಕ ಅನುಮೋದನೆ ನೀಡಲು ಕ್ರಮ ವಹಿಸುವರು. ಅಲ್ಲದೇ ಇವುಗಳಿಗೆ ಸಂಬಂಧಿಸಿದಂತೆ ಕ್ಲಿಷ್ಟಕರ ಸಮಸ್ಯೆಗಳಿದ್ದಲ್ಲಿ ಅವುಗಳಿಗೆ ಪರಿಹಾರ ನೀಡಲು ಕ್ರಮ ವಹಿಸುವರು.


ಮಹಾತ್ಮ ಗಾಂಧಿ ನರೇಗಾ ಯೋಜನೆಯ ಅನುಷ್ಠಾನ ಸಂಬಂಧದಲ್ಲಿ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆ ಹೊಂದಿರುವ ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಂಬುಡ್ಸ್‌ಮನ್ ಆಯ್ಕೆ ಸಮಿತಿಯ ದಿನಾಂಕ:23.02.2016 ರಂದು ಜರುಗಿದ ಸಭೆಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯನ್ನು ಮತ್ತಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಬೇಕಾಗಿರುವುದರ ಅಗತ್ಯತೆಯನ್ನು ಮನಗಂಡು ಯೋಜನೆಯ ಅನುಷ್ಠಾನದ ಮೇಲ್ವಿಚಾರಣೆ, ಕುಂದುಕೊರತೆಗಳು ಮತ್ತು ದೂರುಗಳ ನಿವಾರಣಾ ಜವಾಬ್ಧಾರಿಯನ್ನು ಆಯಾಯ ವ್ಯಾಪ್ತಿಯ ಕಂದಾಯ ಉಪವಿಭಾಗಾಧಿಕಾರಿಗಳಿಗೆ ವಹಿಸಲು ನಿರ್ಣಯ ಕೈಗೊಂಡಿರುತ್ತದೆ.

ಮಹಾತ್ಮ ಗಾಂಧಿ ನರೇಗಾ ಯೋಜನೆಯ ಒಂಬುಡ್ಸ್‌ಮನ್ ಆಯ್ಕೆ ಸಮಿತಿಯ ಸದರಿ ನಿರ್ಣಯದನ್ವಯ ಕಂದಾಯ ಉಪವಿಭಾಗಾಧಿಕಾರಿಗಳಿಗೆ ಅವರ ಇತರೆ ಶಾಸನಬದ್ದ ಕರ್ತವ್ಯಗಳೊಂದಿಗೆ ಮಹಾತ್ಮ ಗಾಂಧಿ ನರೇಗಾ ಯೊಜನೆಯ ಅನುಷ್ಠಾನದ ಮೇಲ್ವಿಚಾರಣೆ ನಡೆಸುವ ಮತ್ತು ಸದರಿ ಯೋಜನೆಯ ಅನುಷ್ಠಾನಕ್ಕೆ ಸಂಬಂದಿಸಿದ ಈ ಕೆಳಕಂಡ ವಿಷಯಗಳ ಕಾರ್ಯನಿರ್ವಹಣೆಯ ಅಧಿಕಾರವನ್ನು ವಹಿಸಿದೆ.

ಅ. ಆಯಾಯ ಕಂದಾಯ ಉಪವಿಭಾಗದ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯು ಅಧಿನಿಯಮ ಹಾಗೂ ಕಾರ್ಯಾಚರಣೆ ಮಾರ್ಗಸೂಚಿಗಳನ್ವಯ ಅನುಷ್ಠಾನಗೊಳ್ಳುತ್ತಿರುವುದರ ಮೇಲ್ವಿಚಾರಣೆ ವಹಿಸುವುದು. ಕರ್ತವ್ಯ ನಿರ್ವಹಿಸುವುದರೊಂದಿಗೆ ಯೋಜನೆಯ ಅನುಷ್ಠಾನದಲ್ಲಿ ಗ್ರಾಮ ಪಂಚಾಯಿತಿಯ ಓಂಬುಡ್ಸಮನ್‌ರಾಗಿಯೂ ಸಹ ಕಾರ್ಯನಿರ್ವಹಿಸುವುದು.

ಆ. ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ವೀಕೃತವಾಗುವ ಅರ್ಜಿಗಳು ಮನವಿಗಳು, ದೂರುಗಳ ಬಗ್ಗೆ ಪರಿಶೀಲಿಸಿ ನಿವಾರಣೆಗೆ ಕ್ರಮ ಕೈಗೊಳ್ಳುವುದು. ಕೈಗೊಂಡ ಕ್ರಮದ ವರದಿಯನ್ನು ಗ್ರಾಮೀಣಾಭಿವೃದ್ಧಿ ಆಯುಕ್ತರು, ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ ಇವರಿಗೆ ನೀಡುವುದು ಹಾಗೂ ಸಂಬಂದಪಟ್ಟ ಜಿಲ್ಲಾಧಿಕಾರಿಯವರಿಗೂ ಮಾಹಿತಿ ಒದಗಿಸುವುದು.

ಇ. ಮಹಾತ್ಮ ಗಾಂಧಿ ನರೇಗಾ ಯೋಜನೆಯು ಅಧಿನಿಯಮ ಹಾಗೂ ಕಾರ್ಯಾಚರಣೆ ಮಾರ್ಗಸೂಚಿಗಳಲ್ಲಿ ನಿಗದಿ ಪಡಿಸಿರುವ ಕ್ರಮ ವಿಧಾನಗಳನ್ವಯ ಜರುಗುತ್ತಿರುವುದರ ಕುರಿತು ಸ್ವಯಂ ಪ್ರೇರಿತರಾಗಿ ಪರಿವೀಕ್ಷಿಸುವುದು ಹಾಗೂ ಸದರಿ ಪರಿವೀಕ್ಷಣೆಯಲ್ಲಿ ಯೋಜನೆಯ ಅನುಷ್ಠಾನದಲ್ಲಿ ಯಾವುದಾದರೂ ಲೋಪದೋಷಗಳು, ಅಕ್ರಮಗಳು, ಹಣದುರುಪಯೋಗದ ಪ್ರಕರಣಗಳು ಕಂಡು ಬಂದಲ್ಲಿ ಆ ಕುರಿತು ಗ್ರಾಮೀಣಾಭಿವೃದ್ಧಿ ಆಯುಕ್ತರಿಗೆ ವರದಿ ಮಾಡುವುದು.



(ಅರವಿಂದ್ ಜಾಧವ್)
ಮುಖ್ಯ ಕಾರ್ಯದರ್ಶಿ
ಕರ್ನಾಟಕ ಸರ್ಕಾರ

ಸುತ್ತೋಲೆ

## ಕರ್ನಾಟಕ ಸರ್ಕಾರ

ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಇಲಾಖೆ
2ನೇ ಮಹಡಿ, 3 ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು-1.
ದಿನಾಂಕ: 06.07.2016

ಸಂಖ್ಯೆ: ಗ್ರಾಅಪ 199 ಉಖಾಯೋ 2016

# ಸುತ್ತೋಲೆ

**ವಿಷಯ:** ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಶೇಕಡಾ 40ರಷ್ಟಿನ ಸಾಮಗ್ರಿ ಘಟಕದ ಮಿತಿಯನ್ನು ಜಿಲ್ಲಾ ಮಟ್ಟದಲ್ಲಿ ಮೀರುವಂತಿಲ್ಲ ಎಂಬುದರ ಕುರಿತು ಸೂಚನೆಗಳನ್ನು ನೀಡುವ ಬಗ್ಗೆ.

**ಉಲ್ಲೇಖ:**

1. ಜಂಟಿ ಕಾರ್ಯದರ್ಶಿ (MGNREGA) ಕೇಂದ್ರ ಸರ್ಕಾರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ಇವರು ಹೊರಡಿಸಿರುವ ಸುತ್ತೋಲೆ ಪತ್ರದ ಸಂಖ್ಯೆ:

   J-11012/01/2015-RE-I (FTS- 345456) ದಿನಾಂಕ: 29-06-2016

2. ಮಹಾತ್ಮ ಗಾಂಧಿ ನರೇಗಾ ಅಧಿನಿಯಮದ ಪರಿಷ್ಕೃತ ಅನುಸೂಚಿ-Iರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಅಧಿಸೂಚನೆಯ ದಿನಾಂಕ: 20-12-13
3. 2016-17ನೇ ಸಾಲಿಗೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ಹೊರಡಿಸಿರುವ ವಾರ್ಷಿಕ ಪ್ರಧಾನ ಸುತ್ತೋಲೆಯ ಕಿರುಹೊತ್ತಿಗೆ

**********

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಸಂಬಂಧಿಸಿದಂತೆ, ಕಾಮಗಾರಿಗಳ ಅನುಷ್ಠಾನದಲ್ಲಿ ಕೂಲಿ ಮತ್ತು ಸಾಮಗ್ರಿಗಳ 60:40ರ ಅನುಪಾತವನ್ನು ಕಡ್ಡಾಯವಾಗಿ ಪಾಲಿಸುವ ವಿಷಯವು ತಮಗೆ ತಿಳಿಸಿರುತ್ತದೆ. ಉಲ್ಲೇಖ(2)ರಲ್ಲಿ ಅಧಿನಿಯಮದ ಪರಿಷ್ಕೃತ ಅನುಸೂಚಿ-ಖರಲ್ಲಿ ಗ್ರಾಮ ಪಂಚಾಯತಿಗಳು ಕೈಗೊಳ್ಳುವ ಎಲ್ಲಾ ಕಾಮಗಾರಿಗಳ ಸಾಮಗ್ರಿ ಘಟಕದಲ್ಲಿ ಕುಶಲ ಮತ್ತು ಅರೆಕುಶಲ ಕಾರ್ಮಿಕರ ಕೂಲಿದರಗಳು ಸೇರಿದಂತೆ, ಗ್ರಾಮ ಪಂಚಾಯತಿಯ ಮಟ್ಟದಲ್ಲಿ ಶೇಕಡಾ 40ರಷ್ಟು ಮೀರುವಂತಿಲ್ಲವೆಂದು ಮತ್ತು ಗ್ರಾಮ ಪಂಚಾಯತಿಗಳು ಹೊರತುಪಡಿಸಿ, ಇತರೆ ಅನುಷ್ಠಾನ ಸಂಸ್ಥೆಗಳು ಕೈಗೊಳ್ಳುವ ಕಾಮಗಾರಿಗಳ ಸಾಮಗ್ರಿ ಘಟಕದಲ್ಲಿ ಕುಶಲ ಮತ್ತು ಅರೆಕುಶಲ ಕಾರ್ಮಿಕರ ಕೂಲಿದರಗಳು ಸೇರಿದಂತೆ ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ಶೇಕಡಾ 40ರಷ್ಟು ಮೀರುವಂತಿಲ್ಲವೆಂದು ತಿಳಿಸಲಾಗಿರುತ್ತದೆ.


ಈಗ 2016-17ನೇ ಸಾಲಿಗೆ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು ಉಲ್ಲೇಖ(3)ರಲ್ಲಿ ಹೊರಡಿಸಿರುವ ವಾರ್ಷಿಕ ಪ್ರಧಾನ ಸುತ್ತೋಲೆಯಲ್ಲಿ ಕೂಲಿ ಸಾಮಗ್ರಿಗಳ ಅನುಪಾತಕ್ಕೆ ಸಂಬಂಧಿಸಿದ ಕಂಡಿಕೆ 2.5.1.2ರಲ್ಲಿ ಗ್ರಾಮ ಪಂಚಾಯತಿಗಳು ಕೈಗೊಳ್ಳುವ ಎಲ್ಲಾ ಕಾಮಗಾರಿಗಳ ಸಾಮಗ್ರಿ ಘಟಕವು ಕುಶಲ ಮತ್ತು ಅರೆಕುಶಲ ಕಾರ್ಮಿಕರ ಕೂಲಿದರಗಳು ಸೇರಿದಂತೆ ಗ್ರಾಮ ಪಂಚಾಯತಿ ಮಟ್ಟದಲ್ಲಿ ಶೇಕಡಾ 40ರಷ್ಟಿನ ಮಿತಿಯನ್ನು ಮೀರಬಾರದು. ಇತರೆ ಅನುಷ್ಠಾನದ ಸಂಸ್ಥೆಗಳು ಮತ್ತು ಗ್ರಾಮ ಪಂಚಾಯತಿಗಳು ಒಟ್ಟಾರೆ ಅನುಷ್ಠಾನಕ್ಕೆ ಕೈಗೊಳ್ಳುವ ಎಲ್ಲಾ ಕಾಮಗಾರಿಗಳ ಸಾಮಗ್ರಿ ಘಟಕದವು ಕುಶಲ ಮತ್ತು ಅರೆಕುಶಲ ಕಾರ್ಮಿಕರ ಕೂಲಿದರಗಳು ಸೇರಿದಂತೆ ಜಿಲ್ಲಾ ಮಟ್ಟದಲ್ಲಿ ಶೇಕಡಾ 40ರಷ್ಟು ಮೀರಬಾರದು ಎಂದು ಸೂಚಿಸಿರುತ್ತದೆ.

ಏತನ್ಮಧ್ಯೆ, ಉಲ್ಲೇಖ(1)ರಲ್ಲಿ ಕೇಂದ್ರ ಸರ್ಕಾರದ ಗ್ರಾಮೀಣಾಭಿವೃದ್ಧಿ ಮಂತ್ರಾಲಯದವರು 2016-17ನೇ ಸಾಲಿಗೆ ಹೊರಡಿಸಿರುವ ವಾರ್ಷಿಕ ಪ್ರಧಾನ ಸುತ್ತೋಲೆಯ ಕಂಡಿಕೆ 2.5.1.2ನ್ನು ಮಾರ್ಪಾಡಿಸಿ ಈ ಕೆಳಗಿನಂತೆ ಓದಿಕೊಳ್ಳಲು

ಸೂಚಿಸಿರುತ್ತದೆ.

"ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಕ್ರಮವಾಗಿ ಗ್ರಾಮ ಪಂಚಾಯತಿಗಳು ಮತ್ತು ಇತರೆ ಅನುಷ್ಠಾನ ಸಂಸ್ಥೆಗಳು ಕೈಗೊಳ್ಳುವ ಎಲ್ಲಾ ಕಾಮಗಾರಿಗಳ ಸಾಮಗ್ರಿ ಘಟಕ ಕುಶಲ ಮತ್ತು ಅರೆಕುಶಲ ಕಾರ್ಮಿಕರ ಕೂಲಿ ದರಗಳು ಸೇರಿದಂತೆ ಜಿಲ್ಲಾ ಮಟ್ಟದಲ್ಲಿ ಶೇಕಡಾ 40ರ ಅನುಪಾತದ ಮಿತಿಯು ಮೀರಬಾರದು".

ಈ ಸಂಬಂಧ ಉಲ್ಲೇಖ(1)ರಲ್ಲಿ ಸ್ವೀಕರಿಸಿದ ಕೇಂದ್ರ ಸರ್ಕಾರದ ಸುತ್ತೋಲೆ ಪತ್ರದ ಪ್ರತಿಯನ್ನು ಇದರೊಂದಿಗೆ ಮುಂದಿನ ಕ್ರಮಕ್ಕಾಗಿ ಹಾಗೂ ಮಾರ್ಗದರ್ಶನಕ್ಕಾಗಿ ಯಾವುದೇ ಗೊಂದಲಗಳು ಇದ್ದಲ್ಲಿ ಅರ್ಥೈಸಿಕೊಳ್ಳಲು ಲಗತ್ತಿಸಿ ಕಳುಹಿಸಿದೆ.



ಆಯುಕ್ತರು ಗ್ರಾಮೀಣಾಭಿವೃದ್ಧಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

## ಕರ್ನಾಟಕ ಸರ್ಕಾರ

ಸುತ್ತೋಲೆ

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ:16.08.2016

ಸಂಖ್ಯೆ: ಗ್ರಾಅಪ 738 ಗ್ರಾಪಂಕಾ 2016

# ಸುತ್ತೋಲೆ

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ರವರ ಅಧ್ಯಕ್ಷತೆಯಲ್ಲಿ ದಿನಾಂಕ 16.06.2015 ರಂದು ನಡೆದ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮದ ರಾಜ್ಯ ಮಟ್ಟದ ಚಾಲನಾ ಮತ್ತು ಪರಾಮರ್ಶ ಸಮಿತಿ ಸಭೆಯಲ್ಲಿ ಅಕ್ಷರ ದಾಸೋಹ ಕಾರ್ಯಕ್ರಮ ಅನುಷ್ಠಾನ ಕುರಿತು ಚರ್ಚಿಸಲಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ಸಂಬಂಧಿಸಿದ ಕೆಳಗಿನ ವಿಷಯಗಳ ಬಗ್ಗೆ ಸೂಕ್ತ ಕ್ರಮವಹಿಸಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ತಿಳಿಸಿದೆ.

1) ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ(ಎಸ್.ಡಿ.ಎಂ.ಸಿ.) ಗಳು ಮಧ್ಯಾಹ್ನ ಉಪಹಾರ ಯೋಜನೆಯ ಮೇಲುಸ್ತುವಾರಿಯನ್ನು ನಡೆಸುತ್ತಿದ್ದು, ಸಮರ್ಪಕವಾಗಿ ಆಗುತ್ತಿಲ್ಲವೆಂಬ ಅಭಿಪ್ರಾಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಈ ಹಿನ್ನೆಲೆಯಲ್ಲಿ, ಮಧ್ಯಾಹ್ನ ಉಪಹಾರ ಯೋಜನೆಯ ಮೇಲುಸ್ತುವಾರಿ ನಡೆಸುವ ಸಮಯದಲ್ಲಿ ಗಮನಿಸಬೇಕಾದ ಅಂಶಗಳ ಕುರಿತು ಚೆಕ್‌ಲಿಸ್ಟ್‌ನ್ನು ತಯಾರಿಸುವುದು. ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಶಾಲೆಗಳನ್ನು ಭೇಟಿ ನೀಡಿದ ಸಂದರ್ಭದಲ್ಲಿ ಸದರಿ ಚೆಕ್‌ಲಿಸ್ಟ್‌ನಲ್ಲಿರುವ ಅಂಶಗಳ ಬಗ್ಗೆ ಪರಿಶೀಲಿಸಿ, ಮಧ್ಯಾಹ್ನ ಉಪಹಾರ ಯೋಜನೆಯ ಮೇಲುಸ್ತುವಾರಿ ನಡೆಸಲು ಅಗತ್ಯ ಕ್ರಮವಹಿಸುವುದು.

2) ಮಧ್ಯಾಹ್ನ ಉಪಹಾರ ಯೋಜನೆಗೆ ಸಂಬಂಧಿಸಿದಂತೆ ಆಹಾರ ಧಾನ್ಯಗಳನ್ನು ಸಂಗ್ರಹಿಸಿಡಲು ಶೇಖರಣಾ ಡಬ್ಬಿಗಳು, ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಹಾಗೂ ಇನ್ನಿತರೆ ಮೂಲಭೂತ ಸೌಕರ್ಯಗಳನ್ನು ಸಮುದಾಯ ಬಳಕೆ ಹಾಗೂ ಖಾಸಗಿ ವಲಯದ ಸಹಭಾಗಿತ್ವದಲ್ಲಿ ಒದಗಿಸಿಕೊಳ್ಳಲು ಅಗತ್ಯ ಕ್ರಮವಹಿಸುವಂತೆ ಸಂಬಂಧಪಟ್ಟವರಿಗೆ ಸೂಕ್ತ ನಿರ್ದೇಶನ ನೀಡುವುದು.

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

# ಕರ್ನಾಟಕ ಸರ್ಕಾರ

ಸಂಖ್ಯೆ: ಗ್ರಾಅಪ 754 ಗ್ರಾಪಂಅ 2016

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 22-08-2016

**ಇವರಿಂದ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್),
ಗ್ರಾಮೀಣ ಅಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ,
ಬೆಂಗಳೂರು.

**ಇವರಿಗೆ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತಿಗಳು,

ಮಾನ್ಯರೆ,

**ವಿಷಯ** : ಗ್ರಾಮ ಪಂಚಾಯತಿಗಳು ಭೂಮಿ ಮತ್ತು ಕಟ್ಟಡಗಳ ಮೇಲೆ ಸಂಗ್ರಹಿಸುವ ತೆರಿಗೆ ಮೊತ್ತದ ಮೇಲೆ ವಿಧಿಸುವ ಉಪಕರದ ಮೊತ್ತವನ್ನು ನಿಯಮ ಬಾಹಿರವಾಗಿ ಉಪಯೋಗಿಸಿ ಕೊಂಡಿರುವ ಬಗ್ಗೆ.

**ಉಲ್ಲೇಖ** : 1. ಸರ್ಕಾರದ ಸುತ್ತೋಲೆ ಸಂಖ್ಯೆ: ಗ್ರಾಅಪ 380 ಗ್ರಾಪಂಅ 2002 ದಿನಾಂಕ:24-05-2003.

2. ದಿನಾಂಕ: 31-03-2014 ಕ್ಕೆ ಅಂತ್ಯಗೊಂಡ ಸಿ & ಎಜಿ ರವರ ಸ್ಥಳೀಯ ಸಂಸ್ಥೆಗಳ ವರದಿಯಲ್ಲಿನ ಕಂಡಿಕೆ 2.3

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರ ಸರ್ಕಾರದ ಸುತ್ತೋಲೆಯಲ್ಲಿ ಗ್ರಾಮ ಪಂಚಾಯತಿಗಳು ಭೂಮಿ ಮತ್ತು ಕಟ್ಟಡಗಳ ಮೇಲೆ ಸಂಗ್ರಹಿಸುವ ತೆರಿಗೆ ಮೊತ್ತದ ಮೇಲೆ ಈ ಕೆಳಕಂಡ 3 ಉಪಕರಗಳನ್ನು ತಪ್ಪದೆ ವಸೂಲಿ ಮಾಡಿ ಸಂಬಂಧಿಸಿದವರಿಗೆ ಪಾವತಿಸಲು ಸೂಚಿಸಲಾಗಿದೆ.

| | | |
|---|---|---|
| 1. | ಶಿಕ್ಷಣ ಉಪಕರ | – ಶೇ 10 |
| 2. | ಆರೋಗ್ಯ ಉಪಕರ | – ಶೇ 15 |
| 3. | ಗ್ರಂಥಾಲಯ ಉಪಕರ | – ಶೇ 6 |
| | **ಒಟ್ಟು** | **ಶೇ 31** |

ದಿನಾಂಕ: 31-03-2014 ಕ್ಕೆ ಅಂತ್ಯಗೊಂಡ ಸಿ & ಎಜಿ ರವರ ಸ್ಥಳೀಯ ಸಂಸ್ಥೆಗಳ ವರದಿಯಲ್ಲಿನ ಕಂಡಿಕೆ 2.3 ರಲ್ಲಿ ಪರೀಕ್ಷಾ-ಪರಿಶೀಲನೆ ಮಾಡಲಾದ 40 ಗ್ರಾಮ ಪಂಚಾಯತಿಗಳಲ್ಲಿ 2009-14ನೇ ಅವಧಿಯಲ್ಲಿ ಆರೋಗ್ಯ (ರೂ. 4.16 ಕೋಟಿ), ಶಿಕ್ಷಣ (ರೂ.2.76 ಕೋಟಿ) ವಾಚನಾಲಯ (ರೂ. 1.65 ಕೋಟಿ) ಹಾಗೂ ಭಿಕ್ಷಾಟಣೆ (ರೂ. 0.58 ಕೋಟಿ) ಈ ರೀತಿಯಾಗಿ ಸಂಗ್ರಹಿಸಲಾದ ಒಟ್ಟು ರೂ. 9.15 ಕೋಟಿ ಉಪಕರ ಮೊತ್ತವನ್ನು ಗ್ರಾಮ ಪಂಚಾಯಿತಿಗಳು ಸಂಬಂಧಿತ ಇಲಾಖೆಗಳಿಗೆ ವರ್ಗಾಯಿಸದೆ ನಿಯುಮುಬಾಹಿರವಾಗಿ ಉಪಯೋಗಿಸಿಕೊಂಡಿರುವುದು ಕಂಡು ಬಂದಿರುತ್ತದೆ.

**ದಿನಾಂಕ: 31–03–2014 ಕ್ಕೆ ಅಂತ್ಯಗೊಂಡ ಸಿ & ಎಜಿ ರವರ ವರದಿಯಂತೆ ಗ್ರಾಮ ಪಂಚಾಯಿತಿಗಳು ಈ ರೀತಿ ಉಪಕರ ಮೊತ್ತವನ್ನು ಸಂಬಂಧಿಸಿದ ಇಲಾಖೆಗಳಿಗೆ ವರ್ಗಾಯಿಸದೆ ಬಳಸಿಕೊಂಡಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ಸಂಬಂಧಿಸಿದ ಗ್ರಾಮ ಪಂಚಾಯಿತಿಗಳ ಮೇಲೆ ಕ್ರಮ ಕೈಗೊಳ್ಳಲು ಸರ್ಕಾರವು ಉದ್ದೇಶಿಸಿದೆ.**


ಆದುದರಿಂದ ದಿನಾಂಕ: 31–03–2014 ಕ್ಕೆ ಅಂತ್ಯಗೊಂಡ ಸಿ & ಎಜಿ ರವರ ಸ್ಥಳೀಯ ಸಂಸ್ಥೆಗಳ ವರದಿಯಲ್ಲಿನ ಕಂಡಿಕೆ 2.3 ರಲ್ಲಿ ಪರೀಕ್ಷಾ–ಪರಿಶೀಲನೆ ಮಾಡಲಾದ 40 ಗ್ರಾಮ ಪಂಚಾಯತಿಗಳು 2009–14ನೇ ಅವಧಿಯಲ್ಲಿನ ಉಪಕರದ ಮೊತ್ತವನ್ನು ಸಂಬಂಧಿತ ಇಲಾಖೆಗಳಿಗೆ ಜಮಾ ಮಾಡಲು ಕೂಡಲೇ ಕ್ರಮ ವಹಿಸುವಂತೆ ತಿಳಿಸಿದೆ.

ಮುಂದುವರೆದು, ರಾಜ್ಯದ ಎಲ್ಲಾ **ಗ್ರಾಮ ಪಂಚಾಯತಿಗಳು ಇನ್ನು ಮುಂದೆ ಇಂತಹ ಪ್ರಕರಣಗಳಿಗೆ ಆಸ್ಪದ ಕಲ್ಪಿಸದೆ ಭೂಮಿ ಮತ್ತು ಕಟ್ಟಡಗಳ ಮೇಲೆ ಸಂಗ್ರಹಿಸುವ ತೆರಿಗೆ ಮೊತ್ತದ ಮೇಲೆ ಈ ಕೆಳಕಂಡ 4 ಉಪಕರಗಳನ್ನು ತಪ್ಪದೆ ವಸೂಲಿ ಮಾಡಿ ಸಂಬಂಧಿಸಿದ ಇಲಾಖೆಗಳಿಗೆ ಪಾವತಿಸಲು ಕ್ರಮ ವಹಿಸುವಂತೆ ಕೋರಿದೆ.**

| | | | |
|---|---|---|---|
| 1. | ಶಿಕ್ಷಣ ಉಪಕರ | – | ಶೇ 10 |
| 2. | ಆರೋಗ್ಯ ಉಪಕರ | – | ಶೇ 15 |
| 3. | ಗ್ರಂಥಾಲಯ ಉಪಕರ | – | ಶೇ 6 |
| 4. | ಭಿಕ್ಷುಕರ ಕರ | – | ಶೇ 3 |
| | **ಒಟ್ಟು** | | **ಶೇ 34** |

(ಎಂ.ಕೆ.ಕೆಂಪೇಗೌಡ)
ನಿರ್ದೇಶಕರು(ಪಂ.ರಾಜ್) ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ದಿನಾಂಕ:20.08.2016 ರಂದು ನಮ್ಮ ಗ್ರಾಮ  ನಮ್ಮ ಯೋಜನೆ ಪುಸ್ತಕ ಬಿಡುಗಡೆ ಕುರಿತ ಛಾಯಾಚಿತ್ರಗಳು





# KARNATAKA VIKAS : SEPTEMBER 2016

A Monthly Magazine for Rural Development and Panchayath Raj Department, Government of Karnataka
Regd. KA / BGGPO / 2531 / 2015-17, License to Post "without Prepayment" WPP - 32
RNI No. : 28103 / 1974 Total No. Pages 52, Posted at Bengaluru PSO, Mysore Road,
Bengaluru on 9th, 10th, 11th of Every Month






Published & Owned by :
**DIRECTOR**
**(PANCHAYAT RAJ)**
Rural Development and
Panchayat Raj Department

Name of the Editor
**Y. Mahankalappa**

Place & Publication
**Karnataka Vikas**
No. 309, 3rd Floor, Gate No.1
M.S. Building, Dr. Ambedkar Veedhi,
Bengaluru - 560 001.

Printed by
**KAVERI PRINTS INDIA**
Chamaraja Pete
Bengaluru, Karnataka
Mob:+91 95919 88347

Price : ಬೆಲೆ : 10.00